# ಅಪರಂಜಿ

ತಿಳಿನಗೆಯ ಕಾರಂಜಿ

ಜೂನ್ 2022




ಬಿಡಿ ಪ್ರತಿ: ರೂ. 10/-

**ಸಂಪಾದಕ ಮಂಡಳಿ**

**ಸಂಪಾದಕರು**

ಶ್ರೀ ಎಂ. ಶಿವಕುಮಾರ್

**ಉಪ ಸಂಪಾದಕರು**

ಶ್ರೀ ಬೇಲೂರು ರಾಮಮೂರ್ತಿ

**ಸದಸ್ಯರು**

ಶ್ರೀ ಎಚ್.ಎನ್. ಆನಂದ

ಶ್ರೀ ಎಚ್. ಗೋಪಾಲಕೃಷ್ಣ

**ಆಡಳಿತ ಮಂಡಳಿ**

**ಮ್ಯಾನೇಜಿಂಗ್ ಟ್ರಸ್ಟಿ**

ಶ್ರೀ ಉಲ್ಲಾಸ ರಾಯಸಂ

**ಟ್ರಸ್ಟಿಗಳು**

ಶ್ರೀ ಎಂ ಶಿವಕುಮಾರ್

ಶ್ರೀ ಬೇಲೂರು ರಾಮಮೂರ್ತಿ

ಶ್ರೀ ಎಚ್.ಎನ್. ಆನಂದ

ಶ್ರೀ ಸಿ.ಆರ್. ಸತ್ಯ

ಶ್ರೀ ಕೆ. ರವೀಂದ್ರ ರಾವ್

ಶ್ರೀ ವಿ. ಆರ್. ಭರತ್

**ಚಂದಾ ವಿವರ:**

**ಬಿಡಿ ಪ್ರತಿ: ರೂ. 10/-**

**ವಾರ್ಷಿಕ ಚಂದಾ: ರೂ. 100/-**

**ಹತ್ತು ವರ್ಷದ ಚಂದಾ: ರೂ. 750-**

ಸಂಪರ್ಕ ಸಮಯ:

ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

ಚಂದಾ ಹಣದ ಚೆಕ್/ಡ್ರಾಫ್ಟ್‌ಗಳನ್ನು ಕೊರವಂಜಿ ಅಪರಂಜಿ ಟ್ರಸ್ಟ್ ಹೆಸರಿಗೆ ನಮೂದಿಸಿ ಈ ಕೆಳಕಂಡ ವಿಳಾಸಕ್ಕೆ ಕಳುಹಿಸಿ:

ಮನಿ ಆರ್ಡರ್ ಸ್ವೀಕರಿಸಲಾಗುವುದಿಲ್ಲ.



# ಅಪರಂಜಿ

ತಿಳಿನಗೆಯ ಕಾರಂಜಿ

**ಸಂಪುಟ 39**

**ಸಂಚಿಕೆ - 9**

**ಜೂನ್ - 2022**

## *ಈ ಸಂಚಿಕೆಯಲ್ಲಿ.....*


| | | |
|---|---|---|
| ಅಪರಂಜಿ ಕಿಡಿ | ಪ್ರಕಾಶ್ | 2 |
| ನಮ್ಮನಮ್ಮಲ್ಲಿ | ಶಿವಕುಮಾರ್ | 3 |
| ಹಣಮಂತುವಿನ ಆಣಿಮುತ್ತುಗಳು | ನಾಗರತ್ನ ಸಾಲಗಾಮೆ | 6 |
| ಬನ್ನಿ, ಜಾತ್ರೆಗೆ ಹೋಗೋಣ | ಸಿ.ಆರ್. ಸತ್ಯ | 9 |
| ಎಡೆಬಿಡಂಗಿ | ಕೆ.ಎಸ್. ಶ್ರೀಶೈಲನ್ | 12 |
| ಆಟೊ ಚಾಲಕರ ಚಾಣಾಕ್ಷತೆ | ಕೆ.ಎನ್. ಸುಬ್ಬರಾವ್ | 14 |
| ಮಡದಿಯ ಬೈಗುಳ | ಎಚ್. ಡುಂಡಿರಾಜ್ | 16 |
| ದುಡ್ಡು ಎಣಿಸೋ ದುರ್ದೈವ | ಕವಿತಾ ಹೆಗಡೆ ಅಭಯಂ | 17 |
| ಬೋಂಡಾ ಶಿವ | ಎಚ್. ಗೋಪಾಲಕೃಷ್ಣ | 20 |
| ತುಂತುರು | ದನಂಆ | 25 |
| ಸೀಟಿ | ಕೆ.ಎಸ್. ಸೋಮೇಶ್ವರ | 27 |
| ವಿಭ ಮತ್ತು ನಾನು | ಡಾ. ಡಿ.ವಿ. ಗುರುಪ್ರಸಾದ್ | 30 |
| ಗಪ್ರಗ ಪ್ರೈ. ಲಿಮಿಟೆಡ್ | ಎಸ್.ಎನ್.ಗಣನಾಥ | 34 |


ಮುಖಪುಟ : **ಇಂಟರ್‌ನೆಟ್ ಕೃಪೆ**

ವ್ಯಂಗ್ಯ ಚಿತ್ರಗಳು: ರಘುಪತಿ ಶೃಂಗೇರಿ, ಆದರ್ಶ ಪೈ

*ಪ್ರಕಾಶಕರು:* ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ,
ಬೆಂಗಳೂರು - 560 003. email: koravanjiaparanji@gmail.com ಮೊಬೈಲ್:9845264304

*ಸಂಪರ್ಕ ವಿಳಾಸ:* **ಶ್ರೀ ಬೇಲೂರು ರಾಮಮೂರ್ತಿ**, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ,
ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್,
ಬೆಂಗಳೂರು - 560 068. ದೂರವಾಣಿ: 080-26688488. email: belururamamurthy@gmail.com

**For Online payment of subscription:** Name : KORAVANJI APARANJI TRUST
Current Account No.: 109804180000056, IFS Code : SVCB0000098
SVC Co-operative Bank Ltd., Branch: Malleshwaram
Please mail us your name and address if you are a new subscriber. Mail your subscriber ID if it is renewal. Our email ID: koravanjiaparanji@gmail.com

*ಮುದ್ರಣ: ರವಿ ಗ್ರಾಫಿಕ್ಸ್ - ಅಕ್ಷರ ಜೋಡಣೆ: ಒಮೇಗಾ ಲೇಸರ್‌ಟೆಕ್*



# ಅಪರಂಜಿ ಕಿಡಿ

**●ಪ್ರಕಾಶ್**

**ಸೇನಾಪಡೆಯ ಹಿರಿಯ ಅಧಿಕಾರವನ್ನೇರಿದ**
**ಬಗ್ಗೆಪಲ್ಲಿ ಸೋಮಶೇಖರ್ ರಾಜು ಅವರಿಗೆ**
**ಅಪರಂಜಿಯ ಅಭಿನಂದನೆಗಳು !!**

***

"ಅರ್ಜಿ ತಿರಸ್ಕಾರವೇ ಪ್ರಾಮಾಣಿಕತೆ ಅಲ್ಲ "
ಮಾನ್ಯ ಸಿ.ಎಂ. ಅವರು
**ಅರಣ್ಯ ರೋದನ ಅಂದರೆ ಇದೇ ಇರಬೇಕು !?**

***

ಭ್ರಷ್ಟಾಚಾರವನ್ನು ಎಲ್ಲ ಹಂತಗಳಲ್ಲೂ ನಿಯಂತ್ರಿಸಬೇಕು
– ಹೇಳಿಕೆ
**ಅಂದರೆ ನಿರ್ಮೂಲನೆ ಅಸಾಧ್ಯ ಎಂದು ಹೇಳಿದಂತಾಯಿತು !!**

***

26 ಬಾರಿ ಎವರೆಸ್ಟ್ ಏರಿದ ಶೆರ್ಪಾ
– ಪತ್ರಿಕೆ
**ನಮಗಂತೂ ಸುದ್ದಿಯಿಂದಲೇ ನಡುಕ ಶುರು !!**

***

**ನಮ್ಮ ರಾಜ್ಯದಲ್ಲಿ "ಅಕ್ರಮ" ಎಂಬುದು ಆತ್ಮದಂತೆ ;**
**ಅನಾದಿ, ಅನಂತ !!**

***

ದುರಾಸೆಗೆ ಮದ್ದಿಲ್ಲ – ಮಾನ್ಯ ಸಂತೋಷ್ ಹೆಗ್ಡೆ
**ಚಿನ್ನದಂತಹ ಮಾತು ಅಂತ ಅಪರಂಜಿ ನಕ್ಕಳಂತೆ !**

***

ನಾವು ಅಣ್ವಸ್ತ್ರ ಬಳಸುವುದಿಲ್ಲ – ರಶಿಯಾ
**ಇಂತಹ ಸುದ್ದಿ ಇಂದಲೇ ಭಯೋತ್ಪಾದನೆ !?!**

# "ನಮ್ಮ ನಿಮ್ಮಲ್ಲಿ"

●ಶಿವಕುಮಾರ್

ಮೊನ್ನೆ ಒಂದು ಘಟನೆ ನಡೆಯಿತು. ಗೆಳೆಯ ಆನಂದ ನನಗೊಂದು ವಾಟ್ಸಪ್ ವಾಣಿ ಕಳಿಸಿ," ಈ ಅಣಕು ಕವನಗಳನ್ನು ಸ್ವಲ್ಪ ನೋಡಿ. ಯಾರೋ ಫಾರ್ವರ್ಡ್ ಮಾಡಿದ್ದಾರೆ. ಇಂತಹದೊಂದು ಅಣಕು ಕವನ ಸ್ಪರ್ಧೆಯನ್ನ ಅಪರಂಜಿ ಓದುಗರಿಗೆ ಏಕೆ ನೀಡಬಾರದು ?" ಅಂತ ಕೇಳಿದ್ದರು. ಕವನಗಳನ್ನ ನೋಡಿದೆ. ಅವು ಫೆಬ್ರುವರಿ 1988ರಲ್ಲಿ ಅಪರಂಜಿಗೆ ನಾನೇ ಬರೆದ ಕವನಗಳಾಗಿದ್ದವು. ಆಪರಂಜಿಯ ಪ್ರಾರಂಭದ ದಿನಗಳಲ್ಲಿ ತಪ್ಪದೇ ಬರೆಯುತ್ತಿದ್ದ ನಾವು ಹಲವಾರು ಬರಹಗಾರರು ವಿವಿಧ ಪ್ರಯೋಗಗಳನ್ನು ಮಾಡುತ್ತಿದ್ದಾಗ ಈ ಐಡಿಯಾ ಹೊಳೆದಿದ್ದು, ಅದಕ್ಕೊಂದು ಮೂರ್ತ ಸ್ವರೂಪವನ್ನು ನಾನು ಕೊಟ್ಟಿದ್ದೆ.

ಭಲೆ, ಅಪರಂಜಿಗೆ ಹತ್ತಿರ ಹತ್ತಿರ ನಲವತ್ತು ವರ್ಷಗಳಾಗಿವೆ ಅನ್ನೋದಕ್ಕೆ ಇದಕ್ಕಿಂತ ಹೆಚ್ಚಿನ ಪುರಾವೆ ಬೇಕೆ. ನಾವು ಹಿಂದೆ ಬರೆದ ಲೇಖನಗಳೇ ನಮಗೆ ಹೊಸದಾಗಿ ಕಾಣುಕ್ಕೆ ಶುರುವಾದರೆ ಅವುಗಳ ಪ್ರಾಚೀನತೆ ಖಚಿತವಾದಂತೆಯೇ. ಇರಲಿ.

ಆಗ ಬರೆದ ಕವನ ಜಿ.ಪಿ.ರಾಜರತ್ನಂ ಬರೆದಿದ್ದ ಶಿಶು ಗೀತೆಯೊಂದನ್ನು ನಮ್ಮ ಖ್ಯಾತ ಕವಿಗಳ ಶೈಲಿಯಲ್ಲಿ ಪುನರ್ರಚಿಸಿದ ಅಣಕು ಪದ್ಯಗಳು. ರತ್ನರ "ನಾಯಿಮರಿ" ಪದ್ಯ ಯಾರು ಕೇಳಿಲ್ಲ? ಇದನ್ನ ಕ್ರಮವಾಗಿ, ಕೆ.ಎಸ್. ನರಸಿಂಹಸ್ವಾಮಿ, ಭಾಮಿನಿ ಷಟ್ಪದಿ, ಕುವೆಂಪು ಮತ್ತು ಡಿ.ವಿ.ಜಿ. ಇವರುಗಳ ಶೈಲಿಯಲ್ಲಿ ಬರೆದದ್ದು. ನಿಮ್ಮ ಅವಗಾಹನೆಗಾಗಿ ಇಲ್ಲಿ ನೀಡಿದೆ.

**ಕೆ.ಎಸ್.ನ ಶೈಲಿ**

ಒಂದು ದಿನ ಬೆಳಗಿನಲಿ, ನಾಯಿಯನು ಕೇಳಿದೆನು,  
ತಿಂಡಿ ನಿನಗಾವುದೆಂದು  
ಬಿಸ್ಕೀಟು ಚೆಂದವೋ, ನೊರೆಹಾಲು ಚಂದವೋ ಎಂದೆನ್ನ ಕೇಳಬೇಡಿ  
ಹೇಳಿತದು " ಎರಡನ್ನೂ ನೀಡಿ ನೋಡಿ"  
ಬಿಸ್ಕೀಟು ತಿನ್ನುವುದು ಮನೆಯ ಕಾವಲಿಗಾಗಿ,  
ಕಳ್ಳಕಾಕರ ಬೊಗಳಿ ದೂರನಿಲಿಸುವೆನು  
ಬಿಸ್ಕೀಟು ಚೆಂದವೋ, ನೊರೆಹಾಲು ಚಂದವೋ ಎಂದೆನ್ನ ಕೇಳಬೇಡಿ  
ಹೇಳಿತದು " ಎರಡನ್ನೂ ನೀಡಿ ನೋಡಿ"

**ಭಾಮಿನಿ ಷಟ್ಪದಿ**

ಶುನಕ ಪುತ್ರನೆ ಬೆಸಸು ನಿನ್ನಯ
ಮನದಭೀಷ್ಟದ ರೀತಿನೀತಿಯ
ಪಾನದೊಂದಿಗೆ ನೀಡಬಲ್ಲೆನು ಖಾದ್ಯ ವಸ್ತುಗಳ
ಏನ ಹೇಳಲಿ ಒಡೆಯ ನನಗೀ
ಕ್ಷಣವೆ ಹಸಿವಾಗಿಹುದು ನಡೆ ನಡೆ
ಜೇನ ಬೆರೆಸಿದ ರೊಟ್ಟಿ ತುಂಡನು ತಂದು ಮಡಗಿಲ್ಲಿ.

ಬಿಟ್ಟಿ ಕೂಳನು ತಿನ್ನಲೊಲ್ಲೆನು
ರೊಟ್ಟಿಯಂಶವ ಮೆಯ್ಯಗೂಡಿಸಿ
ಜಟ್ಟಿಯಂದದಿ ಶಕ್ತಿಯಿಂದಲಿ ಮನೆಯ ಕಾಯುವೆನು
ದಟ್ಟ ಕತ್ತಲ ನೆರಳನಾರಿಸಿ
ಕೆಟ್ಟ ಕಳ್ಳರು ಮನೆಗೆ ಬಂದೊಡೆ
ದಿಟ್ಟತನದಿಂ ಬೊಗಳಿ ಅವರನು ಬೆದರಿಸೋಡಿಸುವೆ.

**ಕುವೆಂಪು ಶೈಲಿ**

ಓ ನಯನ ಮನೋಹರ ಶುನಕ ಮೂರ್ತಿ
ಅರಿ ಹೃದಯ ತಲ್ಲಣಿಪ ರೌದ್ರವಾಣಿ ನಿನ್ನದಲ್ತೆ !

ಪೇಳು, ಪೇಳ್ ಏನ ಬಯಸುವೆ ನೀನು
ಮೃಷ್ಟಾನ್ನ ಭೋಜನವೆ, ಮೇಣ್ ಸೋಮರಸವೇ ?
ನನ್ನೊಡೆಯ ಕೊಲ್ಲದಿರು ಉತ್ಪ್ರೇಕ್ಷೆ ವಾಣಿಯಿಂ
ಸಾಕೆನಗೆ ನೀ ನೀಡೆ ತಿಂಡಿ ತೀರ್ಥಗಳ
ನನ್ನ ಪಾಲಿಗೆ ಸಂದ ಅಶನ ಪಾನಗಳೀಂಟಿ
ನಿಷ್ಠೆಯಿಂ ಕಾಯುವೆನು ದ್ವಾರಪಾಲಕನೋಲ್
ನಿಶಿ ರಾತ್ರಿ ವೇಳೆಯಲಿ ದುರುಳಾತ್ಮರೈತರಲು
ಬೊಗಳಿಯೇ ತೀರಿಸುವೆ ಅನ್ನಋಣವ

**ಮಂಕುತಿಮ್ಮನ ಶೈಲಿ**

ತಿಂಡಿಯಾಸೆಗೆ ಶುನಕ ಬಾಗಿಲನು ಕಾಯ್ವುದಲ
ಗಿಂಡಿ ತೀರ್ಥವ ನೀಡೆಬಾಲವಾಡಿಪುದು
ಭಂಡ ಕಳ್ಳರ ಕಂಡು ಬೊಗಳಿ ಓಡಿಪುದಲ್ತೆ
ಪಿಂಡವದು ಸಾರ್ಥಕವೊ ಮಂಕುತಿಮ್ಮ

ಅಪರಂಜಿಯ ಓದುಗ ಹಾಗೂ ಬರಹಗಾರರ ಬಳಗ ಇದೇ ಮಾದರಿಯ ಅಣಕು ಕವನಗಳನ್ನ " ನಮ್ಮ ಮನೆಯ ಸಣ್ಣ ಪಾಪ " ಶಿಶುಗೀತೆಯ ತಳಹದಿಯ ಮೇಲೆ ಬರೆಯಲು ಪ್ರಯತ್ನಿಸಿ. ಯಶಸ್ವಿ ಪ್ರಯತ್ನಗಳನ್ನು ಅಪರಂಜಿಯಲ್ಲಿ ಪ್ರಕಟಿಸಲಾಗುವುದು. ನಿಮ್ಮ ಅನುಕೂಲಕ್ಕಾಗಿ ಮಾದರಿ ಕವನವನ್ನು ಇಲ್ಲಿ ಕೊಟ್ಟಿರುವೆ. ಬೆಸ್ಟ್ ಆಫ್ ಲಕ್!

## ನಮ್ಮ ಮನೆಯ ಸಣ್ಣ ಪಾಪ

( ರತ್ನರ ಮೂಲ ಕವನ)

ನಮ್ಮ ಮನೆಯಲೊಂದು ಸಣ್ಣ ಪಾಪವಿರುವುದು
ಎತ್ತಿಕೊಳ್ಳದೇ ಹೋದರದಕೆ ಕೋಪ ಬರುವುದು
ಕೋಪಬಂದು ಗಟ್ಟಿಯಾಗಿ ಕಿರಿಚಿಕೊಳುವುದು
ಕಿರಿಚಿಕೊಂಡು ತನ್ನ ಮೈಯ್ಯ ಪರಚಿಕೊಳ್ಳುವುದು
ಮೈಯ್ಯಪರಚಿಕೊಂಡು ಪಾಪ ಅತ್ತು ಕರೆವುದು
ಅಳಲು ಕಣ್ಣಿನಿಂದ ಸಣ್ಣ ಮುತ್ತು ಸುರಿವುದು.
ಪಾಪ ಅತ್ತರಮ್ಮ ತಾನು ಅತ್ತು ಬಿಡುವಳು
ಅಯ್ಯೋ ಪಾಪ ಎಂದುಕೊಂಡು ಮುತ್ತು ಕೊಡುವಳು
ಪಾಪ ಪಟ್ಟು ಹಿಡಿದ ಹಟವು ಸಾರ್ಥವಾಯಿತು
ಕಿರಿಚಿ ಪರಚಿ ಅಳುವುದೆಲ್ಲ ಅರ್ಥವಾಯಿತು

■

ಲಕ್ಷ್ಮಣ್ ಕೊರವಂಜಿ

ನಲವತ್ತರ ದಶಕದಲ್ಲಿ ಯುವ ಕನ್ನಡಿಗ ಆರ್.ಕೆ. ಲಕ್ಷ್ಮಣ್ ಕೊರವಂಜಿಗಾಗಿ ರಚಿಸಿ ಕೊಟ್ಟ ವ್ಯಂಗ್ಯಚಿತ್ರಗಳು ಹಲವು.

ಅವುಗಳಲ್ಲಿ ಇದೂ ಒಂದು – ನಿಮಗಾಗಿ.




**ಅದೆಲ್ಲಾ ಒಪ್ಪಿದೆ. ಆದರೆ ಬೇರೆ ಯಾವ ಕೆಲಸಕ್ಕೂ ಲಾಯಕ್ಕಿಲ್ಲ ಅನ್ನೋದೂ ಒಂದು ಗುಣ ನಿನ್ನಲ್ಲಿ. ಅದನ್ನು ಹೇಳಕೋ !**

# ಹಣಮಂತುವಿನ ಆಣಿಮುತ್ತುಗಳು

**● ನಾಗರತ್ನ ಸಾಲಗಾಮೆ**

ಹಣಮಂತ ನನ್ನ ಕಾಲೇಜಿನ ಸಹಪಾಠಿ.

ಅವನ ಮನೆತನದಲ್ಲಿ ತಲೆಮಾರುಗಳಿಂದ ಅನೂಚಾನವಾಗಿ ನಡೆದುಕೊಂಡು ಬಂದಿರುವ ವಿಶಿಷ್ಟ ಸಂಪ್ರದಾಯ ಒಂದು ಉಂಟಂತೆ ಅದೇನೆಂದರೆ:–

ಅವರ ಮನೆತನದಲ್ಲಿ ಮೊದಲ ಗಂಡುಮಕ್ಕಳಿಗೆ, ತಿಪ್ಪೇರುದ್ರಪ್ಪ ಬಸವಣ್ಣಜ್ಜ, ಮಲ್ಲಿಕಾರ್ಜುನಪ್ಪ ಹಣಮಂತಜ್ಜ, ಶಿವರಾಜಪ್ಪ. ಇವೇ ಐದು ಹೆಸರುಗಳು...ಒಂದೊಂದು ತಲೆಮಾರಿನ ಹಿರಿಯ ಗಂಡುಮಕ್ಕಳಿಗೂ ಒಂದಾದ ಮೇಲೊಂದು ಪುನರಾವರ್ತನೆ ಆಗಬೇಕಂತೆ. ಇವನು ಹುಟ್ಟುವ ಹೊತ್ತಿಗೆ ಇವನ ಅಜ್ಜ ಮತ್ತು ಅಪ್ಪ ಅವರುಗಳಿಗೆ ಬಸವಣ್ಣಜ್ಜ, ಮಲ್ಲಿಕಾರ್ಜುನಪ್ಪ ಅನ್ನೋ ಹೆಸರು ದೊರೆತು, ಇವನ ಪಾಲಿಗೆ ಬಂದದ್ದು ಹಣಮಂತಜ್ಜ ಅನ್ನೋ ನಾಮಧೇಯ. ಆ ಹೆಸರುಗಳಲ್ಲಿ ಒಂದು ಅಕ್ಷರಾನೂ ಬದಲಿ ಮಾಡದಂಥ ಕಟ್ಟಾ ಸಂಪ್ರದಾಯಬದ್ಧತೆ!!

ಹಳ್ಳಿಯೊಂದರಲ್ಲಿ ಹುಟ್ಟಿ ಬೆಳೆದು ಅಲ್ಲೇ ಹತ್ತಿರದ ಶಾಲೆಯಲ್ಲಿ ಎಸೆಸೆಲ್ಸಿವರೆಗೆ, ಪಕ್ಕದ ಸಣ್ಣ ಊರಿನಲ್ಲಿ ಪಿಯುಸಿ ಮಾಡಿ ಈಗ ಪದವಿಗಾಗಿ ದಾವಣಗೆರೆಗೆ ಬಂದು ಒಂದು ಹಾಸ್ಟೆಲ್ಲಿನಲ್ಲಿದ್ದ ಹಣಮಂತು.

ತನ್ನ ಸಹಪಾಠಿಗಳ ಪ್ರಸಾದ, ಶಶಾಂಕ, ವಿಶ್ವಾಸ್, ಶ್ರೀರಾಮ, ನವೀನ, ಸಂತೋಷ್, ವಿವೇಕ್, ಶಶಿಧರ, ಶಿವಕುಮಾರ, ಶಂಭುಲಿಂಗಪ್ಪ ನಾರಾಯಣ....ಶ್ರೀಕೃಷ್ಣ, ಮಾಲತೇಶ... ಇಂತಹ ಹೆಸರು ಕೇಳಿದ ಮೇಲೆ, ಅಲ್ಲಿಯವರೆಗೂ ತನ್ನ ಹೆಸರಿನ ಬಗ್ಗೆ ಏನೂ ಅನ್ನಿಸಿರದಿದ್ದ ಅವನಿಗೆ ಈಗ ಹೀನಾಯ ಅನಿಸತೊಡಗಿತಂತೆ.

ಅಸಲಿಗೆ ಅವನ ಹೆಸರು ಹಣಮಂತಜ್ಜ ಅಂತಾನೆ ಹೌದು.

ಅವನ ಈ ಹೆಸರು ಅವನಿದ್ದ ಕುಗ್ರಾಮದ ಪ್ರಾಥಮಿಕ ಶಾಲೆಯ ಹೆಡ್‌ಮಾಸ್ಟರಿಗೇ ಇಷ್ಟವಾಗದೇ, ಮಗನನ್ನು ಸಾಲಿಗೆ ಸೇರಿಸಲು ಹೋದ ಇವನಪ್ಪನ ಹತ್ತಿರ "ಏನ್ರಪಾ? ಇಷ್ಟ ಸಣ್ಣ ಹುಡೂಗಂಗೆ ಅಜ್ಜ ಅಂತ ಹೆಸರಿಡ್ತಾರೇನ್ರೀ ಒಂದ ಛಲೋತ್ನಾದ ಹೆಸರ ಬರಸ್ರೀ" ಎಂದ ಮಾತಿಗೇ ಇವರಪ್ಪ ಹೊಯ್ಯನೆ ಗಾಬರಿ ಬಿದ್ದು "ಅಯ್ಯಯ್ಯೋ! ನಮ್ಮನಿತನದಾಗ ಹಂಗೆಲ್ಲ ಬದಲೀ ಮಾಡಂಗಲ್ರೀ ಸರ. ನಾ ಏನ ಕೊಟ್ಟೀನಿ ಅದ್ನ ಬರಕಳ್ರೀ" ಅಂದ್ನಂತೆ. ಅದ್ರೂ ಆ ಮಾಸ್ತರ ಹಣಮಂತಜ್ಜನನ್ನು ಹಣಮಂತ (ಹನುಮಂತನೂ ಅಲ್ಲ) ಎಂದಷ್ಟಾದರೂ ಬದಲಾಯಿಸಲು ಒಪ್ಪಿಸುವಲ್ಲಿ ತಮ್ಮ ಬುದ್ಧಿವಂತಿಕೆನೆಲ್ಲ ಖರ್ಚುಮಾಡಬೇಕಾಯ್ತಂತೆ. ಕರೆಯುವಾಗ ಮತ್ತು ಕನ್ನಡದಲ್ಲಿ ಬರೆಯುವಾಗ ಹಣಮಂತ ಎಂದೇ ಆದರೂ ಇಂಗ್ಲೀಷಿನಲ್ಲಿ ಬರೆದದ್ದನ್ನು ಓದುವಾಗಲಾದರೂ ಹನುಮಂತ ಅಂತನಾದ್ರೂ ಆಗುತ್ತಲ್ಲಾ ಅಂತ ಆ ಮಾಸ್ತರಿಗೇ ತುಸು ಸಮಾಧಾನವಾಯಿತಂತೆ.

ಇಲ್ಲಿ ದಾವಣಗೆರೆಗೆ ಬಂದರೆ ಅವನ ವಾರಗೆ ಗೆಳೆಯರು ಸುಮ್ನಿರಬೇಕಲ್ಲ. “ಲೇ ಮಂಗ್ಯಾ.. ಮಂಗಣ್ಣಾ...ಬಾರಲೇ...” ಅಂತ ಕುಚೋದ್ಯ ಮಾಡತೊಡಗಿದರು. “ಹಂಗ್ಯಾಕ ಕರಿಯಾಕ ಹತ್ತೀರ???? ನನ್ನ ಹೆಸರು ಹಣಮಂತ ಕಣ್ರಲೇ” ಅಂದರೆ,

"ಏ, ಕುಂದ್ರಲೇ.. ಹಣಮಂತ ಮಂಗ್ಯಾನೇ ಅಲೇನ್ಲೇ? ಹಿಂಗದ್ರನೂ ಹಂಗದ್ರನೂ ಎರಡೂ ಒಂದ ಸುಮ್ಕಿರಲೇ" ಎಂದು ಬಾಯಿ ಮುಚ್ಚಿಸಿ ಬಿಡುತ್ತಿದ್ದರಂತೆ.

ಇದರಿಂದ ರೋಸಿ ಹೋದ ಹಣಮಂತ ತನ್ನ ಹಳ್ಳಿಗೆ ಹೋದಾಗ ತನ್ನ ತಂದೆ ಮತ್ತು ಅಜ್ಜನ ಎದುರಿಗೆ "ಏನ ಹೆಸರಟ್ಟೀರಿ ನಂಗ, ಎಲ್ಲಾರೂ ಮಂಗ್ಯಾ ಮಂಗಣ್ಣ ಅಂತ ಚಾಷ್ಟೀ ಮಾಡಕ್ಹತ್ಯಾರ. ನಾ ಹೆಸರ ಬದಲೀ ಮಾಡ್ಕಳಾಂವ ನೋಡ್ರೀ" ಅಂದದ್ದೇ ಅವರಜ್ಜ ಭೈರವನಾಗಿ ಒಂದು ಕೋಲು ಸೆಳೆದುಕೊಂಡು ಮುಖ ಮೈ ಕೈ ನೋಡದೆ ಬಾರಿಸುತ್ತಾ "ಏನಂದೀ ಸೂಳೀಮಗನ!? ಹಿರೇರ ಹೆಸ್ರು ಬದಲೀ ಮಾಡ್ಕಂತೀಯೇನ್ಲೇ? ಹುಟ್ಲಿಲ್ಲಾನ್ನಸ್ಬಿಡ್ತೀನಿ. ಇನ್ನ ನಿನ್ನ ಕಾಲೇಜ ಬಂದ್. ಹೊಲ ಗದ್ದಿ ನೋಡ್ಕಂಡು ಈ ಹಳ್ಯಾಗ ಬಿದ್ದಿರು"ಎಂದು ಆರ್ಭಟಿಸಿದರಂತೆ. ಅವರಿಗೆ ಮೊಮ್ಮಗನ ವಿದ್ಯಾಭ್ಯಾಸದ ಪ್ರಗತಿಗಿಂತ ಮನೆತನದಲ್ಲಿ ಸಾಗಿ ಬಂದಿರುವ ಹೆಸರಿನ ಹೆಗ್ಗಳಿಕೆಯೇ ಹಿರಿದಾಗಿಬಿಟ್ಟಿತ್ತು.

ಕುಗ್ರಾಮದಲ್ಲಿ ಹುಟ್ಟಿ ಬೆಳೆದಿದ್ದರೂ ಚೆನ್ನಾಗಿ ಕಲಿತು ಒಂದು ಸರಕಾರಿ ನೌಕರಿ ಹಿಡೀಬೇಕೆಂಬ ಮಹತ್ವಾಕಾಂಕ್ಷೆಯ ಹಣಮಂತು ಹೊಡೆತಗಳ ನೋವಿಗಿಂತಲೂ ಹೆಚ್ಚಾಗಿ ಮತ್ತೆ ಕಾಲೇಜಿಗೆ ಹೋಗಂಗಿಲ್ಲ ಎಂಬ ಅಜ್ಜನ ಶಾಸನದಂಥ ಮಾತಿಗೇ ಬೆದರಿ ಬೆಪ್ಪಾಗಿ,

"ಇಲ್ಲಜ್ಜ, ನಮ್ಮವ್ವಾಣಿ, ಶಿವನಾಣಿ ನಾ ಇನ್ಯಾಗ ಹೆಸ್ರ ಬದಲಾಯಸಾ ಮಾತಾಡದಿಲ್ಲ. ನಿನ್ನ ದಮ್ಮಯ್ಯ ಕಾಲೇಜು ಬಿಡಿಸಬ್ಯಾಡಜ್ಜಾ" ಎಂದು ಗೋಗರೆದ ಮೇಲೇ ಅವರಜ್ಜ ಸುಮ್ಮನಾಗಿದ್ದಂತೆ.

ಹಣಮಂತು ಓದಿನಲ್ಲಿ ಜಾಣನಿದ್ರೂ ಹುಡುಗೀರನ್ನ ಚುಡಾಯಿಸೋದು, ಮಾತಾಡಿಸಲು, ಗಮನ ಸೆಳೆಯಲು ಚೇಷ್ಟೆ ಮಾಡುವಂಥ ಕಾಲೇಜಿನ ಸಾಮಾನ್ಯ ಪಡ್ಡೆ ಹುಡುಗರ ಚಪಲದಿಂದ ಮುಕ್ತನಾಗಿರಲಿಲ್ಲ. ಒಮ್ಮೊಮ್ಮೆ ಏನೇನೊ ಪೆದ್ದು ಪೆದ್ದಾಗಿ ಮಾತಾಡಿ ಎಲ್ಲರ ನಗೆಗೀಡಾಗುತ್ತಿದ್ದ. ಒಟ್ಟಿನಲ್ಲಿ ಹಣಮಂತನಿಂದ ಕಾಲೇಜಿನ ನಮಗೆಲ್ಲರಿಗೂ ಭರಪೂರ ಮನರಂಜನೆ ಸಿಗ್ತಿದ್ದದ್ದು ನಿಜ.

ಆಗೆಲ್ಲಾ ನಾವು ಎಲ್ಲಾ ವಿದ್ಯಾರ್ಥಿಗಳೂ ವಿದ್ಯಾರ್ಥಿನಿಯರೂ ಪುಸ್ತಕಗಳನ್ನು ಜೋಡಿಸಿಕೊಂಡು ಕೈಯಲ್ಲಿ ಹಿಡಿದುಕೊಂಡೇ ಕಾಲೇಜಿಗೆ ಹೋಗುತ್ತಿದ್ದೆವು. ಈಗಿನಂತೆ ಬ್ಯಾಕ್ ಪ್ಯಾಕ್ ಅಥವಾ ಕಾಲೇಜಿನ ಪುಸ್ತಕಗಳನ್ನು ಇಟ್ಟುಕೊಳ್ಳಬಹುದಾದ ಯಾವ ಚೀಲಗಳೂ ಆಗ ನಮ್ಮೂರಲ್ಲಂತೂ ಯಾರ ಬಳಿಯೂ ಇರಲಿಲ್ಲ.

ಮುಂಬಯಿಯಲ್ಲಿದ್ದ ನನ್ನ ಸೋದರ ಮಾವ ಒಮ್ಮೆ ಹರಿಹರಕ್ಕೆ ಬಂದಾಗ, ಪುಸ್ತಕಗಳಲ್ಲದೆ ಪ್ರಾಕ್ಟಿಕಲ್ ರೆಕಾರ್ಡ್ಸ್ ಮತ್ತು ಊಟದ ಡಬ್ಬಿ ಆದಿಯಾಗಿ ಎಲ್ಲವನ್ನೂ ಇಟ್ಟುಕೊಳ್ಳಬಹುದಾದ ಹೆಗಲಿಗೆ ಹಾಕಿಕೊಳ್ಳುವ ಒಂದು ಲೆದರ್ ಬ್ಯಾಗ್ ತಂದುಕೊಟ್ಟರು. ಮಾರನೆಯ ದಿನ ಅದನ್ನು ಹೆಗಲಿಗೆ ತಗುಲಿಸಿಕೊಂಡು ರೈಲಿಗೆ ಹತ್ತಿದರೆ ಬಹಳಷ್ಟು ಜನ ಕುತೂಹಲದಿಂದ ತಿರುಗಿ ತಿರುಗಿ ನೋಡುತ್ತಿದ್ದರು. ನನ್ನಂತೆಯೇ ಹರಿಹರದಿಂದ ದಾವಣಗೆರೆಗೆ ಓಡಾಡುತ್ತಿದ್ದ ಹಲವರು ನನ್ನ ಹತ್ತಿರ ಬಂದು ಅಚ್ಚರಿ ಮೆಚ್ಚುಗೆ ವ್ಯಕ್ತಪಡಿಸಿದಾಗ ನನಗೆ ಹೆಮ್ಮೆಯೋ ಹೆಮ್ಮೆ.

ಆ ಹೆಮ್ಮೆ ಮತ್ತು ಖುಷಿಯಲ್ಲೇ ಕಾಲೇಜಿಗೆ ಬಂದಾಗ ನಮ್ಮ ಸಹಪಾಠಿಗಳೂ

ಇದ್ದ ಒಂದು ಪಡ್ಡೆ ಹುಡುಗರ ಗುಂಪಿನಲ್ಲಿ ಈ ನಮ್ಮ ನಾಯಕ ಹಣಮಂತನೂ ಇದ್ದ. ನನ್ನ ಚೀಲ ನೋಡಿದ್ದೇ ಏನನ್ನಿಸಿತೋ ಅಪಾರ ಸ್ಫೂರ್ತಿಗೊಂಡು ಇದ್ದಕ್ಕಿದ್ದಂತೆ, "ಯಾರ್ರೀ... ಯಾರ್ರೀ... ದಾವಣಗೇರಿ ಹರಿಹರ ರಾಣಿಬೆನ್ನೂರ ಬ್ಯಾಡಗಿ ಹಾವೇರಿ... ಯಾರ್ರೀ ಯಾರ್ರೀ.. ಎನ್ನುತ್ತಾ ಸೀಟಿ ಹಾಕಿ ಖಾಸಗಿ ಬಸ್ಸಿನ ಕಂಡಕ್ಟರ್ಗಳಂತೆ ಕೂಗತೊಡಗಿದ್ದೇ ಹುಡುಗರ ಗುಂಪಿನಲ್ಲಿ ನಗು ಹುಚ್ಚಾಗಿ ಸ್ಫೋಟಗೊಂಡಿತು.

“ಪರವಾಗಿಲ್ಲಲೇ ಮಂಗ್ಯಾ...” ಎಂದು ಕೆಲವರು ಬೆನ್ನು ತಟ್ಟಿದರು. ಕೇಳಬೇಕೇ ಕಪಿಗೆ ಹೆಂಡ ಕುಡಿಸಿದಂತಾಗಿ ಮತ್ತೂ ಜೋರಾಗಿ “ಯಾರ್ರೀ ಯಾರ್ರೀ ಯಾರ್ರೀ.. ದಾವಣಗೇರೀ ಹರಿಹರ ರಾಣಿಬೆನ್ನೂರ ಬ್ಯಾಡಗಿ ಹಾವೇರಿ....ಯಾರ್ರೀ.... ಯಾರ್ರೀ ಯಾರ್ರೀ..” ಎನ್ನುತ್ತಾ ಸೀಟಿ ಹಾಕಿ ಕೂಗತೊಡಗಿದ. ಎಲ್ಲರೂ ಬಿದ್ದು ಬಿದ್ದು ಎಗರಾಡಿ ನಗತೊಡಗಿದರು

ನನಗೇಕೋ ಪಿತ್ತ ನೆತ್ತಿಗೇರಿ, ಏನೋ ಅವೇಶ ಬಂದಂತಾಗಿ ನನ್ನ ಚೀಲದ ಪುಸ್ತಕಗಳನ್ನೆಲ್ಲ ಹೊರತೆಗೆದು, ಸೀದಾ ಅವನ ಬಳಿ ಸಾರಿ ಅವನ ಪುಸ್ತಕಗಳನ್ನು ಕಸಿದುಕೊಂಡು ಅವನ ಕೈಯಲ್ಲಿ ನನ್ನ ಚೀಲವನ್ನು ದಬಾರನೆ ಕುಕ್ಕಿ “ಕಂಡಕ್ಟರ್ ಕೆಲ್ಸ ಮಾಡೋನು ಇಲ್ಲಿಗ್ಯಾಕ್ ಬಂದಿದೀ?. ತಗೋ ಚೀಲ. ನಡೀ ಬಸ್‌ಸ್ಟಾಂಡ್ಗೆ” ಎಂದು ತಗಲಿಕೊಂಡೆ.

ಇಂತಹ ತೀಕ್ಷ್ಣ ಪ್ರತಿಕ್ರಿಯೆಯನ್ನು ಕನಸಿನಲ್ಲೂ ನಿರೀಕ್ಷಿಸದ ಇಡೀ ಗ್ಯಾಂಗ್ ತಬ್ಬಿಬ್ಬಾಗಿ... ಹಣಮಂತ "ಬೆಬ್ಬೆಬ್ಬೇ.. " ಅನ್ನ ತೊಡಗಿದಾಗ, ಅವರಲ್ಲೊಬ್ಬ ಚೇತರಿಸಿಕೊಂಡು, "ಹೀರೋ ಆಗಾಕ್ ಹೊಂಟೀಯೇನ್ಲೇ ಮಂಗ್ಯಾ? ಆತಾ ಮೊಕಕ್ ಮಂಗ್ಯಾತೀರ್.. ಇದ ನಿಂಗ ಬೇಕಿತ್ತೇನ್ಲೆ" ಅಂದ.

ಎಲ್ಲರೂ ಒಟ್ಟಾಗಿ ಭಾಗಿಯಾಗಿ ಮಜಾ ತಗೊತಿದಾರೆ. ಬೆನ್ನು ತಟ್ಟಿ ಹುರುದುಂಬಿಸಿದಾರೆ. ಇದೀಗ ಇವನು ಮಾತ್ರ ..ಬಹಳ ಸಭ್ಯನಂತೆ.....ನನಗೆ ಮತ್ತೂ ರೇಗಿತು.

"ನೀನೇನು ಭಾಳ ಸಾಭ್ಯಸ್ಥ ಅನ್ಕೊಂಡ್ಬಿಟ್ಟದೀಯ. ಆಹಹಹಾ. ನೀನ್ಯಾವತ್ತೂ ನಾವು ಹುಡುಗೀರನ್ನ ಚುಡಾಯಿಸೇ ಇಲ್ಲ ಅಲ್ವಾ"? ಎಂದು ಅವನನ್ನೂ ತಗಲಿಕೊಂಡಾಗ....ಅವನ ಮುಖ ಇಂಗು ತಿಂದ ಮಂಗನಂತಾಗಿತ್ತು..

ಆಗ ನನ್ನ ಚೀಲ ನನ್ನ ಕೈಗಿತ್ತು, ತನ್ನ ಪುಸ್ತಕಗಳನ್ನು ತೆಗೆದುಕೊಂಡು ಸದ್ದಿಲ್ಲದೆ ಜಾಗ ಖಾಲಿ ಮಾಡಿದ ಹಣಮಂತ. “ಕ್ಲಾಸಿಗೆ ಹೊತ್ತಾಗ್ತದೆ ನಡೀರಲೇ” ಎನ್ನುತ್ತಾ ಉಳಿದವರೂ ಅವನನ್ನು ಅನುಸರಿಸಿದರು.

ಆ ಘಟನೆಯಾದ ಮೇಲಿಂದ ನನ್ನನ್ನು ಚುಡಾಯಿಸುವ ಧೈರ್ಯ ಅದೇಕೋ ಯಾರಿಗೂ ಬರಲಿಲ್ಲ. ನಾನೂ ಒಂಥರಾ ನಮ್ಮ ಹುಡುಗಿಯರ ಗುಂಪಿನ ಅಘೋಷಿತ ನಾಯಕಿಯಾಗಿಬಿಟ್ಟೆ ಅನ್ನಿ. ಮುಂದೆ ಕಾಲೇಜಿನಿಂದ ಯಾವುದೇ ಸಮಾರಂಭ, ಪ್ರವಾಸ ಅಥವಾ ಯೂತ್ ಫೆಸ್ಟಿವಲ್ ಇತ್ಯಾದಿ ಯಾವುದಕ್ಕೇ ಸೇರಬೇಕಾದರೂ, ಹೋಗಬೇಕಾದರೂ ನನ್ನ ಗೆಳತಿಯರ ಮನೆಗಳಲ್ಲಿ "ನಾಗರತ್ನ ಬರೋದಿದ್ರೆ ಹೋಗಬಹುದು" ಎಂದು ಅವರಮ್ಮ ಅಪ್ಪ ಹೇಳುತ್ತಿದ್ದರಂತೆ.

■

# ಬನ್ನಿ, ಜಾತ್ರೆಗೆ ಹೋಗೋಣ

**●ಸಿ.ಆರ್.ಸತ್ಯ**

ಮುಂದಿನ ತಿಂಗಳು ನಮ್ಮ ಬಡಾವಣೆ ಹತ್ತಿರ ಇರೋ ಬುದ್ಧಿಗುಡ್ಡದ ಮೇಲೆ ಗೂಗಲಪ್ಪನ ಜಾತ್ರೆಯನ್ನು ನಮ್ಮ ಕ್ಷೇಮಾಭಿವೃದ್ಧಿ ಸಂಘ ಹಮ್ಮಿಕೊಂಡಿದೆ. ಬುದ್ಧಿಗುಡ್ಡ ಅಂತ ಇತ್ತೀಚೆಗೆ ತಾನೆ ಹೆಸರು ಬಂದಿರೋದರಿಂದ ,ಅದು ಎಲ್ಲಿದೆ ಏನು ಅಂತ ಅನೇಕರಿಗೆ  ತಿಳಿದಿಲ್ಲ. ಇಷ್ಟು ದಿವಸಗಳ ತನಕ ಅದೊಂದು ಚಿಕ್ಕ ಕಲ್ಲು ಬಂಡೆಗಳಿಂದ ತುಂಬಿದ್ದ ಸಾಧಾರಣ ಬೆಟ್ಟವಾಗಿತ್ತು. ಆದರೆ  ಒಂದು ತಿಂಗಳ ಹಿಂದೆ ಅಮೇರಿಕಾದಲ್ಲಿರೋ ಗೂಗಲ್ ಕಂಪೆನಿಯಲ್ಲಿ ಕೆಲಸ ಮಾಡುತ್ತಿದ್ದ, ನಮ್ಮವನೇ ಆದ (ಹುಬ್ಬಳ್ಳಿ ಕಡೆಯವನು) ಬಸವಪ್ಪ ಬುದ್ಧಿವಂತಪ್ಪ ಅನ್ನುವ ಸಾಫ್ಟ್ ವೇರ್ ಮನುಷ್ಯ ಈ ಬೆಟ್ಟವನ್ನು ನೋಡಿ, 'ಆಹಾ! ಇಂತಹ ಬೆಟ್ಟದ ಮೇಲೆ  ಒಂದು ಗೂಗಲಪ್ಪನ ಪ್ರತಿಮೆ ಪ್ರತಿಷ್ಠಾಪಿಸಿದರೆ ಎಷ್ಟು ಚೆನ್ನಾಗಿರುತ್ತೆ, ಇಲ್ಲಿಯ ಬುದ್ಧಿ ಇಲ್ಲದ ಜನರು ಅವನಿಗೆ ಪೂಜೆ ಪುನಸ್ಕಾರಗಳನ್ನು ಮಾಡಿ ಸ್ವಲ್ಪನಾದ್ರೂ ಬುದ್ಧಿವಂತರಾಗಬಹುದು' ಅಂತ ಯೋಚನೆ ಮಾಡಿ. ತಕ್ಷಣವೇ ಕಾರ್ಯೋನ್ಮುಖನಾದ. ಚೀನಾ ದೇಶದಲ್ಲಿಇರೋ ಒಬ್ಬ ಶಿಲ್ಪಿಗೆ 20 ಅಡಿ ಎತ್ತರದ ಒಂದು ಗೂಗಲಪ್ಪನ ಪ್ರತಿಮೆಯನ್ನು ಕೆತ್ತಿ ಇಲ್ಲಿಗೆ ಸಾಗಿಸಲು ಆರ್ಡರ್ ಕೊಟ್ಟ. ಅಷ್ಟರಲ್ಲಿ ಈ ಬೆಟ್ಟಕ್ಕೆ ಮೆಟ್ಟಿಲುಗಳನ್ನು ಕಟ್ಟಿಸಿ, ಮೇಲೆ ಪ್ರತಿಮೆ ನಿಲ್ಲಿಸುವ ಜಾಗದ ಅಕ್ಕಪಕ್ಕದಲ್ಲಿ ಕಂಪ್ಯೂಟರ್ ರೂಮ್, ನೋಂದಣಿ ರೂಮ್, ಪ್ರಸಾದ ವಿತರಣೆ ಕೌಂಟರ್ ಮತ್ತು ಭಕ್ತಾದಿಗಳಿಗೆ ಊಟದ ವ್ಯವಸ್ಥೆಗೆ ಅಡುಗೆ ಮನೆ ಹಾಗೂ ಹಾಲ್ ಒಂದನ್ನು ಕಟ್ಟಿಸಿದ. ಪ್ರತಿಮೆ ಹಿಂದೆ ಗೂಗಲಪ್ಪನಿಗೆ ಅಭಿಷೇಕ ಮಾಡೋದಕ್ಕೆ ಅನುಕೂಲವಾಗಲಿ ಅಂತ ಮೆಟ್ಟಿಲುಗಳನ್ನು ಕಟ್ಟಿಸಿದ.ಇಷ್ಟೆಲ್ಲಾ ತಯಾರಿ ಆದಮೇಲೆ ಚೀನಾ ಇಂದ ಪ್ರತಿಮೆ ಬಂತು. ಇಷ್ಟರಲ್ಲೇ ನಮ್ಮ ಜನರು ಈ ಬೆಟ್ಟಕ್ಕೆ ಬುದ್ಧಿಬೆಟ್ಟ ಅಂತ ಹೆಸರಿಟ್ಟರು.

ಈಗ ಬಸವಪ್ಪ ಬುದ್ಧಿವಂತಪ್ಪನಿಗೆ ಒಂದು ಬಿಕ್ಕಟ್ಟು ಬಂತು. ಪ್ರತಿಷ್ಠಾಪನೆಗೆ ಮುಖ್ಯ ಅತಿಥಿ ಆಗಿ ಯಾರಾದರೂ ಬುದ್ಧಿವಂತರು ಸಿಗುತ್ತಾರೆಯೆ? ಅಂತ ನಮ್ಮ ಬಡಾವಣೆಯಲ್ಲಿ ಎಷ್ಟು ಹುಡುಕಿದರೂ ಅವನಿಗೆ ಸಿಕ್ಕಲಿಲ್ಲ. ಕೊನೆಗೆ ಒಬ್ಬ ಬುದ್ಧಿವಂತನನ್ನು ಚೀನದಿಂದಲೇ ಕರೆಸಿಕೊಂಡ. ಅವನ ಹೆಸರು ಚೌ ಕೊಯ್ ಪೌಯ್ ಅಂತ.  ಪೌಯ್ ಬಂದಮೇಲೆ ರಾಹು ಕಾಲ, ಗುಳಿಕ ಕಾಲ, ನಕ್ಷತ್ರ ಇವನ್ನೆಲ್ಲಾ ನೊಡಿಕೊಂಡು ಬಸವಪ್ಪ ಬುದ್ಧಿವಂತಪ್ಪ ಒಂದು ಒಳ್ಳೆಯ ಮುಹೂರ್ತದಲ್ಲಿ ಗೂಗಲಪ್ಪನ ಪ್ರತಿಷ್ಠಾಪನೆಯನ್ನು ಬಹು ಭರ್ಜರಿಯಾಗೇ ಮಾಡಿದ. ಮುಂಚೆಯೇ ಆನ್ ಲೈನ್ ನಲ್ಲಿ ನೊಂದಣಿ ಮಾಡಿಸಿಕೊಂಡಿದ್ದ ನಮ್ಮನ್ನೆಲ್ಲಾ ಬುದ್ಧಿಬೆಟ್ಟದ ಮೇಲೆ ವರ್ಚುಯಲ್ ಆಗಿ ಸೇರಿಸಿದ್ದ.

ಹಾಗಾಗಿ ಅವತ್ತು ನಮಗೆ ಅಲ್ಲಿ ಊಟ ಮಾಡೋಕ್ಕೆ ಆಗಲಿಲ್ಲ. ಪೌಯ್ ಗೂಗಲಪ್ಪನ ಕುತ್ತಿಗೆಗೆ ಒಂದು ಹಾರ ಹಾಕಿ, ಬಸವಪ್ಪನ ಕುತ್ತಿಗೆಗೂ  ಒಂದು ಹಾರ ಹಾಕಿ, ಉದ್ಘಾಟನೆ ಮಾಡಿದ ಮತ್ತು  ನಮಗೆ ಅರ್ಥವಾಗದ ಹಾಗೆ ಏನೇನೋ ಮಾತನಾಡಿದ. ಬಸವಪ್ಪ, ನಂತರ ಮಾತನಾಡಿ, ಇನ್ನು ಮೇಲಾದರೂ ನಮ್ಮ ಬಡಾವಣೆಯಜನ ಬುದ್ಧಿ ಬೆಟ್ಟದ ಗೂಗಲಪ್ಪನ ಆಶೀರ್ವಾದದಿಂದ ಸ್ವಲ್ಪನಾದರೂ ಬುದ್ಧಿವಂತರಾಗಲಿ ಅಂತ  ಪೌಯ್ ಹಾರೈಸಿದ್ದಾನೆ ಎಂದು ತಿಳಿಸಿದ.

ಮಾರನೇ ದಿನದಿಂದ ನಾವೆಲ್ಲಾ ಬೆಳಿಗ್ಗೆ ಅಥವಾ ಸಂಜೆ ಸಮಯದಲ್ಲಿ ಬುದ್ಧಿಬೆಟ್ಟ ಹತ್ತಿ ಗೂಗಲಪ್ಪನಿಗೆ ಹಣ್ಣು ಹೂವು ತೆಂಗಿನಕಾಯಿ ಸಮರ್ಪಣೆ ಮಾಡಿ ನಮ್ಮ ತಲೆಗಳಿಗೆ ಬಂದ ಪ್ರಶ್ನೆಗಳನ್ನು ಕೇಳೋದಕ್ಕೆ ಶುರು ಮಾಡಿದ್ವಿ.ಕೇಳಿದ ತಕ್ಷಣವೇ ನಮಗೆ ಕಂಪ್ಯೂಟರ್ ರೂಮ್ ನಲ್ಲಿ ಪ್ರಿಂಟ್ ಔಟ್ ಬರ್ತಾ ಇತ್ತು. ನಮ್ಮ ಗೂಗಲಪ್ಪನಿಗೆ ಇದ್ದ ಜ್ಞಾನದ ವ್ಯಾಪ್ತಿ ಹೇಗಿತ್ತು ಅಂದರೆ ನಾವು ಯಾವ ವಿಷಯದಲ್ಲಿ ಪ್ರಶ್ನೆ ಕೇಳಿದರೂ ಅದಕ್ಕೆ ಕ್ಷಣ ಮಾತ್ರದಲ್ಲಿ ಉತ್ತರ ಕೊಡುತ್ತಿದ್ದ. ಭವಿಷ್ಯ ನುಡಿಗಳನ್ನೂ ಹೇಳುತ್ತಿದ್ದ.ಉದಾಹರಣೆಗೆ ನಾನು ಯಾವಾಗ ಬುದ್ಧಿವಂತನಾಗುತ್ತೀನಿ  ಅಂತ ಕೇಳಿದ್ದಕ್ಕೆ, ನಿನ್ನ ಹಣೇಲಿ  ಹಾಗೆ ಆಗೋದು ಬರೆದಿಲ್ಲ' ಅಂತ ಅಂದ!  ನಮ್ಮನೆ ಪಕ್ಕದ  ಮನೆ ಪಂಕಜಮ್ಮ ' ನಮ್ಮ ಸೊಸೆಗೆ ಯಾವಾಗ  ಪುತ್ರ ಸಂತಾನವಾಗುತ್ತೆ?', ಅಂತ ಕೇಳಿದ್ದಕ್ಕೆ' ಅವಳಿಗೆ ಸಂತಾನ ಭಾಗ್ಯ ಇಲ್ಲ, ಆದರೆ ನಿನಗೆ ಎರಡು ಹೆಣ್ಣು ಮಕ್ಕಳು ಅವಳಿ ಜವಳಿಯಾಗಿ ಹುಟ್ಟುತ್ವೆ' ಅಂತ ಹೇಳಿದ! ಅದು ನಿಜಾನೂ ಆಯಿತು! ನಮ್ಮ ಬಡಾವಣೆಯ ಪ್ರಾವಿಷನ್ ಸ್ಟೋರ್ಸ್ ಮಾಲಿಕರಾದ ಬಂಗಾರಪ್ಪನವರಿಗಂತೂ ಎಂತಹ ಒಳ್ಳೆ ಮಾಹಿತಿ ಕೊಟ್ಟ ಅಂತೀರಿ. ಅವರಿಗೆ ಒಳ್ಳೆ ಅಕ್ಕಿಯಲ್ಲಿ ಹೇಗೆ ಚೀನಾದ ಪ್ಲಾಸ್ಟಿಕ್ ಅಕ್ಕಿಯನ್ನು ಬೆರಸಿ ಅದನ್ನು ಲಾಭಕ್ಕೆ ಮಾರಬಹುದು, ನಕಲಿ ಎಣ್ಣೆಗಳು ಎಲ್ಲೆಲ್ಲಿ ಹೋಲ್ ಸೇಲ್ ಸಿಗುತ್ವೆ, ಅಂಗಡಿಯಲ್ಲಿರೋ ತಕ್ಕಡಿಯನ್ನು 'ಅಡ್ಜಸ್ಟ್' ಮಾಡಿ ತೂಕದಲ್ಲಿ ಮಾರೋ ಸಾಮಾನುಗಳನ್ನು ಹೇಗೆ ಕಡಿಮೆ ಮಾಡೋದು, ಖೋಟಾ ನೋಟ್ ಗಳನ್ನು ಹೇಗೆ  ಗಿರಾಕಿಗಳಿಗೆ ಸಾಗಿಸೋದು–ಇಂತಹ ಪ್ರಶ್ನೆಗಳಿಗೆ ಸಮಗ್ರವಾಗಿ ಮಾಹಿತಿ ಪಡೆದು ಬಂಗಾರಪ್ಪನವರು ಒಂದು ತಿಂಗಳಲ್ಲೇ ಎರಡರಷ್ಟು ಶ್ರೀಮಂತರಾದರು!

ಫೆಬ್ರವರಿ ಮಾರ್ಚ್ ತಿಂಗಳಾದರೆ ಸಾಕು ಬುದ್ಧಿ ಬೆಟ್ಟವನ್ನು ಹತ್ತೋದಕ್ಕೂ ಜಾಗ ಸಿಗೋದಿಲ್ಲ. ಬರಿ ವಿದ್ಯಾರ್ಥಿಗಳೇ  ತುಂಬಿರ್ತಾರೆ.  ಅವರಿಗೆ ತಮ್ಮ ಪರೀಕ್ಷೆಗಳ ಬಗ್ಗೆ ಕೇಳುವ ಪ್ರಶ್ನೆಗಳು ಅನೇಕ ಇರುತ್ತವೆ. ಈ ಮಧ್ಯೆ ನಮ್ಮ ಬಡಾವಣೆಯ ಪೋಲೀಸ್ ಇನ್ಸ್‌ಪೆಕ್ಟರ್ ತನ್ನ ಮಾಮೂಲಿ ಧಾಟಿಯಲ್ಲಿ" ನೀನು ಎಲ್ಲಿಂದ ಬಂದೆ, ನೀನು ಯಾರು? " ಅಂತ ಕೇಳಿದ. ಅದಕ್ಕೆ ಗೂಗಲಪ್ಪ " ನಾನು ವೇದವ್ಯಾಸ ಮಹರ್ಷಿಗಳ ಕಲಿಯುಗದ ರೂಪ.  ಪ್ರಪಂಚದ ಜನಕ್ಕೆ ಬುದ್ಧಿಕಲಿಸಬೇಕಿದೆ. ನೀನು ದೇಶಗಳನ್ನೆಲ್ಲಾ ಸುತ್ತಾಡಿ ಅಲ್ಲಿಯ ಜನಕ್ಕೆ ಸ್ವಲ್ಪ ಬುದ್ಧಿ ಕಲಿಸು ಅಂತ ಮಹರ್ಷಿಗಳು ಅಪ್ಪಣೆ  ಮಾಡಿದರು.

ಮೊದಲು ಅಮೇರಿಕಾದ ಸಿಲಿಕಾನ್ ವ್ಯಾಲಿಗೆ ಹೋಗು . ಆಮೇಲೆ ಭಾರತಕ್ಕೆ ಹೋಗು. ಈ ಎರಡು ಕಡೆಗಳಲ್ಲಿ ಇರೋ  ಪೆದ್ದರನ್ನೆಲ್ಲಾ ಬುದ್ಧಿವಂತರನ್ನಗಿ  ಮಾಡಿ ಆಮೇಲೆ ಮಿಕ್ಕ ದೇಶಗಳಿಗೆ ಹೋಗು ಅಂತ ಅಪ್ಪಣೆ ಮಾಡಿದರು. ಅಲ್ಲಿಗೆ ಮೊದಲು ಹೋದೆ. ಅಲ್ಲಿ ನಿಮ್ಮ ಬಸವಪ್ಪ ಬುದ್ಧಿವಂತಪ್ಪ  ಸಿಲಿಕನ್ ವ್ಯಾಲಿನಲ್ಲಿ ಕೆಲಸಕ್ಕೆ ಇದ್ದ. ಸಿಲಿಕನ್ ವ್ಯಾಲಿನಲ್ಲಿ ಇರುವವರೆಲ್ಲಾ ಕನ್ನಡಿಗರೇ ಅಂತ ಗೊತ್ತಾಯ್ತು. ನೇರವಾಗಿ ಇಂಡಿಯಾಗೆ ಹೋಗೋಣ ಬಾ ಅಂತ ಅವನು ಒತ್ತಾಯಿಸಿದ. ಅವನ ಸಹಾಯದಿಂದ ಇಲ್ಲಿಗೆ ಬಂದೆ" ಎಂದ.  "ಮುಂದೆ ಎಲ್ಲಿಗೆ ಹೋಗುತ್ತಿ?" ಅಂತ ಕೇಳಿದಕ್ಕೆ, ಇಂಡಿಯಾಗೆ ಬಂದಮೇಲೆ ಆಂಧ್ರ ಪ್ರದೇಶಕ್ಕೆ ಮತ್ತು ಗುಜರಾತ್‌ಗೆ ಹೋಗದೇ  ಇರೋದಕ್ಕೆ ಆಗುತ್ಯೆ?. ಅಲ್ಲಿಯ ಜನರನ್ನೂ ಬುದ್ಧಿವಂತರಾಗಿ ಮಾಡಿದರೆ ಅಮೇರಿಕಾದವರನ್ನೆಲ್ಲಾ ಮಾಡಿದ ಲೆಕ್ಕ. ಈಗ ಅಮೇರಿಕಾದಲ್ಲಿ  ಕಣ್ಣಿಗೆ ಬೀಳುವವರೆಲ್ಲಾ ಆಂಧ್ರವಾಳುಗಳು,

ಗುಜ್ಜುಗಳು" ಅಂತ ಗೂಗಲಪ್ಪ ಉತ್ತರಿಸಿದ.

ಯಾವಾಗ ನಮ್ಮ ಪ್ರಶ್ನೆಗಳಿಗೆಲ್ಲಾ ಉತ್ತರಗಳು ಸಿಗೋದಕ್ಕೆ ಶುರುವಾಯಿತೋ, ಆವಾಗಿನಿಂದ ನಮಗೆಲ್ಲಾ ಗೂಗಲಪ್ಪನ ಮೇಲೆ ಗೌರವ, ಭಕ್ತಿ ಮೂಡಿ ಬಂತು. ಅವನನ್ನು ಜ್ಞಾನ ಮೂರ್ತಿ, ಜ್ಞಾನೇಶ್ವರ, ಮಾಹಿತಿಯಪ್ಪ, ಸರ್ವಜ್ಞಸ್ವಾಮಿ ಅಂತೆಲ್ಲಾ ಹೆಸರಿಟ್ಟು, ಈ ಹೆಸರುಗಳಲ್ಲೇ ದಿನ ನಿತ್ಯ ಅರ್ಚನೆಗಳನ್ನು ಮಾಡಿಸಿ ಪ್ರತಿ ಶುಕ್ರವಾರ ಪ್ರಸಾದ ಅಂತ ಎಲ್ಲರಿಗೂ ಕೋಸಂಬರಿ ಹಂಚುವುದಕ್ಕೆ ಶುರು ಮಾಡಿದೆವು. ಪ್ರತಿ ಸೋಮವಾರ ಹೊರ ನಾಡುಗಳಿಂದ ಬಂದ ಪೆದ್ದರಿಗೆ ಮತ್ತು ನಮ್ಮಂತಹ ಸ್ಥಳೀಯ ಪೆದ್ದರಿಗೆ, ಊಟ ವ್ಯವಸ್ಥೆಯನ್ನೂ ಮಾಡಿದೆವು. ಗೂಗಲಪ್ಪನ ಆದೇಶದಂತೆ, ಬುಧವಾರದ ಸಂಜೆ ವೇಳೆ ಸ್ಯಾಂಡ್ ವಿಚ್, ಬರ್ಗರ್, ಆನಿಯನ್ ರಿಂಗ್ಸ್, ಪಾನ್ ಕೇಕ್, .ಡೋನಟ್–.ಇವನ್ನೆಲ್ಲಾ ಕೋಕೋ ಕೋಲಾ ಜೊತೆ ಕೊಡೋದಕ್ಕೂನೂ ವ್ಯವಸ್ಥೆ ಮಾಡಿದ್ವಿ. ಇದರಿಂದ ನೂರಾರು ಟೆಕ್ಕಿಗಳೂ ಬರೋಕ್ಕೆ ಶುರು ಮಾಡಿದರು. ಇಷ್ಟೊಂದು ಬುದ್ಧಿ ಕಡಿಮೆ ಇರೋ ಟೆಕ್ಕಿಗಳು ನಮ್ಮ ಎಲೆಕ್ಟ್ರಾನಿಕ್ಸ್ ಸಿಟಿ ನಲ್ಲಿ ಇದಾರೆ ಅಂತ ಆಗಲೇ ನಮಗೆ ಗೊತ್ತಾಗಿದ್ದು.

ಹೀಗಿರೋವಾಗ, ನಮ್ಮ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷರು ನಮ್ಮ ಗೂಗಲಪ್ಪನ ಸನ್ನಿಧಿಯಲ್ಲಿ ಒಂದು ಜಾತ್ರೆ ಯಾಕೆ ಮಾಡಬಾರದು, ಹೊರ ಹಳ್ಳಿ ಪಳ್ಳಿಗಳಿಂದಲೂ ಅನೇಕ ಪೆದ್ದರು ಬಂದು ಅವನ ದರ್ಶನ ಪಡೆಯಬಹುದು ಅಂತ ಸಲಹೆ ಮಾಡಿದರು. ಅದಕ್ಕೆ ನಾವೆಲ್ಲಾ ಒಪ್ಪಿದೆವು. ಮುಂದಿನ ತಿಂಗಳು ಎರಡನೇ ಶುಕ್ರವಾರ ಜಾತ್ರೆ ಇರುತ್ತೆ. ನಿಮಗೆ, ನಿಮ್ಮ ಮನೆಯವರಿಗೆ ಮತ್ತು ನಿಮ್ಮ ಪರಿಚಯದವರಲ್ಲಿ ಯಾರಿಗಾದರೂ ಬುದ್ಧಿ ಬೆಳೆಯ ಬೇಕಾಗಿದ್ದರೆ, ಅವರನ್ನೂ ಕರೆದುಕೊಂಡು ಬಂದು ಜಾತ್ರೆಯಲ್ಲಿ ಪಾಲುಗೊಳ್ಳಿರಿ. ಗೂಗಲಪ್ಪನ ಆಶೀರ್ವಾದ ನಿಮ್ಮೆಲ್ಲರ ಮೇಲೆ ಇರಲಿ. ನಮಸ್ಕಾರ. ■

---



# ಎಡಬಿಡಂಗಿ

**●ಕೆ.ಎಸ್. ಶ್ರೀಶೈಲನ್**

....ಅಂತಾರಲ್ಲ ಹಾಗೆ ಇತ್ಲಾಗಿ ಈ ಕಡೇನೂ ಇಲ್ಲ ಅತ್ಲಾಗಿ ಆ ಕಡೇನೂ ಇಲ್ಲ ಹಾಗಾಯ್ತು ನೋಡಿ ನನ್ನ ಪರಿಸ್ಥಿತಿ. ಏನದು ಅಂತೀರ ಇದನ್ನ ಓದಿ.

ಬೇಡವ್ರೋಂತ ಬೊಕ್ಕಲ್ ಬೋರಲ್ ಬಿದ್ದು ಬಡಕೊಂಡೆ, ಬೇಡಿಕೊಂಡೆ, ಬೆದರಿಸಿದೆ ದುಂಬಾಲು ಬಿದ್ದೆ, ಹೆತ್ತವರನ್ನು ಹೆದರಿಸಲು ಹಿಂದೆ ಬಿದ್ದೆ. ಕಂಡ ಕಾಣದ, ತಿಳಿದ, ತಿಳಿಯದ ಜನರ ಕಾಲಿಗೆ ಬಿದ್ದೆ. ಊಹೂಂ ಜಪ್ಪಯ್ಯ ಅಂದರೂ ನನ್ನ ಬೇಡಿಕೆ ಮುಂದಕ್ಕೆ ಜರುಗಲೇ ಇಲ್ಲ. ನನ್ನ ಕಲ್ಯಾಣ ಕಾರ್ಯಗಳ ಸಿದ್ಧತೆ, ಸಂಬಂಧವಿರಲಿ, ಇಲ್ಲದಿರಲಿ, ಎಲ್ಲರೂ ಸಂಪೂರ್ಣವಾಗಿ ಸಿದ್ಧತೆ ನಡೆಸಿಯೇ ಬಿಟ್ಟರು.

ಅಪ್ಪ, ಒಂದೇ ಮಾತಂದರು. "ನೀನಿರೋ ಲಕ್ಷಣಕ್ಕೆ, ನಿನಗೆ ಬರೋ ಸಂಬಳಕ್ಕೆ, ಆ ಹುಡುಗಿ ಒಪ್ಪಿಕೊಂಡಿರೋದೆ ಹೆಚ್ಚು! ಕರಕಟ್ಟು ತಾಳಿಕಟ್ಟು". ನನಗೆ ಬೇರೆ ದಾರೀನೆ ಇರಲಿಲ್ಲ. ಅಂತು ಗೃಹಸ್ಥನಾಗಿಬಿಟ್ಟೆ.

ಅಂದರೆ ಈ ಹಿಂದೆ ನಾನೇನಾಗಿದ್ದೆ. ಕಟ್ಟ ಬ್ರಹ್ಮಾಚಾರಿಯಾಗಿದ್ದೆ. ಏನೇನು ಸೌಲಭ್ಯ ಇತ್ತು. ಷಷ್ಠಿಯ ಪ್ರಯುಕ್ತ ಎಲ್ಲರಿಂದಲೂ ಆಹ್ವಾನ ಪಡೆಯುತ್ತಿದ್ದೆ. ನನಗೆ ವಿರಾಮವಿಲ್ಲದಿದ್ದರೂ ನನ್ನಂತಹ ನಿಷ್ಠಾವಂತ ಬ್ರಹ್ಮಚಾರಿಗಾಗಿ, ಷಷ್ಟಿಯನ್ನೆ ಮುಂದಕ್ಕೆ ಹಾಕ್ತಿದ್ದರು ಹಿರಿಯರೆಲ್ಲರೂ ಸಹ ಕಾಲತೊಳೆದು, ನಮಸ್ಕಾರ ಮಾಡಿ, ಯಾವ ಹೋಟಲಿನಲ್ಲೂ ಸಿಗದ ಊಟ ಹಾಕಿ, ಧೋತ್ರದ ಸಮೇತ ದಕ್ಷಿಣೆ ಕೊಟ್ಟುಕಳಸ್ತಾ ಇದ್ದರು. ಎಲ್ಲಾ ಸೂತಕ, ಪುರಡು, ಮೈಲಿಗೆಗಳಿಗೂ ನಾನು ಹೊರತು, ಮುಂಜಿ ಎಲ್ಲೆ ಆದರೂ, ಕುಮಾರ ಭೋಜನಕ್ಕೆ ನನಗೆ ಅಗ್ರಸ್ಥಾನ ಮೀಸಲು. ಆದರೆ ದೌರ್ಭಾಗ್ಯಕ್ಕೆ ನನಗೆ ಧರ್ಮಪತ್ನಿ ಬಂದು ಬಿಟ್ಟರೆ, ನಾನು ಈ ಸ್ಥಾನದಿಂದ ಖಂಡಿತ ಇಳಿದು ಬಿಡುತ್ತಿನಿ ಅಂತ ಸಹ ಗೊತ್ತಿದ್ದು.. ಗೊತ್ತಿದ್ದು.. ನಾನು ಈಗಿನ ಸ್ಥಿತಿಗೆ ನನ್ನನ್ನ ಒಡ್ಡಿಕೊಳ್ಳಬೇಕಾಯಿತು.

ಹೀಗಾಗಿ ನನ್ನ ಮೊದಲಿದ್ದ ಸೌಲಭ್ಯಗಳ ಅವಸಾನವಾಯ್ತು ಮೊದಲಿದ್ದ ನನ್ನ ಸ್ಥಾನ ಮಾನ ಗೌರವ ಎಲ್ಲದಕ್ಕೂ ತಿಲಾಂಜಲಿ. ಸರಿ ಮುಂದಿನದೇ ಗೃಹಸ್ಥಾಶ್ರಮ ವಿವಾಹವೋ ವಿವಾದವೋ ಅಂತಾರಲ್ಲ ಹಾಗೆ ಎಲ್ಲ ಅಂದಿನಿಂದಲೇ ಪ್ರಾರಂಭ. ಮಹರಾಯಿತಿ ಮಂಗವ್ವ (ತಪ್ಪು ತಿಳಿಬಾರದು ಅಲಮೇಲು ಮಂಗೈನ ಎಲ್ಲರೂ ಮಂಗವ್ವ ಅಂತಾನೇ ಕರೀತಿದ್ದರು) ಮುಹೂರ್ತ ಮುಗಿಸಿ ಮನೆಗೆ ಮುಂಗಾಲು ಇಡತಾನೆ ಸೇರಕ್ಕಿ ಮೇಲೆ ಮುಗ್ಗರಿಸಿದಳು ನನಗೆ ಜೀವ 'ಢಂ' ಅಂತು. ಮನೇಗೆ ಕನ್ನ ಹಾಕಿದರೂ, ಚಿನ್ನ ಬಿಟ್ಟು, ಅಕ್ಕಿ ತಗೊಂಡು ಹೋಗೋ ಈ ಕಾಲದಲ್ಲಿ ಕಾಳುಗಳೆಲ್ಲ ಚೆಲ್ಲಾಪಿಲ್ಲಿ ಆಗಿದ್ದವು. ಸೇರು ಒಂದು ರೌಂಡು ಹಾಕಿತ್ತು. ಬೆಲ್ಲದಚ್ಚು ಚೂರುಚೂರು ಆಗಿತ್ತು.

ಇಲ್ಲಿಂದ ಶುರು ಆಯ್ತು ನೋಡೀಪ್ಪ, ನನ್ನ ಇದೂ ಅಲ್ಲದ ಅದೂ ಅಲ್ಲದ ಅರ್ಧಾಂಗ ಜೀವನ. ಮೊದಲ ತರಹ ಬ್ರಹ್ಮಚಾರಿಗಳ ಗುಂಪಿಗೆ ಹೋಗೋ ಹಾಗೇ ಇಲ್ಲ. ಮದುವೆ ಮುಂಜಿಗಳಿಗೆ ಹೋದರೆ, ಇನ್ನೂ ಎಳೆಸು ಅನ್ನೋ ಭಾವದಿಂದ ದೂರ ಇಡತಾ ಇದ್ದರು ದೊಡ್ಡವರು.

ಇನ್ನೂ ಖರ್ಚು! ಬ್ರಹ್ಮಚಾರಿಯ ಷಷ್ಟಿ ವರಮಾನ ಸೊನ್ನೆ. ಖರ್ಚು ಡಬಲ್ ಹೆಂಡತಿ ಜೊತೇಲಿ ಹೋಗಾಟ ಬರಾಟ, ಇದಕ್ಕಾಗಿ ಹಾಗೂ ಒಬ್ಬನೇ ಹೋದರೆ ಎದುರುಗಿರೋ ನನ್ನ ಬಿಟ್ಟು ಎಲ್ಲಿ ನಿಮ್ಮವರು ಬರಲಿಲ್ವಾ, ಅನ್ನೋ ಪ್ರಶ್ನೆಗೆ ಉತ್ತರಿಸಬೇಕು. ಈ ಎರಡೂ ಆಶ್ರಮಕ್ಕೆ ಬದಲಾಗಿ ಯಾವುದಾದರೂ ಆಶ್ರಮ ಸೇರ್ಕೊಂಡಿದ್ರೆ ಎಷ್ಟೋ ಚೆನ್ನಾಗಿರುತ್ತಿತ್ತು. ಏನು ಮಹಾ, ಡ್ರೆಸ್‌ಬೇರೆ ಕಾಷಾಯ ಅಷ್ಟೆ. ಆದರೆ ಮಠದ ಆಸ್ತಿ ? ಈಗಲೂ ಮಿಂಚಿಹೋದದ್ದು ಏನು ಮಹಾ! ಯಾವುದಾದರೂ ಮಠದ ಪೀಠ ಖಾಲಿ ಇದ್ರೆ ಹೇಳಿಸಾರ್. ನಾನು ರೆಡಿ ಫೋನ್ ನಂ. ಕೊಡಿ ಸಾಕು. ಮಿಕ್ಕಿದ್ದು ನಾನು ನೊಡ್ಕೋತೀನಿ. ಆದರೆ ಪಾದ ಪೂಜೆಗೆ ಖಂಡಿತ ಬರಬೇಕು ಸರೀನ. ■

---

## ಟಿ.ಎಸ್.ಆರ್ ಅವರ ಭೂಬಾಣದಲ್ಲಿನ ಅಣಕ

### (ಸೂರ್ಯಂಗು ಚಂದ್ರಂಗು ಬಂದಾರೆ ಮುನಿಸು ಧಾಟಿಯಲ್ಲಿ)

ಈಚೆಗೆ ಬೆಂಗಳೂರಿನಲ್ಲಿ ಸೇರಿದ ಕನ್ನದ ಚಿತ್ರ ತಯಾರಕರ ಕೂಟದ ಸಂದರ್ಭದಲ್ಲಿ ಹಿಂಬದಿಯ ಸಾಲಿನಿಂದ ಸೋರಿಬರುತ್ತಿದ್ದ ಈ ರಾಗವನ್ನು ಕೇಳಿಸಿಕೊಂಡ ನಮ್ಮ ಚಿತ್ರಗುಪ್ತ ಸಮಯೋಚಿತವಾದ ಈ ಸಾಲುಗಳನ್ನು ಮೆಲುಕು ಹಾಕಿದ.

**ಫಿಲ್ಲಮಿಂಗು ಹಂಚಿಕೆಗು ಬಂದಾರೆ ಮುನಿಸೂ**
**ತೆಗೆದವರಿಗೆ ಮಣ್ಣೇನ್ನ ಉಣಿಸು**

**ಚಿತ್ರರಂಗು ಥೇಂಬರಿಗು ಬಂದಾರೆ ಮುನಿಸೂ**
**ಪರದೆಮೇಗೇನೈತೆ ಸೊಗಸೂ**

**ಫಿಲಮಿಂಗು ಥೇಟರಿಂಗು ಬಂದಾರೆ ಮುನಿಸೂ**
**ಗಲ್ಲ ಕ್ಕೆ ಬೀಗಾವ ಬಿಗಿಸು**

**ಥೇಂಬರಿಂಗು ಫೋರಮಿಂಗು ಬಂದಾರೆ ಮುನಿಸೂ**
**ಸಿನಿಮಾದಾಗೇನೈತೆ ಪುಲಿಸು**

**(ಪಿಚ್ಚರ್) ಇಳಿಸೋನ್‌ಗೂ ( ಡಬ್ಬ ಕಳಿಸೋನ್ ಗು )**
**( ನಿರ್ಮಾಪಕನ್ನ ) ಅಳಿಸೋನ್‌ಗು ( ಚಿತ್ರ ) ಬಳಸೋನ್‌ಗು**
**ಬಂದಾರೆ ಮುನಿಸೂ**
**ದಂಧೆಯೊಳಗೇನೈತೆ ಸೊಗಸು**

# ಆಟೋ ಚಾಲಕರ ಚಾಣಾಕ್ಷತೆ

**●ಕೆ. ಎನ್. ಸುಬ್ಬರಾವ್**

ನಾನು ಚಿಕ್ಕವನಾಗಿದ್ದಾಗ ಸುಮಾರು 50ರಿಂದ 60ದಶಕದ ಅವಧಿಯಲ್ಲಿ ಸಾಮಾನ್ಯ ಜನರಿಗೆ ಓಡಾಡಲು ಇದ್ದದ್ದು ಜಟಕ ಗಾಡಿ, ಎತ್ತಿನಗಾಡಿ, ನಗರ ಸಾರಿಗೆ ಸಂಸ್ಥೆಯ ಬಸ್ಸುಗಳು ಅಷ್ಟೆ. ಬೆಂಗಳೂರು ಬೆಳೆಯುತ್ತಿದ್ದಂತೆ ಅದಕ್ಕೆ ಅನುಗುಣವಾಗಿ ಜನರ ಜೀವನ ಶೈಲಿಯೂ ಬದಲಾಗುತ್ತಾ ಬಂದಿತು. ಅನುಕೂಲಗಳು ಮಾರ್ಪಾಟಾಯಿತು. ಸುಮಾರು 1959ರಲ್ಲಿ ಬೆಂಗಳೂರಿಗೆ ಆಟೋ ರಿಕ್ಷಾ ಆಗಮನವಾಯಿತು. ಈ ಸೌಲಭ್ಯ ಆರಂಭವಾದಮೇಲೆ ಪಾಪ, ಜಟಕಗಾಡಿ, ಎತ್ತಿನಗಾಡಿ ಓಡಿಸುವವರಿಗೆ ದೊಡ್ಡ ಹೊಡೆತವೇ ಬಿತ್ತು. ಬೆಂಗಳೂರಿನ ರಸ್ತೆಗಳಲ್ಲಿ ಎಲ್ಲೆಲ್ಲಿ ನೋಡಿದರೂ ಆಟೋರಿಕ್ಷಾಗಳದ್ದೇ ಓಡಾಟ. ಶಬ್ದ, ಜನರಿಗೆ ಅದೇನೋ ಹೊಸಹುರುಪು ಬಂದಂತೆ ಓಡಾಟ ಅಲೆದಾಟ ಶುರುವಾಯಿತು. ಮೊದಲಿಗೆ ಇಬ್ಬರು ಪ್ರಯಾಣಿಕರಿಗೆ ನಿಗದಿಯಾಗಿದ್ದು ನಂತರ ಮೂರು ಮಂದಿಗೆ ಅವಕಾಶ ನೀಡಿದ್ದು ಸಾಮಾನ್ಯ ಜನರಿಗೆ ಬಹಳ ಅನುಕೂಲವಾಯಿತು.

ಇನ್ನು ಆಟೋ ಚಾಲಕರ ನಡತೆ, ವರ್ತನೆ, ಅತಿಯಾಸೆ ಬಗ್ಗೆ ಹೇಳುವುದಾದರೆ, ಕೆಲವರು ಬಹಳ ಮೃದು ಸ್ವಭಾವದವರು, ಹಲವರು ಒಂದು ತರಹ ವ್ಯವಹಾರಸ್ಥರು. ಇನ್ನೂ ಕೆಲವರು ಸ್ವಲ್ಪ ಉದಾರಿಗಳು. ನಾನೂ ಸಹ ನನ್ನ ಸ್ವಂತ ವಾಹನ ಓಡಿಸುವುದನ್ನು ಬಿಟ್ಟ ಮೇಲೆ ಈ ಆಟೋಗಳನ್ನೇ ಅವಲಂಬಿಸಬೇಕಾಯಿತು. ನನ್ನ ಕೆಲವು ಅನುಭವಗಳನ್ನು ಮುಂದೆ ಓದಿ.

2020ರ ಮಾರ್ಚ್‌ನಲ್ಲಿ ಕೊರೊನಾ ಹೆಮ್ಮಾರಿಯ ಅಬ್ಬರ ಪ್ರಾರಂಭವಾಗಿ ಜನರು ಬೇಸತ್ತು ಮನೆಗಳಲ್ಲೇ ಉಳಿಯುವಂತಾಯಿತು. ಸುಮಾರು ಒಂದೂವರೆ ವರ್ಷಗಳಾದ ನಂತರ ಹೆಮ್ಮಾರಿಯ ಅಬ್ಬರ ಸ್ವಲ್ಪ ತಗ್ಗಿದ ಮೇಲೆ ಜನರು ಓಡಾಡಲು ಪ್ರಾರಂಭಿಸಿದರು. ಈ ಸಂದರ್ಭದಲ್ಲಿ ಎನ್.ಆರ್. ಕಾಲೋನಿಯಲ್ಲಿರುವ ನನ್ನ ಕಸಿನ್ ಒಬ್ಬರು ಅನಾರೋಗ್ಯದಿಂದ ನರಳಿ ಚೇತರಿಸಿಕೊಂಡಿದ್ದರು. ಅವರನ್ನು ನೋಡಲು ಮನಸ್ಸಾಯಿತು. ಸರಿ ಅವರ ಮನೆಗೆ ಹೋಗಿ ಉಭಯಕುಶಲೋಪರಿ ವಿಚಾರಿಸಿ ಬರೋಣವೆಂದು ಆಟೋ ಹತ್ತಿದೆ, ಅವರ ಮನೆಯ ಮುಂದೆ ಇಳಿದು ಇನ್ನೇನು ಬಾಡಿಗೆ ಕೊಡುವಷ್ಟರಲ್ಲಿ ಆಟೋ ವಾಲಕ, "ಸಾರ್, ನನ್ನ ಮಗಳು ಕಾಲೇಜಿನಲ್ಲಿ ಓದುತ್ತಿದ್ದಾಳೆ, ಫೀಸ್ ಕಟ್ಬೇಕು, ನನ್ನಲ್ಲಿರುವ ಹಣ ಸಾಲುವುದಿಲ್ಲ ಸ್ವಲ್ಪ ಸಹಾಯಮಾಡಿ ಅಂತ ಹೇಳಿ ಒಂದು ನೋಟುಗಳ ಕಟ್ಟನ್ನು ತೋರಿಸಿದ. ನಾನು ಮಾನವೀಯತೆಯನ್ನು ತೋರಿಸಲು ಬಾಡಿಗೆ ಜೊತೆ ಇನ್ನೂ ಇನ್ನೂರು ರೂಪಾಯಿಗಳನ್ನು ಕೊಟ್ಟು ಅವನ ಹೆಸರು, ಆಟೋ ನಂಬರ್ ವಿವರಗಳನ್ನು ಪಡೆದು ನನ್ನ ಕಸಿನ್ ಮನೆಯ ಒಳಗೆ ಹೋದೆ.

ಮನೆಗೆ ವಾಪಸ್ ಬಂದ ಮೇಲೆ ಈ ವಿಷಯವನ್ನು ಯಾರಿಗೂ ಹೇಳದೆ ಸುಮ್ಮನಿದ್ದೆ. ಇನ್ನೆರಡು ದಿನಗಳು ಕಳೆದಿರಬಹುದು, ನನ್ನ ಶ್ರೀಮತಿ, ಚಾಮರಾಜಪೇಟೆಯಲ್ಲಿರುವ ಕನ್ನಡ ಗಣಕ ಪರಿಷತ್‌ಗೆ ಹೋಗಲು ಯೋಚಿಸಿ ಒಂದು ಆಟೋ ಹತ್ತಿದಳು. ಆ ಆಟೋ ಚಾಲಕ ಸಮವಸ್ತ್ರ ಧರಿಸದೇನೆ ಆಟೋ

ಓಡಿಸ್ತಿದ್ದ. ಪೋಲೀಸ್ ಅವನನ್ನು ಇನ್ನೇನು ಹಿಡಿಯಬೇಕು ಅನ್ನುವಷ್ಟರಲ್ಲಿ ಟ್ರಾಫಿಕ್ ಸಿಗ್ನಲ್ ದೀಪ ಹಸಿರು ಬಣ್ಣಕ್ಕೆ ಬದಲಾದ ತಕ್ಕಣ ಜೋರಾಗಿ ಮುಂದಕ್ಕೆ ಹೊರಟುಹೋದ. ನಂತರ ನನ್ನ ಶ್ರೀಮತಿಯನ್ನು ಗಣಕ ಪರಿಷತ್ ಹತ್ತಿರ ಇಳಿಸಿ, " ನೋಡಿಮ್ಮಾ. ನನ್ನ ಮಗ ಕಾಲೇಜಿನಲ್ಲಿ ಓದುತ್ತಾ ಇದ್ದಾನೆ, ಫೀಸ್ ಕಟ್ಟಲು ಹಣ ಸಾಲದು ಸ್ವಲ್ಪ ಸಹಾಯ ಮಾಡಿ ಅಂದ" ಅದೃಷ್ಟವಶಾತ್ ನನ್ನ ಹೆಂಡತಿ ಪರ್ಸ್‌ನಲ್ಲಿ ಜಾಸ್ತಿ ಹಣ ಇಲ್ಲದ್ದರಿಂದ ಆಟೊ ಚಾಲಕನ ಫೋನ್ ನಂಬರ್ ತೆಗೆದುಕೊಂಡು ಮನೆಯ ಗುರುತು ಹೇಳಿ ಮನೆಗೆ ಬಾ, ಏನಾದರೂ ಸಹಾಯ ಮಾಡ್ತೀನಿ, ಆದರೆ ನಿನ್ನ ಮಗನ ಐಡೆಂಟಿಟಿ ಕಾರ್ಡ್ ತಂದು ತೋರಿಸು ಅಂತ ಹೇಳಿ ತನ್ನ ಕೆಲಸ ಮುಗಿಸಿ ಮನಗೆ ಬಂದಳು. ಅಂದಿನ ಆಟೊ ಚಾಲಕನ ವರ್ತನೆ ವಿವರವಾಗಿ ನನಗೆ ತಿಳಿಸಿದಳು.

ಆಟೊ ಚಾಲಕ ಮರುದಿನ ನಮ್ಮ ಮನೆಯ ಬಾಗಿಲಲ್ಲಿ ಹಾಜರ್, ಯಥಾಪ್ರಕಾರ ಅವನನ್ನು ನೋಡಿದ್ದು ನನ್ನ ಹೆಂಡತೀನೆ. ಸರಿ, ಐಡೆಂಟಿಟಿ ಕಾರ್ಡ್ ತೋರಿಸು, ಎಂದು ಹೇಳಿದ ಕೂಡಲೇ, ಇಲ್ಲ ಅದನ್ನು ಕಾಲೇಜಿನವರು ಇಟ್ಕೊಂಡಿದ್ದಾರೆ ಅಂತ ಏನೋ ಕಾರಣ ಹೇಳಿದ. ಆ ಸಮಯಕ್ಕೆ ಸರಿಯಾಗಿ ನಾನು ಸಹ ಅವನನ್ನು ನೋಡಿ ಏನ್ರೀ ಸ್ವಾಮಿ. ಅಂದೆ. ಅವನು ವಿಚಲಿತನಾಗಿ ನನ್ನನ್ನು ನೋಡಿಯೇ ಇಲ್ಲವೇನೋ ಅನ್ನೋ ತರಹ ನಾಟಕವಾಡಿದ, ನಾನು ಅಷ್ಟಕ್ಕೇ ಬಿಡದೆ ಕೆಲವು ದಿನಗಳ ಹಿಂದೆ ಅವನು ನನ್ನನ್ನು ನರಸಿಂಹರಾಜ ಕಾಲೋನಿಗೆ ಕರೆದುಕೊಂಡು ಹೋದದ್ದು, ಇನ್ನೂರು ರೂಪಾಯಿ ಕೊಟ್ಟಿದ್ದು ಎಲ್ಲಾ ವಿವರಿಸಿದ ಮೇಲೆ ಅವನು ದಿಗ್ಭ್ರಾಂತನಾಗಿ ಪೆಚ್ಚಾದ. ಅವನ ಪೇಚಾಟವನ್ನು ನೋಡಿ ನೂರು ರೂಪಾಯಿ ಕೊಟ್ಟು ಕಳಿಸಿದ್ದಾಯಿತು.

ಇನ್ನೊಂದು ಸಲ ನಾನೊಬ್ಬನೇ ಬುಲ್ ಟೆಂಪಲ್ ರಸ್ತೆಯ ಬದಿಯಲ್ಲಿರುವ ಮ್ಯಾಕ್‌ಡೊನಾಲ್ಡ್ ಹೋಟೆಲ್ ಮುಂದೆ ಪಾದಚಾರಿ ಮಾರ್ಗದಲ್ಲಿ ಬರುತ್ತಿರುವಾಗ ಒಂದು ಆಟೊ ಬಹಳ ಹತ್ತಿರ ಬಂದು ನಿಂತಿತು. ನಾನು ಅದನ್ನು ಲೆಕ್ಕಿಸದೆ ನನ್ನ ಪಾಟಿಗೆ ಬರ್ತಾ ಇದ್ದೆ. ಆದರೆ ಆ ಅಟೊ ಚಾಲಕ ತ್ರಿವಿಕ್ರಮನ ಬೇತಾಳದಂತೆ ಹತ್ತಿರ ಬಂದು, "ಏನ್ರೀ ನನ್ನನ್ನ ಮರೆತುಬಿಟ್ರಾ? ಹೈಸ್ಕೂಲಲ್ಲಿ ನಿಮ್ಮ ಕ್ಲಾಸ್‌ಮೇಟ್ ಅಂತ ಏನೋ ಹೆಸರು ಹೇಳಿ ಬನ್ನಿ ಬನ್ನಿ ನಿಮ್ಮ ಮನೆಗೆ ಬಿಡ್ತೀನಿ" ಅಂತ ಬಲವಂತದಿಂದ ಆಟೋನಲ್ಲಿ ಕರೆದುಕೊಂಡು ಬಂದು ಬಿಟ್ಟ, ನಾನು ಇಳಿದು ಎರಡು ಹೆಜ್ಜೆ ಹಾಕುವಷ್ಟರಲ್ಲಿ ಆ ಚಾಲಾಕಿ ಚಾಲಕ ಮುನ್ನೂರು ರೂಪಾಯಿ ಇದ್ರೆ ಕೊಡ್ತೀರಾ ಅಂತ ಕೈ ಒಡ್ಡಿದ. ನಾನು ನನ್ನಲ್ಲಿದ್ದ ಇನ್ನೂರು ರೂಪಾಯಿಯನ್ನು ಕೊಟ್ಟು ಬೈ ಅಂದೆ. ಇದುವರೆಗೂ ಅವನ ಮುಖ ಮತ್ತೆ ಕಂಡಿಲ್ಲ. 1958ರಲ್ಲಿ ತೆಗೆದ ನಮ್ಮ ಹೈಸ್ಕೂಲು ಫೋಟೋನಲ್ಲಿ ಭೂತಗನ್ನಡಿ ಹಿಡಿದು ಅವನ ಮುಖ ಕಾಣಿಸುತ್ತೇನೋ ಅಂತ ಹುಡುಕಿ ಸುಸ್ತಾದೆ. ಒಟ್ಟಿನಲ್ಲಿ ಹೇಳುವುದಾದರೆ ಆಟೊ ಚಾಲಕರ ಬೇಡಿಕೆಗಳು ಎಷ್ಟು ನಿಜವೋ ಎಷ್ಟು ಸುಳ್ಳೋ ನಿರ್ಧರಿಸುವುದು ಬಹಳ ಕಷ್ಟ. ಅದೊಂದು ಯಕ್ಷಪ್ರಶ್ನೆ.

ನೋಡಿ, ಆಟೊ ಚಾಲಕರು ಹಣಸಂಪಾದಿಸಲು ಏನೇನು ಉಪಾಯ ಮಾಡ್ತಾರೆ ಅಂತ. ನಿಮಗೂ ಈ ತರಹ ಅನುಭವ ಆಗಿದೆಯೇ?

■

# ಮಡದಿಯ ಬೈಗುಳ

●ಎಚ್.ಡುಂಡಿರಾಜ್

ಮಡದಿಯ ಬೈಗುಳ ಬೈಗುಳವಲ್ಲ ಕಾವ್ಯ
ಒಂದೇ ರಾಗ ಒಂದೇ ತಾಳ ಆದರೂ ಸುಶ್ರಾವ್ಯ

ಹೊಸ ಹೊಸ ಹೋಲಿಕೆ, ಅದ್ಭುತ ಕಲ್ಪನೆ
ಪ್ರಾಸ, ಲಯ, ಪದಮೈತ್ರಿ
ಗಂಡನ ಬೈಯಲು ತೊಡಗಿದಳೆಂದರೆ
ಹೆಂಡತಿಯೂ ಕವಯಿತ್ರಿ

ಹೇಗೇ ಬಯ್ಯಲಿ ಎಷ್ಟೇ ಗೊಣಗಲಿ
ಮಡದಿಯ ದನಿಯೇ ಜೇನು
ಬೈಗುಳ ಭಕ್ಷ್ಯವ ಸವಿಯುತ ಗಂಡ
ಸುಮ್ಮನಿರುವುದೇ ಚೆನ್ನು

ಬೆನ್ನನು ತಿರುಗಿಸಿ ಒಂದೇ ಸಮನೆ
ಗೊಣಗುತ ಬೈಯುತಲಿದ್ರೆ
ಪತ್ನಿಯ ಬೈಗುಳ ಪತಿಗದೆ ಜೋಗುಳ
ಬರುವುದು ಬೇಗನೆ ನಿದ್ರೆ!



# ದುಡ್ಡು ಎಣಿಸೋ ದುರ್ದೈವ

●ಕವಿತಾ ಹೆಗಡೆ ಅಭಯಂ

ಚಿಕ್ಕಂದಿನಿಂದಲೂ ಯಾಕೋ ಗೊತ್ತಿಲ್ಲ, ಯಾರಾದ್ರೂ ದುಡ್ಡು ಎಣಿಸೋಕೆ ಕೊಟ್ರೆ ನನಗೆ ಸತ್ತೆ– ಕೆಟ್ಟೆ ಅನ್ನಿಸಿಬಿಡುತ್ತಿತ್ತು. ಮುನ್ನೂರೈವತ್ತು ರೂಪಾಯಿ ಆದ್ರೆ ಐದುನೂರು ರೂಪಾಯಿಯ ನೋಟು ಕೊಟ್ಟು ಚಿಲ್ಲರೆ ಪಡೆಯುವಾಗ ಸರಿಯಾಗಿ ಕೊಟ್ರಾ ಅಂತ ಯಾವಾಗಲೂ ಅನುಮಾನ ಆಗ್ತಿತ್ತು. ನೂರಾ ಐವತ್ತು ಕೈಗೆ ಬಂದರೆ ಯಾಕೋ ಅನುಮಾನ, ಇನ್ನೂರೈವತ್ತು ಕೊಡಬೇಕಿತ್ತಾ, ಢಗ ಬಿದ್ನಾ ಅಂತ ಭಯಂಕರ ಭಯವಾಗ್ತಿತ್ತು. ನನ್ನ ದುಡ್ಡು ಎಣಿಸೋ ಸ್ಕಿಲ್ ಅಷ್ಟು ಸ್ಟ್ರಾಂಗ್ ಗೊತ್ತಾ!

ಒಂದು ದಿನ ಗೆಸ್ಟ್ ಒಬ್ಬರು ಬಂದವರು "ದೊಡ್ಡವಳಾದ ಮೇಲೆ ಸ್ಪರ್ಧಾತ್ಮಕ ಪರೀಕ್ಷೆ ಬರಿ .ಅದರಲ್ಲೂ ಬ್ಯಾಂಕಿನಲ್ಲಿ ನೌಕರಿ ಸಿಕ್ಕಿದ್ರೆ ತುಂಬಾ ಚಲೋ ನೋಡು ಕೂಸೇ ." ಅಂದುಬಿಟ್ಟಿದ್ದು ಎದೆಗೆ ದೊಡ್ಡ ಮೊಳೆ ಹೊಡೆದ ಹಾಗೆ ನೆಟ್ಟುಕೊಂಡಿತು. "ದೊಡ್ಡವಳಾದ ಮೇಲೆ .ಬ್ಯಾಂಕು ದುಡ್ಡು ಎಣಿಸೋದು ." ಈ ಮಾತುಗಳು ಗಿರಗಿಟ್ಟಿಯ ಹಾಗೆ ನನ್ನ ಸುತ್ತ ತಿರುಗಿ ಬ್ಯಾಂಕ್ ಅಂದರೇ ಹೆದರಿ ಜಿಗಿದು ಓಡುವ ಹಾಗೆ ಮಾಡಿದ್ವು.

ದೊಡ್ಡವಳಾದ ಮೇಲೆ ಅಂತೂ ಟೀಚರ್ ಆಗಿ ಸೇರಿಕೊಂಡು ಭಾರೀ ಸಂತೋಷ ಪಟ್ಟೆ, ಸದ್ಯ ದುಡ್ಡಿನ ಲೆಕ್ಕಾಚಾರ ಇಲ್ವಲ್ಲಾ ಅಂತ! ಅಯ್ಯೋ.. ಏನು ಕೇಳ್ತೀರಿ ಸ್ವಲ್ಪ ದಿವಸದಲ್ಲೇ ಶುರುವಾಯ್ತು .ಅದೇನೋ ಸ್ಟ್ಯಾಂಪು, ಆನ್ಯುಯಲ್ ಡೇ, ಸ್ಕೂಲ್ ಟ್ರಿಪ್ಪು, ಸಿ ಬಿ ಎಸ್ ಸಿ ರಿಜಿಸ್ಟ್ರೇಷನ್ ಅದು ಇದು ಎಂದು ಮಕ್ಕಳು ಕಾಂಚಾಣ ತಂದು ಝಣ ಝಣ ಎಂದು ದಿಗಿಣ ಹಾಕಿದವು! ನಾನೋ ದುಡ್ಡು ಎಣಿಸೋಕೆ ತುಂಬಾ ಸೋಮಾರಿ. ಒಂದೆರಡು ಸಾರಿ ಅವರ ದುಡ್ಡನ್ನೂ ನನ್ನ ಪರ್ಸಿಗೆ ಸೇರಿಸಿದ್ದನ್ನು ಮರೆತು ಚೆನ್ನಾಗಿ ಶಾಪಿಂಗ್ ಮಾಡಿ ಬಂದೆ. ಮರುದಿನ ಆಫೀಸ್ನಲ್ಲಿ ಹಣ ಕೊಡಬೇಕು.. ಎಲ್ಲಿತ್ತು ದುಡ್ಡು? ಈಗಿನ ಹಾಗೆ ಕ್ಯಾಶ್ಲೆಸ್ ಸೊಸೈಟಿ ಇಲ್ಲದ ಕಾಲದಲ್ಲಿ ಪರ್ಸಿನಲ್ಲಿ ಒಂದು ನೂರು ರೂಪಾಯಿ ಮಾತ್ರ ಉಳಿದುಕೊಂಡು ಅಣಕಿಸಿ ಪಾಠ ಕಳಿಸಿತ್ತು. ಮನೆಗೆ ಫೋನು ಮಾಡಿ ಮೆತ್ತಗೆ ಹಣ ತರಿಸಿ ಕೊಟ್ಟೆ!

ಹೋದ ವರ್ಷ ಒಮ್ಮೆ ಬ್ಯಾಂಕಿಗೆ ಹೋಗಿದ್ದೆ. ಅಲ್ಲಿ ಕೂತ ಚೆಂದದ ಅಮ್ಮಣ್ಣಿಯೊಬ್ಬಳು ಸರರ್ರ .ಭರರ್ರ ಅಂತ ನೋಟು ಎಣಿಸುವುದನ್ನು ನೋಡಿ ಒಂದು ಕ್ಷಣ ಎದೆಯ ದೀಪವೇ ಹಾರಿ ಹೋಯ್ತು! ಪುಣ್ಯಕ್ಕೆ ನಾನು ಬ್ಯಾಂಕಿನಲ್ಲಿ ನೌಕರಿಗೆ ಸೇರಿಲ್ಲ ಅಂತ ತುಂಬಾ ಸಂತೋಷವಾಗಿ ಪುಗ್ಗಿಯಂತೆ ಊದಿಕೊಂಡೇ ಮನೆ ಸೇರಿದೆ.

ಇನ್ನೊಂದು ದಿನ ಮತ್ತೆ ಹೋಗಬೇಕಾಯ್ತು. ಅದೇ ಚೆಂದದ ಪರಿಚಯದ ಅಮ್ಮಣ್ಣಿ ಕೂತು ನೋಟು ಎಣಿಸುತ್ತಿದ್ದಳು. ಹೆಚ್ಚಿನ ಜನರು ಕ್ಯೂದಲ್ಲಿ ಇರದೇ ಇದ್ದದ್ದರಿಂದ ಧೈರ್ಯಮಾಡಿ ಕೇಳಿಯೇ ಬಿಟ್ಟೆ. "ಮೇಡಂ, ದುಡ್ಡು ಎಣಿಸೋ ಕೆಲಸ ನೀವು ಎಂಜಾಯ್ ಮಾಡ್ತೀರಾ? " ಅಂತ. ಅವಳು ತಟ್ಟನೆ ಹಾವಿನ ಹೆಡೆ ಎತ್ತಿದ ಹಾಗೆ ನನ್ನ ಕಡೆ ತಲೆಯೆತ್ತಿ ನೋಡಿ, "ಎಂಜಾಯಾ ಮಣ್ಣು..ಅಯ್ಯೋ ಇಡೀ ದಿನ ಅಟೆಂಟಿವ್ ಆಗೇ ಇರ್ಬೇಕು.. ಒಂದು ಕ್ಷಣ ಮೈಮರೆತೆ ಅಂದ್ರೆ

ಕುತ್ಗೆಗೇ ಬರುತ್ತೆ ." ಎಂದಳು! ಕನ್ನಡ ಧಾರಾವಾಹಿಗಳಲ್ಲಿ ಮೂರು ಮೂರು ಸಲ ಒಂದೇ ಶಬ್ದ ರಿಪೀಟ್ ಮಾಡ್ತಾರಲ್ಲಾ ಹಾಗೆ "ಕುತ್ಗೆಗೇ ಬರುತ್ತೆ ಕುತ್ಗೆಗೇ ಬರುತ್ತೆ ಕುತ್ಗೆಗೇ ಬರುತ್ತೆ " ಅಂತ ನನ್ನ ತಲೆಯಲ್ಲೂ ರಿಪೀಟ್ ಆಗೋಕೆ ಶುರುವಾಯ್ತು.. "ಈಯಮ್ಮ ಗ್ರೇಟೇ ನಾನೇನಾದ್ರೂ ಇಲ್ಲಿದ್ರೆ ಮೊದಲನೇ ದಿನವೇ ಕುತ್ಗೆಗ್ ಬಂದಿರೋದು " ಅಂದುಕೊಳ್ಳುತ್ತಾ ಗಾಡಿ ಸ್ಟಾರ್ಟ್ ಮಾಡಿಕೊಂಡು ವೇಗವಾಗಿ ಬಂದ್ಬಿಟ್ಟೆ.

ಅಂಗಡಿಯೊಂದಕ್ಕೆ ಹೋದಾಗ ಚಿಲ್ರೆ ವಾಪಸ್ಸು ತಗೋಳೋ ಪದ್ಧತಿಯೇ ಇಲ್ಲ ನಂದು. 43 ರೂಪಾಯಿಗೆ 50 ರೂಪಾಯಿ ನೋಟು ಕೊಟ್ಟು, "ಮತ್ತೆ 7 ರೂಪಾಯಿನ ಚಾಕ್ಲೆಟ್ ಕೊಡಿ, ರೌಂಡ್ ಫಿಗರ್ ಆಗ್ಲಿ " ಅಂದೆ. ಪಕ್ಕದಲ್ಲಿ ನಿಂತ ಹಾಳಾದೋನೊಬ್ಬ ಗುಂಡು ಗುಂಡಕ್ಕಿದ್ದ ನನ್ನನ್ನು ಮೇಲಿಂದ ಕೆಳಗೆ ನೋಡಿ "ಹೌದ್ರೀ ರೌಂಡ್ ಫಿಗರ್ .ಒಳ್ಳೇದು " ಅಂದ ನೋಡಿ. ಅವತ್ತಿಂದ ಆ ಶಬ್ದದ ತಂಟೆಗೆ ಹೋಗಿಲ್ಲ ನಾನು ಗೊತ್ತಾ?

ಮೂರು ವರ್ಷಗಳ ಹಿಂದೆ ಯಾರೋ ಹೇಳಿದ್ರು "ಸೂಪರ್ ಮಾರ್ಕೆಟ್ ಸಂಸ್ಕೃತಿಯನ್ನ ಬೆಳೆಸಬಾರದು ನಮ್ಮ ರೈತರ ಬಳಿ ಸಂತೆಯಲ್ಲಿ ವ್ಯಾಪಾರ ಮಾಡಿ ಅವರ ಬಲ ಹೆಚ್ಚಿಸಬೇಕು" ಅಂತ. ಅಹುದಹುದು ಎಂದು ತಲೆದೂಗಿ ಸಂತೆಗೆ ಒಬ್ಬಳೇ ಹೋಗಿದ್ದೆ. ಯಾವಾಗ್ಲೂ ಜೊತೆಗೆ ನಮ್ಮವರು ಇರ್ತಿದ್ರು. ಹಾಗಾಗಿ ಪರ್ಸು ತೆಗೆದು ಸಂತೆ ಮಾಡಿದ್ದೇ ಇರ್ಲಿಲ್ಲ. ಅವತ್ತು ಒಬ್ಬಳೇ ಹೋದೆ ನೋಡಿ! ಹತ್ತು ಸಲ ಪರ್ಸ್ ತೆಗೆಯೋದು, ನೋಟು ಕೊಡೋದು ಚಿಲ್ರೆ ವಾಪಸ್ಸು ಸರಿಯಾಗಿ ಕೊಟ್ರಾ ಅಂತ ದಿಗಿಲಾಗೋದು ಬೇಡ ಅಂತ ಎಲ್ಲಾ ತರಕಾರಿ ಒಂದೇ ಕಡೆಗೆ ಇದ್ದವರ ಬಳಿ ಸಿಕ್ಕಿದ್ದಷ್ಟು ತಗೊಂಡು ಓಡಿ ಬಂದೆ. ಅದೇ ತರಹ ಮಾಡೋಣ ಅಂತ ಮುಂದಿನ ಸಾರಿ ಹೋದ್ರೆ ಹಾಗೆ ಅಂಥ ಎಲ್ಲಾ ತರಕಾರಿ ಒಂದೇ ಕಡೆಗೆ ಇಟ್ಟವರು ಸಿಗದೇ ನೋಡಿ ಸಾಕಾಗಿ ಹೋಯ್ತು. ತರಕಾರಿ ಮಾರೋ ಚೋಟುದ್ದ ಹುಡುಗ ಚಕ ಚಕ ಅಂತ ಕೂಡಿಸಿ ಕಳೆದು ಮಾಡುತ್ತಿದ್ರೆ ನಾನು ಹತ್ತು ಸಲ ಪರ್ಸ್ ತೆಗೆಯೋದು, ನೋಟು ಕೊಡೋದು ಚಿಲ್ರೆ ವಾಪಸ್ಸು ಸರಿಯಾಗಿ ಕೊಟ್ರಾ ಅಂತ ಎಣಿಸಿ ಎಣಿಸಿ ನೋಡೋದು ಮಾಡುತ್ತಿದ್ದೆ. ಅದರಲ್ಲೂ ಆ ತರಕಾರಿ ಮಾರೋ ಹೆಂಗಸ್ರು ಬಾಯ ಮೇಲೆ ಎರಡು ಬೆರಳಿಟ್ಟು ಪುಚಕ್ ಅಂತ ಪಾನು ಉಗಿಯೋರು, ಬಜ್ಜಿ, ಗಿರ್ಮಿಟ್ ತಿನ್ನೋರು, ಮಿಜ್ಜಿ ಮಿಜ್ಜಿ ಅನ್ನ ಸಾರು ಹಿಚುಕಿ ಹಿಚುಕಿ ತಿನ್ನೋರು ಮತ್ತೆ ಅದೇ ಕೈಲಿ ತರಕಾರಿ ಹಾಕ್ತಾ, ನೋಟು ಎಣಿಸ್ತಾ ಇರೋರು. ಎಲ್ಲರೂ ಅದು ಸಾಮಾನ್ಯ ಅನ್ನೋ ಹಾಗೆ ಓಡಾಡ್ತಾ ಭರದಿಂದ ವ್ಯಾಪಾರ ಮಾಡ್ತಿದ್ರೆ ನಾನೊಬ್ಬಳು ವ್ಯಾಕ್ ವ್ಯಾಕ್ ಅನ್ನುತ್ತಾ ಓಡಿಬಂದೆ. ಅವತ್ತೇ ಡಿಸೈಡ್ ಮಾಡಿಬಿಟ್ಟೆ ಇನ್ನೆಂದೂ ಸಂತೆಗೆ ಹೋಗಲ್ಲ ಅಂತ. ಸೂಪರ್ ಮಾರ್ಕೆಟ್ಗೆ ಹೋಗಿ ಜಂಯ್ ಅಂತ ಗಾಡಿ ತುಂಬಿಸಿ ವುಂಯ್ ಅಂತ ಒಂದೇ ಸಲ ದುಡ್ಡು ಎಣಿಸಿ ಬರಬಹುದಲ್ಲಾ!

ಅದೊಂದು ದಿನ ನಮ್ಮವರು "ಅದೇನೋ ಅರ್ಜೆಂಟ್.. ಬೇಗ ಬೇಗ ಎಣಿಸಿಕೊಡೇ...25 ಸಾವಿರ ಇದೆಯಾ ನೋಡು ." ಎದೆ ಧಸಕ್ ಕಸಕ್ ಎಂದಿತು! ಎಲ್ಲಾ 100, 200, 500ರ ನೋಟುಗಳು! ಹುಬ್ಬಳ್ಳಿ ಭಾಷೆಯಲ್ಲಿ "ಸತ್ನೆವ್ವಾ .. ವಲ್ಯವ್ವಾ ." ಅಂದೆ. ಎಣಿಸೋಕೆ ಕೂತೆ. ಅಂತೂ ಅರ್ಧ ತಾಸು ಕೂತು 25 ಸಾವಿರ ಪೂರ್ತಿ ಎಣಿಸಿದ್ದೆ. ಅಷ್ಟರಲ್ಲಿ ನಾವು ಸಾಕಿದ ಬೆಕ್ಕು ಊರು ತಿರುಗಿ

ವಾಪಸ್ಸು ಬಂದು ಬಾಗಿಲಲ್ಲಿ ಮ್ಯಾವ್ ಅಂತು. ಅದು ಬಂತು ಅಂದರೆ ಸಾಕು! ಕೈಲಿ ಇದ್ದದ್ದನ್ನು ಎಸೆದು ಓಡಿ ಹೋಗಿ ಬಾಗಿಲು ತೆಗೆದು ಬೆಕ್ಕು ಎತ್ತಿಕೊಂಡೆ! ಫ್ಯಾನ್ ಗಾಳಿ, ಬಾಗಿಲ ಮೂಲಕ ಒಳ ನುಗ್ಗಿದ ಗಾಳಿ ಸೇರಿ ಒಂದಿಷ್ಟು ನೋಟು ಹಾರಿ ಬಿದ್ವು! ಎಷ್ಟು ಹುಡುಕಿದ್ರೂ 25 ಆಗ್ಲಿಲ್ಲ. ಅಷ್ಟು ಹೊತ್ತಿಗೆ ಮಗಳು ಬಂದು ನನ್ನ ಸಪ್ಪೆ ಮೂತಿ ನೋಡಿ ನೋಟು ಹುಡುಕಿ, ತಾನೇ ಎಣಿಸಿಕೊಟ್ಟು ಕಾಪಾಡಿ ದೇವತೆಯ ಪಟ್ಟ ಏರಿದ್ಲು!

ಈಗಂತೂ ಕ್ಯಾಶ್ ಲೆಸ್ ದಿನಗಳು! ನನ್ನಂತಾ ಕೌಂಟಿಂಗ್ ವೀಕುಗಳಿಗೆ ಪೀಕುಗಾಲ! ಎಲ್ಲಿ ಬೇಕಾದ್ರೂ ಹೋಗೋದು, ಡೆಬಿಟ್, ಕ್ರೆಡಿಟ್ ಕಾರ್ಡ್ ತೋರಿಸಿ ಅಥವಾ ಫೋನ್ ಪೇ, ಗೂಗಲ್ ಪೇ ತರಹದ ಆಪ್ ಬಳಸಿ ಚೆಂದವಾಗಿ ಶಾಪಿಂಗ್ ಮಾಡೋದು  ನೋಟಿನ ಕಿರಿಕಿರಿಯೇ ನಕೋ ನಕೋ. ಲೋಕ ಈಗ ನನಗಂತೂ ಸ್ವರ್ಗ ಎನಿಸಿಬಿಟ್ಟಿದೆ!

ಯಾರದಾದ್ರೂ ಕಾಲು ಹಿಡಿದು ಪೂಜೆ ಮಾಡು ಅಂದ್ರೆ ನಾನಂತೂ ಒಂದೋ ಬ್ಯಾಂಕ್ ಸಿಬ್ಬಂದಿಯ ಅಥವಾ ಕ್ಯಾಶ್ ಲೆಸ್ ಜಮಾನಾ ತಂದವರ ಕಾಲೇ ಹಿಡಿಯೋದು ನೋಡಿ. ಮತ್ತೆ ನನ್ನ ಜೊತೆ ದುಡ್ಡಿನ ವ್ಯವಹಾರಕ್ಕೆ ಬಂದೀರಿ ಜೋಕೆ! ■

---




**ಸದ್ಯ ಬಂದಿಲ್ಲ..!ಆದರೆ ಇದಕ್ಕಿಂತ ದೊಡ್ಡದು ಬೆಲೆ ಏರಿಕೆ ಅಲೆ ಅದು ಯಾವಾಗ ಇಳಿ ಯುತ್ತೆ  ಅಂತ ನೋಡಬೇಕು ಕಣೇ.....!**

# ಬೋಂಡಾ ಶಿವಾ.............

●ಎಚ್. ಗೋಪಾಲಕೃಷ್ಣ

ಗೋಪಣ್ಣ ತನ್ನ ಎಂದಿನ ಧಾಟಿಯಲ್ಲಿ ಎದುರು ಕೂತ. ಒಳಗಿನಿಂದ ಕಾಫಿ ಬಂತು. ಕಾಫಿ ಹೀರುತ್ತಾ ಎಲ್ಲಿ ನಿಲ್ಲಿಸಿದ್ದೆ ಹಿಂದೆ... ಅಂತ ಜ್ಞಾಪಿಸಿಕೊಂಡು ಹಿಂದಿನ ಎಪಿಸೋಡಿಗೆ ಒಂದು ಚಾಲನೆ ಕೊಟ್ಟ....

ರಿಟೈರ್‌ಗೆ ಮೊದಲು ಫೇರ್ ವೆಲ್ ಅಂತ ಒಂದು ಫಂಕ್ಷನ್ ಮಾಡ್ತಾರೆ ಗೊತ್ತಿದೆ ಅಲ್ವಾ.. ಅದೂ ನೀವು ಒಂದು ಎಂಟ್ಹತ್ತು ಕಡೆ ಕೆಲಸ ಮಾಡಿದ್ದರೆ ನಿಮ್ಮ ಈಗಿನ ಇಲಾಖೆ ಅವರೂ ಸೇರಿದ ಹಾಗೆ ಆಯಾ ಡಿಪಾರ್ಟ್ ಮೆಂಟ್ ನವರೂ ಸಹ ನಿಮ್ಮನ್ನು ಕರೆದು ಒಂದು ಸಭೆ ಮಾಡಿ ನಿಮ್ಮ ಬಗ್ಗೆ ಕೆಲವು ಒಳ್ಳೇ ಮಾತು ಹುಡುಕಿ ಹುಡುಕಿ ಮಾತಾಡಿ ಶಾಲು ಹೊದಿಸಿ, ಪೇಟ ತೊಡಿಸಿ, ಹಾರ ಹಾಕಿ ನಿಮ್ಮ ಕೈಲಿ ಭಾಷಣ ಮಾಡಿಸಿ ಅವರೂ ಭಾಷಣ ಮಾಡಿ ರಿಟೈರ್ ಆದಮೇಲೆ ಏನು ಮಾಡ್ತೀರಿ ಸಾರ್ ಅಂತ ಕೇಳೆ ಕೇಳ್ತಾರೆ, ಕೊನೆಗೆ ಕಾಫಿ ತಿಂಡಿ ಖಾಲಿ ಮಾಡ್ತಾ ಇರಬೇಕಾದರೆ, ಸರಿ ತಾನೇ...?

ನನಗೂ ಹಾಗೆ ಒಂದು ಐವತ್ತು ಸಭೇಲಿ ಕೇಳಿದ್ದರು. ಆರು ತಿಂಗಳಿಗೆ ವರ್ಷಕ್ಕೆ ಫುಟ್ ಬಾಲ್ ತರಹ ಒಂದು ಕಡೆಯಿಂದ ಇನ್ನೊಂದು ಕಡೆಗೆ ಓಡಿಸ್ತಾ ಇದ್ದರಲ್ಲಾ, ಅದಕ್ಕೇ ಅದು, ನಾನು ಗುಡ್ಡೆ ಹಾಕಿದ ಇಲಾಖೆಗಳು , ಐವತ್ತು ಆಗಿದ್ದು...

ಸರಿ ಹಾಗೆ ಕೇಳಿದವರಿಗೆ ನಾನು ಆಯಾ ಸಮಯಕ್ಕೆ ತಕ್ಕಂತೆ ಒಂದು ಉತ್ತರ ಕೊಡ್ತಾ ಇದ್ದೆ. ಓದಬೇಕು, ಇನ್ನೂ ಮೂರು ನಾಲ್ಕು ಡಿಗ್ರಿ ಅಂಟಿಸ್ಕೊಬೇಕು, ದೇಶ ಸುತ್ತಬೇಕು , ಹಾಯಾಗಿ ಹತ್ತು ವರ್ಷ ಮಲಗಿ ನಿದ್ದೆ ಮಾಡಿಬಿಡಬೇಕು.... ಮೊದಲಾದ ಫ್ಯೂಚರ್ ಐಡಿಯಾ ಹೇಳಿ ಜನರು ಗಂಭೀರವಾಗಿ ಚಿಂತಿಸೋದೂ, ಕೆಲವರು ನಗು ತಡೆದುಕೊಂಡು ಪಕ್ಕೆ ಹಿಡಿದು ಕೊಳ್ಳೋದೂ, ಕೆಮ್ಮೋಕ್ಕೆ ಕಷ್ಟ ಪಡೋದೂ...... ಇವು ನಡೀತಿತ್ತು.

ಒಂದು ಕಡೆ ಬೋಂಡಾ ಅಂಗಡಿ ಇಡಬೇಕು ಅಂತ ಇದೀನಿ ಅಂತ ಹೇಳಿದ್ದೆ. ಸಭೆಯಲ್ಲಿದ್ದ ನೂರ ಹನ್ನೆರೆಡು ಜನ ಅದರಲ್ಲಿ ನಲವತ್ತಮೂರು ಜನ ಲೇಡೀಸ್ ಬಿದ್ದು ಬಿದ್ದು ನಕ್ಕಿದ್ದರು.

ಸಾರ್ ಇಂತಹ ಜೋಕು ಕೇಳಿ ಅದೆಷ್ಟೋ ವರ್ಷ ಆಗಿತ್ತು ಸಾರ್ ಅಂತ ಮೂಗು ಒರೆಸಿಕೊಳ್ತಾ ಹೇಳಿದ್ದರು.

ಇದು ಜೋಕಲ್ಲ ಅಂತ ಅವರಿಗೆ ವಿವರಿಸಿರಲಿಲ್ಲ ಆಗ.

ಈಗ ಮುಖ್ಯ ಪ್ರಸಂಗಕ್ಕೆ ಬಂದೆ... ನಾನು ಬೋಂಡಾ ಅಂಗಡಿ ಇಟ್ಟ ಕತೆ..

ಬೋಂಡಾ ಅಂದರೆ ನನಗೆ ಪ್ರಾಣ. ಯಾರಾದರೂ ಬೋಂಡಾ ತಿನ್ನುತ್ತಾ ಇರೋದು ನೋಡಿದರೆ ಹಾಗೇ ಅವರನ್ನೇ ನೋಡ್ತಾ ಇರೋಣ ಅನ್ಸುತ್ತೆ. ಯಾರದಾದರೂ ಮನೆಗೆ ಹೋದಾಗ ಅವರು ಬೋಂಡಾ ಕೊಟ್ಟರೆ ಸರಿ ರಾತ್ರಿ ಇರಲಿ ಅದನ್ನು ತಿಂದು ತೇಗಿ ಬರುವ ಜಾಯಮಾನ ನನ್ನದು. ಹಾಗೇ ಯಾರಾದರೂ ಬೋಂಡಾ ಅವರಿಗೆ ಇಷ್ಟ ಅಂದರೆ ನನಗೆ ತುಂಬಾ ಸಂತೋಷ ಆಗುತ್ತೆ. ಸಾವಿರ

ಯೋಜನ ಆದರೂ ಸರಿ ಅವರನ್ನು ಕರೆದುಕೊಂಡು ಹೋಗಿ ಬೋಂಡಾ ತಿನ್ನಿಸಿ ಬರುತ್ತೇನೆ. ಕೆಲವು ಸ್ನೇಹಿತರು ಈ ಕಾರಣಕ್ಕಾಗಿಯೇ ನನ್ನನ್ನು ಪ್ರೀತಿಯಿಂದ ಬೋಂಡಾ ಶಿವಾ ಎಂದು ಕರೆಯುವುದು ಉಂಟು. ನಾನೂ ನಮ್ಮ ಎದುರು ಮನೆಯ ರಂಗಚಾಮಿಯೂ ಬೋಂಡಾ ಅಂಗಡಿ ಇಡುವ ಬಗ್ಗೆ ಸುಮಾರು ತಿಂಗಳು ನಾನು ಮನೆ ಕಟ್ಟಿ ಈ ಕೊಂಪೆಗೆ ಬಂದ ಹೊಸತರಲ್ಲಿ ಮಾತುಕತೆ ಆಡಿದ್ದೇವೆ ಹಾಗೂ ಕಾರಣಾಂತರದಿಂದ ಯೋಜನೆ ಕಾರ್ಯರೂಪಕ್ಕೆ ಬರದೆ ತಲೆ ಕೆಡಿಸಿಕೊಂಡ ನೆನಪು ಇನ್ನೂ ಹಸಿರು.

ಈ ಮಧ್ಯೆ ನಿವೃತ್ತ ಜೀವನ ನಡೆಸುವುದು ಹೇಗೆ ಅಂತ ಒಂದು ಕ್ಲಾಸಿಗೆ ನನ್ನನ್ನು ನಮ್ಮ ಬಾಸು ಕಳಿಸಿದ. ಅಲ್ಲಿ ಅವರು ಅದೇನೇನು ಹೇಳಿದರೋ, ಒಂದು ಮಾತ್ರ ತಲೇಲಿ ಗಟ್ಟಿಯಾಗಿ ಮೊಳೆ ಹೊಡೆದುಕೊಂಡು ಕೂತು ಬಿಡ್ತು.

ಅದೇನಪ್ಪಾ ಅಂತಹ ಮಾತು ಅಂದರೆ ಗಳಿಸಿದ್ದು ಕೊಡಿ, ನಿವೃತ್ತಿಗೆ ಮೊದಲು ಸಮಾಜ ನಿಮಗೆ ಕೊಟ್ಟಿದ್ದನ್ನ ವಾಪಾಸ್ ಮಾಡಿ ಅಂತ!

ಅದರಿಂದ ಬೋಂಡಾ ವೃತ್ತಿ ಕಾಸು ಮಾಡೋದಕ್ಕೆ ಅಲ್ಲ ಅಂತ ನಿಶ್ಚಯ ಆಯ್ತಾ...

ಆಗಲೇ ಮೇಲಿನ ಕ್ಲಾಸಿಗೆ ಒಂದು ವರ್ಷ ಮೊದಲು ಹೋಗಿದ್ದ ಮತ್ತೊಂದು ಕ್ಲಾಸಿನ ಪಾಠ ನೆನಪಿಗೆ ಬರಬೇಕೆ?

ಅದರ ಪ್ರಕಾರ ಯಾವುದೇ ವಸ್ತು ಕಾಸಿಲ್ಲದೆ ಕೊಡಬಾರದಂತೆ ಮತ್ತು ಹಾಗೆ ಕೊಟ್ಟರೆ ಅದಕ್ಕೆ ಬೆಲೆ ಇಲ್ಲ ಅನ್ನೋದು.

ಈ ಬ್ಯಾಕ್ ಗ್ರೌಂಡ್ ನಲ್ಲಿ ನನ್ನ ಹೊಸ ಉದ್ಯಮ ಟೇಕ್ ಆಫ್ ಆಗಿದ್ದು....

ಬೋಂಡಾ ಅಂಗಡಿಗೆ ಏನೇನು ಬೇಕು ಅಂತ ಮೊದಲು ಒಂದು ಲಿಸ್ಟ್ ಮಾಡಿದೆ. ಫ್ಯಾಕ್ಟರಿ ಲಿ ಇದ್ದಾಗ ನನಗೆ ಕಲಿಸಿದ್ದ ಮೊದಲನೇ ಪಾಠ ಅಂದರೆ ಯಾವುದೇ ಕೆಲಸಕ್ಕೆ ತೊಡಗಿಸಿ ಕೊಳ್ಳ ಬೇಕಾದಾಗ ಪರಿಕರಗಳ ಲಿಸ್ಟು ಮಾಡೋದು.

ಬಾಂಡಲಿ, ಜಾಲರಿ ಸೌಟು ಮೊದಲಾದ ಪರಿಕರ ಗಳಿಂದ ಶುರುವಾದ ಪಟ್ಟಿ ನೂರಾ ಹನ್ನೆರೆಡಕ್ಕೆ ಬಂದಾಗ ನಿಲ್ಲಿಸಿದೆ.

ಎರಡನೆಯದು ಸ್ಥಳ. ಬರೀ ಸಂಜೆ ಹೊತ್ತು ಮಾತ್ರ ತೆಗೆಯೋದಕ್ಕೆ ಇರೋ ಅಂಗಡಿಗೆ ಬಾಡಿಗೆ ಕೊಡೋದು ದಂಡ ಅಂತ ಮೊದಲೇ ನಿಶ್ಚಯ ಮಾಡಿದ್ದೆ. ಅಂಗಡಿ ಮನೆ ಮುಂದೆ ಕಾಂಪೌಂಡ್ ನಲ್ಲಿ ಇಟ್ಟರೆ ಸಾಕು ಅಂತ ಅಲ್ಲೇ ಶುರು ಮಾಡಿದ್ದು. ನನ್ನ ಮನೆ ಒಂದು ಪುಟ್ಟಗಲ್ಲಿಯಲ್ಲಿ ಇತ್ತು. ಬಸ್ಸು ಲಾರಿ ಓಡಾಡೋ ಜಾಗ ಅಲ್ಲ, ಜನರ ಓಡಾಟ ಸಹ ಏನು ಅಂತ ಹೆಚ್ಚಿಲ್ಲ. ಅದರಿಂದ ಐಡಿಯಲ್ ಜಾಗ ಅಂತ ಅನಿಸಿತ್ತು.

ಅಂಗಡಿ ಶುರು ಆದಮೇಲೆ ಅದು ಹೇಗೆ ಬೆಳೆಯಿತು ಅಂದರೆ ಅದೇ ಒಂದು ದೊಡ್ಡ ಕತೆ. ಲಾಭ ಬೇಡ ಅಂತ ಇದ್ದೆನಲ್ಲ ಅದರಿಂದ ತುಂಬಾ ಕಡಿಮೆ ಕಾಸಿಗೆ ರುಚಿ ಶುಚಿ ಬೋಂಡಾ ಮಾರ್ತಿದ್ದೆ. ಮೊದಮೊದಲು ಬೋಂಡಾ ಜತೆ ವಡೆ ಮೆಣಸಿನಕಾಯಿ ಬಜ್ಜಿ, ಪಕೋಡ, ಬನ್ಸ್, ಉದ್ದಿನ ವಡೆ, ಮಸಾಲೆ ವಡೆ ಎಲ್ಲಾ

ಶುರು ಹಚ್ಚಿದ್ದೆ. ಬೆಲೆ ಕಡಿಮೆ, ಸೈಜು ದೊಡ್ಡದು ಅಂತ ಹೆಚ್ಚು ಗ್ರಾಹಕರು ಆದರು. ರಸ್ತೇಲಿ ಜನ ಜಂಗುಳಿ ಆಗಿ ಎಷ್ಟೋ ಸಲ ಪೊಲೀಸು ಬಂದು ಲಾಠಿ ಚಾರ್ಜ್ ಮಾಡಿದ್ದೂ ಇದೆ. ಪುಟ್ಟ ರಸ್ತೆ ಆಗಿದ್ದರಿಂದ ಜಂಗುಳಿ ಹೆಚ್ಚಾದಾಗ ರಸ್ತೆ ಒನ್ ವೇ ಆಗಿದ್ದೂ ಉಂಟು. ಒಬ್ಬ ಪೋಲಿಸಪ್ಪನ್ನ ಅಲ್ಲಿ ಖಾಯಂ ಆಗಿ ನಿಲ್ಲಿಸಿದ್ದರು. ಪೊಲೀಸಿನೋರು ಆಗಾಗ ಬಂದು ಸುಖ ದುಃಖ ವಿಚಾರಿಸುತ್ತಿದ್ದರು. ಹಾಗೇ ಅವರು ಹೊರಡುವಾಗ ಮನೆಯವರಿಗೆ ಕೊಡಿ ಅಂತ ಒಂದು ಪೊಟ್ಟಣ ಬೋಂಡಾ ಕಟ್ಟಿ ಕೊಡುತ್ತಿದ್ದೆ.

ಅಕ್ಕಪಕ್ಕದ ಅಂಗಡಿ ಗ್ರಾಹಕರೇ ಅಲ್ಲದೆ ಬೇರೆ ಕಡೆಯಿಂದಲೂ ಜನ ಬರಲು ಶುರು ಮಾಡಿದರು. ಗೋಪಣ್ಣನ ಬೋಂಡಾ ಅಂಗಡಿ (ಅಂದರೆ ನನ್ನ ಅಂಗಡಿ) ಏಕ್ ದಂ ವರ್ಲ್ಡ್ ಫೇಮಸ್ ಆಗಿಬಿಡ್ತು.. ನನ್ನ ಅಂಗಡಿ ಗೋಪಣ್ಣ ನ ಅಂಗಡಿ ಅಂತ ಹೆಸರು ಬೇರೆ ಮಾಡಿ ಇಡೀ ಊರಲ್ಲಿ ಫೇಮಸ್ ಆಗಿತ್ತು.

ಸುತ್ತ ಮುತ್ತ ಅಂಗಡಿಯವರು ಗುಂಪು ಕಟ್ಟಿಕೊಂಡು ನನ್ನ ಅಂಗಡಿಗೆ ಬಂದರು. ಕಾಲಿಗೆ ಬಿದ್ದರು. ಎಷ್ಟೋ ವರ್ಷದಿಂದ ಇಲ್ಲಿ ಬಿಸಿನೆಸ್ ಮಾಡ್ತಾ ಇದೀವಿ. ದಯವಿಟ್ಟು ನಮ್ಮ ಹೊಟ್ಟೆ ಮೇಲೆ ಹೊಡಿಬೇಡಿ, ನಮ್ಮನ್ನ ನಂಬಿದೋರನ್ನ ಬೀದಿ ಪಾಲು ಮಾಡಬೇಡಿ ಅಂತ ಗೋಗರೆದರು....

ಪಾಪ ಅವರ ಮಾತು ಕೇಳಿ ಹೃದಯ ಬಾಯಿಗೆ ಬಂತು. ಒಂದು ಕಾಲದಲ್ಲಿ ನಾನೂ ಟ್ರೇಡ್ ಯೂನಿಯನ್ ಲೀಡರ್ ಅಲ್ವಾ...?

ಸರಿ ಅಂತ ಅವರ ಜತೆ ಮಾತಿಗೆ ಕೂತೆ. ಇನ್ಮೇಲೆ ಬೋಂಡಾ ಮಾತ್ರ ಮಾಡ್ತೀನಿ ಅಂತ ಪ್ರಾಮಿಸ್ ಮಾಡಿದೆ. ಅವತ್ತಿಂದ ನನ್ನ ಅಂಗಡೀಲಿ ಬರೀ ಬೋಂಡಾ ಅಷ್ಟೇ.

ನಾನು ಈ ಹೊಸ ಉದ್ದಿಮೆನಲ್ಲಿ ಎಂತಹ ಕ್ರಾಂತಿ ಮಾಡಿದೆ ಗೊತ್ತಾ...

ಇಡೀ ದೊಡ್ಡ ಮೆಣಸಿನ ಕಾಯಿ ಬೋಂಡಾ ಮಾಡಿದ್ದು ನಾನೇ ಮೊದಲು. ಅದಾದ ಮೇಲೆ ಮದುವೆ ಮನೆ ಈವೆಂಟ್ ಮಾನೇಜರುಗಳು ಬಂದು ಐಡಿಯಾ ಕೇಳ್ತಾ ಇದ್ರು. ಡಿಸ್‌ಪ್ಲೇಗೆ,ಅಲ್ಲಿ ಶೋಗೆ ಏನೇನು ಇಡಬಹುದು ಅಂತ.

ಇಡೀ ಕೋಸು ...ಫುಟ್ ಬಾಲ್ ಅಷ್ಟು ದಪ್ಪ ಇರೋದು.. ಹಾಕಿ ಬೋಂಡಾ ತಯಾರಿಸಿ ಕೊಟ್ಟಿದ್ದೇ ನಾನು. ಆಮೇಲೆ ಅದು ಬೇರೆಯವರು ಇಮಿಟೇಟ್ ಮಾಡಿದರು.

ಇದಕ್ಕೂ ಮೀರಿದ್ದು ಅಂದರೆ ಹಲಸಿನ ಕಾಯಿ ಬೋಂಡಾ ಮಾಡಿದ್ದು.

ಅದಕ್ಕಿಂತಲೂ ದೊಡ್ಡ ಬೋಂಡಾ ಬೇಕು ಅಂತ ಅದ್ಯಾರೋ ರಾಜಕಾರಣಿ ಅಂತೆ ಅವರು ಬಂದಿದ್ದರು. ಅವರಿಗೆ ಹಲಸಿನ ಕಾಯಿ ಬೋಂಡಾ ಮಾಡಿಸಿ ಕೊಟ್ಟಿದ್ದೆ.

ಆಗ ಅದಾದಮೇಲೆ ಮತ್ತೊಬ್ಬರು ದೊಡ್ಡ ಪುಡಾರಿ ಬಂದರು.

ಅವರ ಎದುರು ಪಾರ್ಟಿ ಬಚ್ಚಾ ಅವನ ಮಗಳ ಮದುವೆಗೆ ಇಡೀ ಹಲಸಿನ ಕಾಯಿ ಬೋಂಡಾ ಮಾಡಿಸಿ ಬಿಟ್ಟಿದ್ದಾನೆ ನಿಮ್ಮ ಕೈಲೇ. ಇದು ನನ್ನ ಪ್ರೆಸ್ಟೀಜ್ ಪ್ರಶ್ನೆ, ನನ್ನ ಮರ್ಯಾದೆ ನಿಮ್ಮ ಕೈಲಿದೆ. ಎಷ್ಟಾದರೂ ಕರ್ಚು ಆಗಲಿ, ನನ್ನ ಮರ್ಯಾದೆ

ನೀವೇ ಕಾಪಾಡಬೇಕು ಅಂತ ಎರಡೂ ಕೈ ಹಿಡ್ಕೊಂಡು ಇದು ನಿಮ್ಮ ಕಾಲು ಅಂತ ತಿಳಿದಿದ್ದೇನೆ, ನನ್ನ ಕೈ ಬಿಡಬೇಡಿ ಅಂತ ಅತ್ತು ಬಿಟ್ಟರು.

ಸರಿ ಏನಾದರೂ ದಾರಿ ಹುಡುಕ್ತೀನಿ ಅಂತ ಅವರನ್ನ ಕಳಿಸಿದೆ.

ಎರಡು ವಾರ ಹಗಲೂ ರಾತ್ರಿ ಯೋಚನೆ ಮಾಡಿ ಮಾಡಿ ಒಂದು ಪ್ಲಾನ್ ರೆಡಿ ಮಾಡಿದೆ. ಐವತ್ತು ಕೇಜಿ ತೂಗೋ ಒಂದು ಕುಂಬಳ ಕಾಯಿ ತಂದೆ. ಅದನ್ನ ಎಣ್ಣೆಲೀ ಮುಳುಗಿಸೂ ಅಂತ ಒಂದು ದೊಡ್ಡ ಬಾಂಡ್ಲಿ ಮಾಡಿಸಿದೆ. ನನ್ನ ಬುದ್ಧಿ ಎಲ್ಲಾ ಉಪಯೋಗಿಸಿ ಇಡೀ ಕುಂಬಳ ಕಾಯಿಗೆ ಸುತ್ತಲೂ ಹಿಟ್ಟು ಹದವಾಗಿ ಬರೋಹಾಗೆ ಮಾಡಿದೆ. ಅದನ್ನ ಕೊತ್ ಕೊತ ಕುದಿತಿ ರೋ ಎಣ್ಣೆ ಲೀ ಹಾಕಿ ಬೋಂಡಾ ತಯಾರಿಸಿದೆ. ನೂರಾ ಹತ್ತು ಜನ ಅಡಿಗೆ ಅವರು ನಾಲ್ಕು ದಿವಸ ಶ್ರಮ ಹಾಕಿದ ಕೆಲಸ ಇದು. ಒಂದೂವರೆ ಸಾವಿರ ಲೀಟರ್ ಎಣ್ಣೆ ಅವತ್ತು ಬಾಂಡಲಿಗೆ ಸುರಿದದ್ದು.. ಒಂದು ಕ್ರೇನ್ ಮೂಲಕ ಬಾಂಡಲಿಗೆ ನಿಧಾನಕ್ಕೆ ಕುಂಬಳ ಕಾಯಿ ಇಳಿ ಬಿಟ್ಟಿದ್ದು....

ಇದರ ವಿಡಿಯೋ ಇಡೀ ಪ್ರಪಂಚಕ್ಕೆ ಹಬ್ಬಿತ್ತು ಗೊತ್ತಲ್ವಾ...

ರಾಜಕಾರಣಿಗಳಿಗೆ ಬಾರಿ ಸಂತೋಷ ಆಯ್ತು. ಮದುವೆಗೆ ಬಂದ ಎಲ್ಲರೂ ಅದರ ಪಕ್ಕಾ ನಿಂತು ಫೋಟೋ ತೆಗೆಸಿಕೊಂಡು ಫೇಸ್ ಬುಕ್ಕು, ವಾಟ್ಸಪ್ ಎಲ್ಲಾ ಕಡೆ ಹಾಕಿಕೊಂಡಿದ್ದರು.

ಮದುವೆಗೆ ಬಂದೋರು ವಧು ವರನ ನೋಡೋ ಬದಲು ಈ ಬೋಂಡಾ ನೋಡಿ ಮೂಗಿನ ಮೇಲೆ ಬೆರಳು ಇಟ್ಟುಕೊಂಡರು ಅಂತ ಮದುವೆಗೆ ಹೋಗಿ ಬಂದೋರು ಎಲ್ಲರೂ ಹೇಳಿದರು.......

ಲೆಕ್ಕ ಫೈನಲೈಸ್ ಮಾಡಲು ಬಂದ ಪುಡಾರಿ ಅಂತೂ ನಾಲ್ಕೈದು ಸಲ ಕಾಲಿಗೆ ಬಿದ್ದ. ಕೊನೆಗೆ ಒಂದು ವಿನಂತಿ ಸಹ ಮಾಡಿದ.

ಸಾರ್ ಒಂದೇ ಒಂದು ಕೋರಿಕೆ ಅಂದ, ಕೈಕೈ ಹಿಸುಕಿ ಕೊಳ್ಳುತ್ತಾ.

ಇಡೀ ಏರಿಯಾ ದವರಿಗೆ , ಇಡೀದೇಶಕ್ಕೆ ರೋಪ್ ಹಾಕ್ಕೊಂಡು ನಿಗುರಿ ನಡಿತಿದ್ದವನು ನನ್ನೆದುರು ಕುರಿಮರಿ ಹಾಗೆ ನಿಂತು ಒಂದು ಕೋರಿಕೆ ಅಂದರೆ ಯಾರಿಗೆ ತಾನೇ ಅಯ್ಯೋ ಅನಿಸುಲ್ಲ ಹೇಳಿ..

ಅಯ್ಯೋ ಶಿವು ಯಾಕೆ ಈ ದೊಡ್ಡ ಮಾತು ಅಂದೆ.

ಆಯಪ್ಪನ ಹೆಸರು ಶಿವ ಸಾಮಿಯೋ, ಶಿವನಂಜನೋ ಶಿವಾಮಾದನೋ ಶಿವಕುಮಾರ ನೋ ಏನೋ ಇತ್ತು.

.....ನೀವು ಮಾಡಿಕೊಟ್ಟ ಬೊಂಡಾದಿಂದ ಪೊಲಿಟಿಕಲ್ ಸರ್ಕಲ್ ನಲ್ಲಿ ನಾನು ಭಾರೀ ಎತ್ತರಕ್ಕೆ ಬೆಳೆದು ಬಿಟ್ಟೆ. ದೆಹಲಿಯ ದೊಡ್ಡವರಿಗೆ ನನ್ನ ಮೇಲೆ ಹೆಚ್ಚು ಗೌರವ ನಂಬಿಕೆ ಬಂತು. ನೆಕ್ಸ್ಟ್ ಎಲೆಕ್ಷನ್ ಆದಮೇಲೆ ನಾನೇ ಸಿಎಮ್ಮು ಅಂತ ಹೈ ಕಮಾಂಡು ಪ್ರಾಮಿಸ್ ಮಾಡಿದೆ. ಆಗ ನಿಮಗೆ ಏನು ಅನುಕೂಲ ಬೇಕೋ ಅದು ಮಾಡಿಕೊಡ್ತಿನಿ.... ಅಂತ ಮತ್ತೆ ಕೈ ಹೊಸೆದ.

ಹೇಳಿ ಸಾರ್ ಅದೇನೋ ಹೇಳಬೇಕು ಅಂತ ಇದೀರಿ, ಹೇಳಿ. ದೊಡ್ಡ

ಫ್ಯಾಕ್ಟರಿಯಲ್ಲಿ ಕೆಲಸದಲ್ಲಿದ್ದೆ, ಕೈ ಬಾಯಿ ಶುದ್ಧ ಇದ್ದು ಮರ್ಯಾದೆ ಆಗಿ ಬಾಳು ಸಾಗಿಸಿದೆ. ಅಂತಹದ್ದೇನು ದೊಡ್ಡ ಆಸೆ ಪಾಸೆ ಇಲ್ಲ ನನಗೆ... ಅಂತ ಹುರಿದುಂಬಿಸಿದೆ.

ಪಾಪ ಪ್ರಾಣಿ ಅದೇನು ಕೇಳಬೇಕೂಂತ ಇದೆಯೋ ಕೇಳಲಿ ಅಂತ..

ಕೈ ಹೊಸೆಯೋದು ಮುಂದುವರಿಸಿ ಸಾರು ಸಾರೂ. ಅಂದ.

ಪ್ರೊ ಸೀಡ್ ಮ್ಯಾನ್.. ಅಂದೆ.

ನೀವು ಇನ್ಮೇಲೆ ಬೋಂಡಾ ಮಾಡೋದು ನಿಲ್ಲಿಸಿಬಿಡಬೇಕು ಸಾರ್.... ಅಂದ.

ಒಂದು ಇಮೇಜ್ ಕಟ್ಟಿಕೊಂಡು ಇದ್ದೇನೆ, ಒಂದು ಪ್ರೆಸ್ಟಿಜು ಈಗ ತಾನೇ ಬಂದಿದೆ. ನಾಳೆ ನಮ್ಮ ಪಾರ್ಟಿ ಅವನೇ ಅಥವಾ ಬೇರೆ ಇನ್ಯಾರೋ ಯಾರಾದರೂ ಬಂದು ಇನ್ನೂ ದೊಡ್ಡ ಬೋಂಡಾ ಮಾಡಿಸಿಕೊಂಡು ಪ್ರದರ್ಶನ ಮಾಡಿದ ಅಂದರೆ ನಾನು ಹೇಳಕ್ಕೆ ಹೆಸರಿಲ್ಲದೆ ನಾಶ್ಣ ಆಗಿ ಬಿಡ್ತೀನಿ. ನನ್ನ ತುಳಿಬೇಕು ಅಂತ ಕೋಟಿ ಕೋಟಿ ಜನ ವಿರೋಧ ಪಕ್ಷದ ಜನ, ನಮ್ದೆ ಪಕ್ಷದ ಜನ ತುದಿಕಾಲ ಮೇಲೆ ನಿಂತು ಕಾಯ್ತಾ ಅವ್ರೆ....

ಸಾರು ನಂಗೆ ಭಾಷೆ ಕೊಡಿ ಅಂತ ಗೊಳೋ ಅಂತ ಅಳತೊಡಗಿದ.

ಒಂದು ಕ್ಷಣ ಯೋಚಿಸಿದೆ. ಪಾಪ ಅದೇನೋ ಸಿಎಂ ಆಗ್ತಾನಂತೆ. ನನ್ನದೋ ಎಲ್ಲಾ ಮುಗಿದಿದೆ. ಊರು ಬಾ ಅಂತಿದೆ, ಕಾಡು ಹೋಗು ಅಂತಿದೆ. ಇವನು ಬೆಳೆಯೋನು, ಸಕ್ಕತ್ತಾಗಿ ಬೆಳೆಯಲಿ, ನೂರ್ಕಾಲ ಉಣ್ಣಲಿ, ತೇಗಲಿ ಅನ್ನಿಸಿತು.

ಆಯ್ತು ರಾಜಾ ಇನ್ಮೇಲೆ ನೋ ಬೋಂಡಾ ಇನ್ ಮೈ ಲೈಫ್ ಅಂದೆ.

ಮನ್ತಾ ಮತ್ತೆ ಕಾಲಿಗೆ ಬಿದ್ದ. ನಾನು ಸಿ ಎಂ ಆದಮೇಲೆ ಈ ರೋಡಿಗೆ ನಿಮ್ಮ ಹೆಸರೇ ಮಡಗ್ತಿನಿ ಅಂದ...

ಅಲ್ಲಿಗೆ ಬೋಂಡಾ ಕತೆ ಮುಗೀತು. ಅದನ್ನ ಅಂದರೆ ಅಂಗಡಿನ ಮತ್ತೆ ಓಪನ್ ಮಾಡಿ ಅಂತ ಅದೇನೇನೋ ಒತ್ತಡ ಬಂದವು. ಅದೇ ಬೇರೆ ಕತೆ ಇನ್ನೊಂದು ಸಲ ಸಿಕ್ತಿನಲ್ಲಾ ಆಗ ಹೇಳ್ತೀನಿ ಅಂತ ಗೋಪಣ್ಣ ಲೋಟ ಕೆಳಗಿಟ್ಟು ಅಮ್ಮೋ ಬರ್ತೀನಿ ಅಂತ ಎದ್ದ. ಅಂದಹಾಗೆ ಇನ್ನೇನು ಎಲೆಕ್ಷನ್ ಬಂತಲ್ಲಾ, ನಾನಿರೋ ರೋಡಿಗೆ ಬೋಂಡಾ ಗೋಪಣ್ಣ ರಸ್ತೆ ಅಂತ ಹೆಸರು ಇಡ್ತಾರೆ ಅಂತ ಆಯಪ್ಪನ ಕಡೇರು ಹೇಳ್ತಾ ಇದ್ದಾರೆ. ಆಯಪ್ಪ ಸೀಎಂ ಆದರೆ ಈ ರಸ್ತೆ ಬೋಂಡಾ ಗೋಪಾಲಪ್ಪನ ರಸ್ತೆ ಅಂತ ಸಾವಿರಾರು ಮುತ್ತು ಉದುರಿಸಿ ಗೇಟು ತೆಗೆದು ಆಚೆ ಕಾಲಿಟ್ಟ...... ■

---

**ಮೌನ ಭಾಷಣ** (ಭೂಬಾಣದಿಂದ )

ವಿನೋಬಾಜಿ ಅವರು 'ನಾನು ಮಾತನಾಡಬಯಸದೆ ಮೌನವಾಗಿದ್ದು ಸಮ್ಮೇಳನದಲ್ಲಿ ಭಾಗವಹಿಸುತ್ತೇನೆ' ಎಂದಿದ್ದಾರೆ. ವಿನೋಬಾಜಿ ತಮ್ಮ ಭಾವನೆಗಳನ್ನು ಯಾರ ಮುಲಾಜಿಲ್ಲದೇ ಹೊರಚೆಲ್ಲುವವರೆಂದು ನಿರೀಕ್ಷಿಸಿದ್ದ ಹಲವರಿಗೆ ನಿರಾಶೆಯಾಗಿದೆ.



। ದಂನಆ

3 ಯೋಚನೆ ಮತ್ತು ಸಲಹೆಗಳು ಸಮಯಕ್ಕೆ ತಕ್ಕಂತೆ ಬದಲಾಗುತ್ತದೆ. ನೀರಿನ ಲೋಟದಲ್ಲಿ ನೊಣ ಬಿದ್ದಿದ್ದರೆ ನೀರು ಚೆಲ್ಲುತ್ತೇವೆ. ತುಪ್ಪದ ಡಬ್ಬಿಯಲ್ಲಿ ನೊಣ ಬಿದ್ದಿದ್ದರೆ ನೊಣವನ್ನು ಬಿಸಾಕುತ್ತೇವೆ.

3 ಎ ವಾರ್ ಕ್ರೈ ಫಾರ್ ಪೀಸ್ ಎಂದರೆ?

3 ನಾವು ಈಗ 24/7 ಕನೆಕ್ಟ್ ಆಗಿದ್ದೀವಿ ನಿಜ, ಆದರೆ ಜನರಿಂದ ಡಿಸ್‌ಕನೆಕ್ಟ್ ಆಗಿದ್ದೇವೆ.

3 ಎವೆರಿಬಡಿ ಈಸ್ ಬ್ಯುಸಿ ಎಂಪವರಿಂಗ್ ವಿಮೆನ್. ಬಟ್ ಹು ಈಸ್ ಪ್ರೆಪೇರಿಂಗ್ ಮೆನ್ ಫಾರ್ ದೀಸ್ ಎಂಪವರಡ್ಡ್ ವಿಮೆನ್?

3 ಆಗಾಗ್ಗೆ ಏನೋ ಮಾಡುವದರಿಂದ ಯಶಸ್ಸು ಲಭಿಸದು. ಬದಲಿಗೆ ನಿಷ್ಠೆಯಿಂದ ದುಡಿಯಬೇಕು.

3 ಹಾವು ಸಾಯಬಾರದು, ಕೋಲು ಮುರಿಯಬಾರದು, ಕೈ ನೋಯಬಾರದು.

3 ಲಂಚ ವ್ಯಭಿಚಾರದಂತೆ. ಇಬ್ಬರು ಬೇಕೇಬೇಕು.

3 ದೇರ್ ಈಸ್ ನೊ ಹ್ಯಾಪಿನೆಸ್ ಇನ್ ವೆಲ್ತ್. ಬಟ್ ದೇರ್ ಈಸ್ ಕನ್ಸಿಡರಬಲ್ ವೆಲ್ತ್ ಇನ್ ದಿ ಎಕ್ಸ್‌ಪೀರಿಯನ್ಸ್ ಆಫ್ ಹ್ಯಾಪಿನೆಸ್.

3 ಯಾವಾಗ ಅತಿಯಾದ ನಿರೀಕ್ಷೆಗಳು ಅಂತ್ಯವಾಗುತ್ತದೆಯೋ ಆಗ ನೆಮ್ಮದಿ ಆರಂಭವಾಗುತ್ತದೆ,

3 ಬದುಕು ಒಂದು ಪಾಠದಂತೆ. ಅದು ಏನನ್ನು ಕಲಿಸುತ್ತದೆ ಎಂದು ಅರಿಯುವುದೇ ಜಾಣತನ.

3 ಅಂಗೈ ರೇಖೆಗಳಲ್ಲಿ ಭವಿಷ್ಯ ಅಡಗಿದೆ ಎಂಬುದನ್ನು ನಂಬಬೇಡಿ. ಏಕೆಂದರೆ ಹಸ್ತವೇ ಇಲ್ಲದವರಿಗೂ ಭವಿಷ್ಯವಿದೆ.

3 ವೇಸ್ಟ್ ಆಫ್ ಪ್ಲೆಂಟಿ ಈಸ್ ದಿ ರಿಸೋರ್ಸ್ ಆಫ್ ಸ್ಕೇರ್ಸಿಟಿ.

3 ಮೊದಲ ಸಲ ಕಂಡಾಗ ನಮಗೆ ಎಲ್ಲರೂ ವಿಶೇಷವಾಗಿ ಕಾಣುತ್ತಾರೆ. ಆದರೆ ನಮ್ಮ ಕೊನೆಯ ಕ್ಷಣದವರೆಗೂ ವಿಶೇಷವಾಗಿ ಉಳಿಯುವುದು ಅವರಲ್ಲಿ ಕೆಲವೇ ಮಂದಿ ಮಾತ್ರ.

3 ಪಶುವೈದ್ಯರುಗಳು ಲಕಿ, ಅವರ ರೋಗಿಗಳು ಯಾರೂ ಗೂಗಲ್ ಸರ್ಚ್ ಮಾಡುವುದಿಲ್ಲ.

3 ಡಸ್ಟ್ ಈಸ್ ಎ ಪ್ರೊಟೆಕ್ಟಿವ್ ಕೋಟಿಂಗ್ ಫಾರ್ ಫೈನ್ ಫರ್ನಿಚರ್. ■

TEMPLE OF KNOWLEDGE

# BEECHI Systems & Services

Email: admin@beechi.in
Web: www.beechi.in
Mob: 98452 64304

PLACEMENT SERVICES FOR:

- BFSI
- SOFTWARE
- MANUFACTURING
- AUTOMOBILES
- REAL ESTATE
- HOSPITALITY
- FMCG

## Beechi Prakashana ಬೀಚಿ ಪ್ರಕಾಶನ



**Books Available**

- Kannada Books
- Banking Exam Books
- Biographies
- Business & Economics
- Children & Young Adult Books
- Comics
- Competitive Exam Books
- Engineering Entrance Exam
- Fiction & Non-Fiction Books
- Office Stationery
- ಕನ್ನಡ ಪುಸ್ತಕಗಳು
- Health & Family
- Humour
- Law
- Literature
- Medical Entrance
- Politics
- Reference Books
- Religion & Spirituality
- Romance
- Other Books

**BUY Books online and get 10% discount.**

Email : admin@beechi.in | **www.beechi.in** | 98452 64304

You could also request any book of your choice by WhatsApp

# ಸೀಟಿ

**●ಕೆ.ಎಸ್.ಸೋಮೇಶ್ವರ**

ಇದೇನು ಅಂತೀರಾ? ನಾವು ಸಣ್ಣವರಿದ್ದಾಗ ಶಾಲೆಗಳಲ್ಲಿ ಪಿ.ಟಿ ಮಾಸ್ಟರು ಅವರ ಕೈಯಲ್ಲಿ ಅಲ್ಲಲ್ಲ ಬಾಯಲ್ಲಿ ಸದಾ ಕಾಲ ನಮ್ಮನ್ನು ಗದರಲು ಇದು ಇದ್ದೇ ಇರುತ್ತಿತ್ತು. ನಮ್ಮ ಶಾಲೆ ನ್ಯಾಷನಲ್ ಹೈಸ್ಕೂಲ್. ಅಲ್ಲೊಬ್ಬ ಮಹಾ ಶಿಸ್ತಿನ ಸಿಪಾಯಿ ಪಿ.ಟಿ. ಮಾಸ್ಟರು. ಇವರು ಸೇನೆಯಿಂದ ಬಂದವರು. ಅಂದ ಮೇಲೇ ಕಣ ಕಣಗಳಲ್ಲೂ ಹರಿಯುತ್ತಿದ್ದದು ಶಿಸ್ತೇ ಆಗಿರುತ್ತಿತ್ತು. ಇವರ ಹೆಸರು ರಾಜು ಎಂದು. ಆಗೆಲ್ಲ ದೊಡ್ಡ ದೊಡ ಐಟಂಗಳ ಕಾಲ ರೇಡಿಯೋ, ಟಿವಿ ಯಾವುದಾದರೂ ಸರಿಯೇ ಬೃಹತ್ ಗಾತ್ರದವೇ. ಅದೇ ರೀತಿಯಲ್ಲಿ ಈ ಸೀಟಿ ನಾನೇನು ಕಡಿಮೆ ಎನ್ನುವಂತೆ ನಮ್ಮ ಮಧ್ಯದ ಬೆರಳಿನಷ್ಟು ಉದ್ದವಿದ್ದು ಗಾತ್ರದಲ್ಲಿ ಒಂದು ಸುತ್ತು ದೊಡ್ಡದೇ ಇರುತ್ತಿತ್ತು ಈಗ ಅದರ ಆಕಾರ ಅರ್ಧ ಹೆಬ್ಬೆಟ್ಟಿನಷ್ಟೇ ಉದ್ದ ಮತ್ತು ಗಾತ್ರ. ಆಕಾರ ಏನೇ ಇರಲಿ ಸದ್ದಿನ ಗುದ್ದು ಕೊಡುವುದರಲ್ಲಿ ಇವು ಸದಾ ಮುಂದು. ಇವುಗಳ ಮಹತ್ಕಾರ್ಯ ಹೇಳಲು ಹೊರಟರೆ ಅದೊಂದು ಮಹಾ ಸಂಚಿಕೆಯೇ ಆಗತ್ತೆ. ಪೋಲೀಸರ ವಿಷಲ್ ನಮ್ಮನ್ನು ಗದರಿಸಿ, ಹೆದರಿಸಲು ಸದ್ದು ಮಾಡತ್ತೆ. ಇನ್ನು ಕೆಲವೆಡೆ ಇದರ ಉಪಯೋಗ ಬೇರೆ ಬೇರೆ ಯಾಗಿರತ್ತೆ. ಮನೆಯಲ್ಲಿ ವಿವಿಧ ಆಕಾರದ ಪ್ರಷರ್ ಕುಕರ್ ಗಳು ಒಳಗಿನ ಒತ್ತಡ ಹೆಚ್ಚಾದಾಗ ಮಾಡುವ ಸದ್ದು. ಇದೊಂದು ಮನೆ ಮನೆಯ ಕಥೆ ಬಿಡಿ. ಕೆಲವು ವರುಷಗಳ ಹಿಂದೆ ಹಾಲು ಕಾಯಿಸಲು ಕುಕ್ಕರ್ ಸಿಗುತ್ತಿತ್ತು. ಗಾತ್ರ ಸುಮಾರು ಒಂದು ಲೀಟರ್ ಹಿಡಿಸುವ ಅಳತೆಯದು. ಇದೂ ಸಹ ಸದ್ದು ಮಾಡಿ ತನ್ನ ಕೆಲಸ ಮುಗಿಯಿತು ಎಂದು ಹೇಳುತ್ತಿತ್ತು. ನಂತರದಲ್ಲಿ ಅದೇಕೋ ಇದು ನಮಗಳಿಗೆ ಬೇಡವಾಗಿ ಬದಲಿಗೆ ಉಷ್ಣತೆಯನ್ನೇ ನಿಮಿಷಗಳಂತೆ ಕಂಟ್ರೋಲ್ ಮಾಡುವ ಇಂಡಕ್ಷನ್ ಒಲೆಗಳಿವೆ. ಇವುಗಳೇ ನಿಮ್ಮ ಸಮಯ ಮುಗಿದಿದೆ ಎಂದು ಹೇಳಲು ಒಂದು ವಿಷಲ್ ಹಾಕುತ್ತದೆ. ಇದೇ ರಾಗ, ಪಾಡು ವಾಷಿಂಗ್ ಮೆಷಿನ್ ಗಳದ್ದು. ಕೆಲವು ಬಾತ್ ರೂಂ ಸಿಂಗರ್ ಗಳದ್ದೂ ಇದೇ ಪ್ರಾವಿಣ್ಯತೆ.

ಇನ್ನು ಆಂಬುಲೆನ್ಸ ಗಳು ಮತ್ತು ಅಗ್ನಿ ಶಾಮಕ ದಳದ ವಾಹನಗಳು. ಇವು ಒಂದು ರೀತಿ ನಿಲ್ಲದ, ಎದೆ ಬಡಿತ ಹೆಚ್ಚಿಸುವ ಸೀಟಿ. ಇನ್ನು ನಮ್ಮನ್ನಾಳುವವವರು ರಸ್ತೆಗೆ ಇಳಿದರೆ ಅವರಿಗೆ ಟ್ರಾಫಿಕ್ ಮುಜುಗರ ಬೇಡವೆಂದು ಅವರ ಮುಂದೆ ಬರುವ ಪೈಲಟ್ ವಾಹನಗಳ ಸೀಟಿಯ ಸದ್ದು. ಅದು ಇದ್ದರೇ ಈ ದೊಡ್ಡವರಿಗೆ ಮರ್ಯಾದೆ ಅನಿಸತ್ತೆ. ಕೆಲವೊಮ್ಮೆ ಇದು ಆಂಬುಲೆನ್ಸ್ ಸೈರನ್ ಅನ್ನೂ ಮೀರಿಸಿರುತ್ತೆ. ಇನ್ನು ಪ್ರತಿ ದಿನ ಕಸ ಸಂಗ್ರಹಣೆಗೆ ಬರುವ ನಗರ ಸಭೆಯ ಕಾರ್ಯಕರ್ತರು. ಇವರು ಸೀಟಿ ಊದಿದರೆಂದರೆ ಬಂದೇ, ಬರ್ತಾವ ಇದೀನಿ, ಬಂದೇ ಬಿಟ್ಟೆ ಎನ್ನುವ ಸಿಗ್ನಲ್. ಹೊಸ ಹೊಸ ಟ್ರಾಫಿಕ್ ಸಿಗ್ನಲ್ ಗಳೂ ಅಷ್ಟೇ ಇನ್ನೇನು ಹಸಿರು ಬಂತು ರೆಡಿ, ಸ್ಟಡಿ, ಗೋ ಎನ್ನವಂತೆ ಒಂದೆರಡು ಸೆಕೆಂಡ್ ಮೊದಲೇ ತಮಟೆ ಬಾರಿಸತ್ತೆ. ನಮ್ಮಲ್ಲಿ ದೇವಸ್ಥಾನಗಳಲ್ಲಿನ ಘಂಟೆಯ ನಾದ, ಜಾಗಟೆಗಳ ನಿನಾದ ನಮ್ಮಗಳ ಭಕ್ತಿಯನ್ನು ಹೆಚ್ಚಿಸುವಂತೆ ಮಾಡುತ್ತದೆ. ಈಗಂತೂ ಹಲವೆಡೆ ಅಡ್ವಾನ್ಸ್ಡ ತಂತ್ರಜ್ಞಾನದಲ್ಲಿ ಘಂಟಾನಾದ, ಝಾಗಟೆಗಳ ಸದ್ದು ವಿದ್ಯುತ್

ಮೂಲಕ ಬರುತ್ತದೆ. ಮಂಗಳಾರತಿಯ ಹೊತ್ತಿಗೆ ಸ್ವಿಚ್ ಹಾಕಿದರೆ ಸಾಕು ಆಟೋಮ್ಯಾಟಿಕ್ ನಿನಾದ ಮೊಳಗುತ್ತದೆ.. ಇನ್ನು ಹಸುಗಳು ಮತ್ತು ಎತ್ತುಗಳೂ ಸಹ ಕೊರಳಿಗೆ ಸಣ್ಣ ಗಂಟೆಗಳಿಂದ ಅಲಂಕೃತವಾಗಿ ನಡೆದಾಡುವ ನಿನಾದಗಳಾಗಿತ್ತು. ಈಗ ಸ್ವಲ್ಪ ಅಪರೂಪವೇ ಬಿಡಿ.

ಇಲ್ಲೊಂದು ನೈಜ ಘಟನೆ ಹೇಳುತ್ತೇನೆ. ಸುಮಾರು 2005 ನೇ ಇಸವಿಯಲ್ಲಿ ನನ್ನ ಮಗಳು ಮುಂಬೈನಲ್ಲಿ ವಾಸವಿದ್ದಳು. ಒಮ್ಮೆ ಅವರ ಮನೆಗೆ ಪಯಣಿಸಲು ವಿಮಾನ ಹತ್ತಲು ಮನೆ ಜಯನಗರದಿಂದ ಒಂದು ತ್ರಿಚಕ್ರಿ ಪೈಲಟ್ ನನ್ನು ಗೊತ್ತು ಮಾಡಿಕೊಂಡು ಅವರ ರಥದಲ್ಲಿ ವಿಮಾನ ನಿಲ್ದಾಣಕ್ಕೆ ಹೊರಟೆವು. ಆಗಿನ್ನು ಕೆಂಪೇಗೌಡರು ಬಂದಿರಲಿಲ್ಲ. ಹೆಚ್. ಏ.ಎಲ್ ವಿಮಾನ ನಿಲ್ದಾಣವೇ ನಮ್ಮ ಆಗಿನ ಗುರಿಯಾಗಿತ್ತು. ಸರಿ ಸುಮಾರು ಏರ್ ಪೋರ್ಟ್ ರಸ್ತೆಗೆ ಬರುವಷ್ಟರಲ್ಲಿ ರಸ್ತೆಯ ಟ್ರಾಫಿಕ್ ಒತ್ತಡ ಹೆಚ್ಚಾಗಿತ್ತು. ಈ ಪೈಲಟ್ ಮಹಾಶಯ ಏನು ಮಾಡಿದ ಗೊತ್ತೇ ? ತನ್ನಲ್ಲಿದ್ದ ಸೀಟಿಯನ್ನು ತೆಗೆದು ಜೋರಾಗಿ ಶಂಖ ವಾದ್ಯ ಮಾಡಿದ. ಅದೊಂದು ಶ್ರೀಕೃಷ್ಣನ ಪಾಂಚಜನ್ಯವೋ ಎಂಬಂತೆ ಸುತ್ತಲಿನ ವಾಹಕರು ಗಲಿಬಿಲಿಯಿಂದ ಅವನಿಗೆ ಹೆದರಿಯೋ, ಗೌರವವೋ ತಿಳಿಯದೇ ನಮ್ಮ ವಾಹನಕ್ಕೆ ದಾರಿ ಮಾಡಿ ಕೊಟ್ಟರು. ಈ ಮಹಾಶಯ ತನ್ನ ಸಾಧನೆಗೆ ಕಾಲರ್ ಅಪ್ ಮಾಡಿ ಜಯದ ನಗೆ ಬೀರಿದ.

ನಮ್ಮಲ್ಲಿ ಈ ಸೀಟಿ ಶಬ್ದಗಳಿಗೆ ಪುರಾಣೇತಿಹಾಸವಿದೆ. ಶ್ರೀ ಕೃಷ್ಣನ ಪಾಂಚಜನ್ಯವೇ ಇವೆಲ್ಲದರ ಜನಕ ಎನ್ನ ಬಹುದೇನೋ. ಏಕೆಂದರೆ ನಮಗೆ ಎಲ್ಲಾ ಆ ದೇವಾನುದೇವತೆಗಳ ಅಭಯ ಹಸ್ತ ಬೇಕೇ ಬೇಕು. ನಮ್ಮ ರಾಜ ಮಹಾರಾಜರುಗಳಿಗೆ ಬಹು ಪರಾಕ್ ಹೇಳುವ ಮೊದಲು ದೊಡ್ಡ ದೊಡ್ಡ ಬಾಯಿ ಆಕಾರದ ಶಬ್ದ ವಾದ್ಯಗಳು ತಮ್ಮ ಕೆಲಸ ಮುಗಿಸಿದ ಮೇಲೆಯೇ ಪರಾಕುಗಳು. ಇನ್ನು ಯುದ್ಧ ಭೂಮಿಯಲ್ಲಿ ಇದರ ಸದ್ದು ಅತಿರಥ ಮಹಾರಥರನ್ನು ಹುರಿದುಂಬಿಸುವುದಲ್ಲದೇ ಆನೆ, ಕುದುರೆ, ಮತ್ತು ಪದಾತಿ ದಳಗಳನ್ನು ಎಚ್ಚರದಿಂದಿರಿಸಲೂ ಇದೇ ಚಂಡ ಶಾಸನವಾಗಿತ್ತು. ಇನ್ನು ಬಾಯಲ್ಲೇ ಸೀಟಿ ಹೊಡೆಯುವ ತರುಣ ತರುಣಿಯರಿಗೇನೂ ಕಡಿಮೆ ಇಲ್ಲ. ಅದು ವಿವಿಧ ಡೆಸಿಬೆಲ್ ಗಳಲ್ಲಿರುತ್ತದೆ. ಕೆಲವೊಮ್ಮೆ ಹಕ್ಕಿ ಪಕ್ಷಿಗಳೂ ತಬ್ಬಿಬ್ಬಾಗ ಬೇಕು ಹಾಗಿರುತ್ತದೆ. ಇದು ಯಾವ ಯಾವ ಕಾರಣಕ್ಕೆ ಎಂದು ಹೇಳಲ್ಲ. ಓದುಗರ ಊಹೆಗೇ ಬಿಡ್ತೀನಿ . ಇನ್ನೊಂದು ವಿಷಯ ವಾಹನಗಳದ್ದು. ಆಟೋರಾಜನಿಂದ ಹಿಡಿದು ರಸ್ತೆ ರಾಜರುಗಳಾದ ಬಸ್, ಲಾರಿ ಇವರಿಗೆಲ್ಲ ಆಗ ರಬ್ಬರ್ ತುದಿಯ ಶಂಖದ ಕೊಂಬಿನಂತಹ ಪೀಪಿಗಳು. ಇದರ ಪೊಂ ಪೋಂ ಪೊಮಾಯ್ ಹಾರ್ನ್ ಈಗಲೂ ಕಿವಿಯಲ್ಲಿ ರಿಂಗಣಿಸುತ್ತಿರುತ್ತದೆ. ಇದು ಈಗಿಲ್ಲ ಬಿಡಿ. ಇನ್ನು ಮಕ್ಕಳ ಆಟಿಕೆಗಳಲ್ಲಿ ವಿವಿಧ ರೀತಿಯ ಪೀಪಿಗಳು!. ಇದೂ ಈಗಿಲ್ಲ ಬಿಡಿ. ಏಕೆಂದರೆ, ಅವುಗಳಿಗೆ ದೊರೆತಿರುವ ಬಾರ್ನ್ ಗಿಫ್ಟ್ ಮೊಬೈಲ್ ನಲ್ಲಿ ಅವು ತಮಗೆ ತೋಚಿದ ಸದ್ದು ಮಾಡಿಕೊಂಡು ಹಾಡಿ ಕುಣಿಯಬಹುದಾಗಿದೆ.

ಇತ್ತೀಚಿಗೆ ನಮ್ಮ ಬೃಹತ್ ರಸ್ತೆ ಸಾರಿಗೆ ಮಂತ್ರಿಯವರಿಗೆ ಅವರ ಬಹು ಅಂತಸ್ತಿನ ಮನೆಯ ಮೆಲೆ ಯೋಗ ನಿದ್ರೆ ಮಾಡಲಾಗುತ್ತಿಲ್ಲವಂತೆ. ಕಾರಣ ರಸ್ತೆಯಲ್ಲಿನ ವಾಹನಗಳ ಪೊಮಾಯ್ ಅಲ್ಲ ಹಾರ್ನ್‌ಗಳ ಸದ್ದು. ಈ ಸದ್ದು

ವಿಶ್ವಾಮಿತ್ರನ ಮುಂದೆ ಘಲ್ಲು ಘಲ್ಲೆನುತಾ ಕುಣಿದು ಅವನ ತಪೋಭಂಗ ಮಾಡಿದ ಮೇನಕೆಯ ಗೆಜ್ಜೆ ನಾದದಂತಾಗಿರಬೇಕು. ನಮ್ಮ ಮಂತ್ರಿಗಳಿಗೆ. ಹಾಗಾಗಿ ವಾಹನಗಳ ಕಿವಿ ಗಡಚಿಕ್ಕುವ ಸದ್ದಿಗೆ ಬದಲಾಗಿ ಕಿವಿಯಲ್ಲಿ ಗುಯಿಗುಡುವ ಸೊಳ್ಳೆಯ ಸಿಳ್ಳೆ ಅಯ್ಯೋ ಅಲ್ಲಲ್ಲ, ವೀಣೆ, ಸಿತಾರ, ತಂಬೂರಿ ಕೃಷ್ಣನ ಕೊಳಲಿನ ನಿನಾದ ವಿರುವ ಹಾರ್ನ್‌ಗಳ ಅಳವಡಿಕೆಗೆ ಫರ್ಮಾನು ಹೊರಡಿಸಿದ್ದಾರಂತೆ. ಏನು ಮಾಡುವುದು ರಾಜನ ಮಾತು ಪ್ರಜೆಗಳು ಪಾಲಿಸಲೇ ಬೇಕಲ್ಲವೇ ! ಅದೇಕೋ ತಬಲ, ಮೃದಂಗ, ತಮಟೆ ಬಗ್ಗೆ ಹೇಳಿಲ್ಲ. ಬಹುಶಃ ಇವುಗಳು ವಿರೋಧಿ ಚಳುವಳಿ ಮಾಡುವವರಿಗೆ ಮೀಸಲು ಅನ್ನಸ್ತೆ.

ನೋಡಿ ಒಂದು ಸೀಟಿ ಸದ್ದು ಎಷ್ಟೆಲ್ಲ ಶಬ್ದ ಸಾಮ್ರಾಜ್ಯ ಬೆಳಸತ್ತೆ ಅಲ್ಲವೇ

■

## ಅನಿರ್ಬಂಧಿತ ನಂಬಿಕೆ

ಪ್ರತಿ ದಿನ ಮುಂಜಾನೆ ಪುಟ್ಟ ಬಾಲಕಿಯೊಬ್ಬಳು ದೇವಾಲಯಕ್ಕೆ ಬಂದು, ದೇವಿಮಾತೆಯ ಮುಂದೆ ನಿಂತು, ಕಣ್ಣು ಮುಚ್ಚಿ, ಕೈ ಮುಗಿದು ಕೊಂಡು ಒಂದೆರಡು ನಿಮಿಷಗಳ ಕಾಲ ಏನೋ ಗೊಣಗಿಕೊಳ್ಳುತ್ತಿದ್ದಳು. ನಂತರ ಕಣ್ಣು ತೆರೆದು ನಮಸ್ಕರಿಸಿ

ದೇವಿಯನ್ನು ನೋಡಿ ನಸುನಕ್ಕು ಓಡಿ ಹೋಗುತ್ತಿದ್ದಳು. ಇದು ನಿತ್ಯದ ಪರಿಪಾಠವಾಗಿತ್ತು.

ನಿತ್ಯವೂ ಬಾಲಕಿಯನ್ನು ಗಮನಿಸುತ್ತಿದ್ದ ಪೂಜಾರಿಗೆ ಅವಳು ಮಾಡುತ್ತಿದ್ದುದಾದರೂ ಏನು ಎಂದು ತಿಳಿಯುವ ಕುತೂಹಲ.

ಒಂದು ಮುಂಜಾನೆ ಅವಳು ತನ್ನ ನಿತ್ಯದ ಪರಿಪಾಠವನ್ನು ಮುಗಿಸುವುದನ್ನೇ ಕಾಯುತ್ತಿದ್ದ ಪೂಜಾರಿಯು ಅವಳ ತಲೆಯ ಮೇಲೆ ಕೈಯಿಟ್ಟು , "ಮಗು, ನೀನು ಇಲ್ಲಿ ನಿತ್ಯವೂ ಬರುವುದನ್ನು ನೋಡಿದ್ದೇನೆ.

"ಇಲ್ಲಿ ನೀನು ಮಾಡುವುದಾದರೂ ಏನು?" ಎಂದನು.

"ನಾನು ಪ್ರಾರ್ಥಿಸುತ್ತೇನೆ", ತಕ್ಷಣವೇ ನುಡಿದಳು ಬಾಲಕಿ.

"ನಿನಗೆ ಯಾವುದಾದರೂ ಪ್ರಾರ್ಥನೆ ಬರುತ್ತದೆಯೇ?", ತನ್ನ ಧ್ವನಿಯಲ್ಲಿ ಅನುಮಾನ ಸೂಚಿಸುತ್ತಾ ಕೇಳಿದನು. ಇಲ್ಲವೆಂದಳು ಬಾಲಕಿ.

"ಮತ್ತೆ ದಿನವೂ ನೀನು ಕಣ್ಣು ಮುಚ್ಚಿ ಮಾಡುವುದಾದರೂ ಏನು?"ಎಂದು ಪೂಜಾರಿ ನಸುನಕ್ಕ. ಬಾಲಕಿ ಮುಗ್ಧತೆಯಿಂದ ಉತ್ತರಿಸಿದಳು,"ನನಗೆ ಯಾವ ಪ್ರಾರ್ಥನೆಯೂ ಬರಲ್ಲ. ಆದರೆ ನಂಗೆ ಅ, ಆ, ಇ ಈ, ಳ ತನಕ ಗೊತ್ತು. ಅದನ್ನೇ ಐದು ಬಾರಿ ಹೇಳಿ, ದೇವಿಗೆ ಹೇಳ್ತೀನಿ, ನಂಗೆ ನಿನ್ನ ಪ್ರಾರ್ಥನೆ ಬರೋಲ್ಲ. ಆದರೆ ಅದು ಈ ಅಕ್ಷರ ಮಾಲೆಯ ಹೊರಗಂತೂ ಇರುವುದಕ್ಕೆ ಸಾಧ್ಯವಿಲ್ಲ. ದಯವಿಟ್ಟು ಈ ಅಕ್ಷರಗಳನ್ನು ನಿನಗೆ ಹೇಗೆ ಬೇಕೋ ಹಾಗೆ ಜೋಡಿಸಿಕೋ." ಅದುವೇ ನನ್ನ ಪ್ರಾರ್ಥನೆ.

ಬಾಲಕಿ ಜಿಗಿಯುತ್ತಾ ದೇವಾಲಯದಿಂದ ಓಡಿಹೋದಳು.

ದಂಗುಬಡಿದ ಪೂಜಾರಿಯು ಅವಳು ಕಣ್ಮರೆಯಾಗುವುದನ್ನೇ ನೋಡುತ್ತಾ ಬಹಳ ಹೊತ್ತು ಹಾಗೇ ನಿಂತು ಬಿಟ್ಟನು.

– **ನಳಿನಿ ಸೂರ್ಯಪ್ರಕಾಶ್** *(ಇಂಟರ್‌ನೆಟ್‌ನಿಂದ)*

# ವಿಭ ಮತ್ತು ನಾನು

●ಡಾ.ಡಿ.ವಿ.ಗುರುಪ್ರಸಾದ್

ಈ ಶೀರ್ಷಿಕೆಯನ್ನು ನೋಡಿ ವಿಭ ನನ್ನ ಗರ್ಲ್‌ಫ್ರೆಂಡ್ ಎಂದು ದಯವಿಟ್ಟು ಭಾವಿಸಬೇಡಿ, ವಿಭ ಎಂದರೆ ವಿಶ್ವದಾದ್ಯಂತ ತನ್ನ ದೋಸೆಗೆ ಖ್ಯಾತಿಯಾಗಿರುವ ಬಸವನಗುಡಿಯ ಹೊಟೇಲ್ ವಿದ್ಯಾರ್ಥಿ ಭವನ.

ನನ್ನ ತಾಯಿಯ ತವರು ಬಸವನಗುಡಿಯ ಗೋವಿಂದಪ್ಪ ರಸ್ತೆಯಲ್ಲಿ ಇದ್ದ ಕಾರಣ ನಾನು ನನ್ನ ಬಾಲ್ಯದಲ್ಲಿ ಅಜ್ಜಿಯ ಮನೆಗೆ ಹೋದಾಗಲೆಲ್ಲಾ ನನ್ನ ಸೋದರ ಮಾವಂದಿರು ನನ್ನನ್ನು ಮಹಾಲಕ್ಷ್ಮಿ ಟಿಫನ್ ರೂಂ, ಸರ್ಕಲ್ ಲಂಚ್ ಹೋಂ, ದ್ವಾರಕ ಹಾಗೂ ವಿಭಗಳಿಗೆ ಕರೆದುಕೊಂಡು ಹೋಗುತ್ತಿದ್ದರು. ಆದರೆ ವಿಶೇಷವಾಗಿ ವಿಭಗೆ ಹೋಗುತ್ತಿದ್ದ ನೆನಪು ಬರುತ್ತಿಲ್ಲ. ಈ ನೆನಪು ಆರಂಭವಾಗುವುದೇ 1968ರ ಅಂತ್ಯದಿಂದ. ಆಗ ನಾನು ನ್ಯಾಷನಲ್ ಕಾಲೇಜಿನಲ್ಲಿ ಬಿ.ಎಸ್ಸಿ ಓದುತ್ತಿದ್ದೆ. ಮಲ್ಲೇಶ್ವರಂನಲ್ಲಿದ್ದ, ಈಗಲೂ ಇರುವ, ನನ್ನ ಮನೆಯಿಂದ ಕಾಲೇಜಿಗೆ ನನ್ನ ಸಹಪಾಠಿ ಎನ್.ವಿ.ಪ್ರಕಾಶ್‌ನ ಜತೆಗೆ ದಿನವೂ 11ನೇ ನಂಬರ್ ಬಸ್ಸಿನಲ್ಲಿ ಹೋಗುತ್ತಿದ್ದೆ. ಆ ಸಮಯದಲ್ಲಿ ಆ ರೂಟಿನ ಬಸ್ಸಿನಲ್ಲಿ ಖ್ಯಾತ ಸಿನಿಮಾ ಸ್ಟಾರ್ ರಜನಿಕಾಂತ್ ಕಂಡಕ್ಟರಾಗಿ ಬರುತ್ತಿದ್ದದ್ದು ನನ್ನ ತಲೆಮಾರಿನವರಿಗೆ ತಿಳಿದಿರಲೇ ಬೇಕು. ಈತನೂ ವಿಭದ ಗ್ರಾಹಕರಲ್ಲೊಬ್ಬನೆಂದು ನನಗೆ ತಿಳಿದಿದ್ದು ಇತ್ತೀಚೆಗಷ್ಟೇ.

ಈಗಿನಂತೆ ಆಗ ಮಧ್ಯಾಹ್ನ 12.30ಕ್ಕೆ ವಿಭ ಮುಚ್ಚುತ್ತಿರಲಿಲ್ಲ. ಹೀಗಾಗಿ ನಮ್ಮಲ್ಲಿ ಯಾರೊಬ್ಬರ ಜೇಬಿನಲ್ಲಿ ಕಾಸಿದ್ದಾಗಲೆಲ್ಲಾ ಕಾಲೇಜಿನ ಊಟದ ವಿರಾಮದ ಸಮಯದಲ್ಲಿ ಪ್ರಕಾಶ್ ಹಾಗೂ ನಾನು ವಿದ್ಯಾರ್ಥಿ ಭವನಕ್ಕೆ ಹೋಗುತ್ತಿದ್ದೆವು. ಬೈಟು ಮಸಾಲೆ ತಿಂದು, ದುಡ್ಡಿದ್ದರೆ ಬೈಟು ಕಾಫಿ ಕುಡಿದು ಇಲ್ಲವಾದರೆ ನೀರು ಕುಡಿದು, ನಮ್ಮ ತರಗತಿಗಳಿಗೆ ವಾಪಸ್ ಆಗುತ್ತಿದ್ದೆವು. ಆ ಸಮಯದಲ್ಲಿ ವಿಭ ಒಂದು ಸಣ್ಣ 16 ಟೇಬಲ್ಲಿನ ಹೋಟೆಲ್ಲಾಗಿತ್ತು. ಈಗಿನಂತೆ ಆಗಲೂ ಕೂಡಲು ಜಾಗ ಸಿಗುವುದು ಕಷ್ಟವಾಗುತ್ತಿದ್ದ ಕಾರಣ ಮತ್ತು ನಾವು ಲಂಚ್ ಟೈಮ್ ಮುಗಿಯುವುದರೊಳಗೆ ಕಾಲೇಜಿಗೆ ವಾಪಸಾಗಬೇಕಾದ ಕಾರಣ, ಸೀಟಿಗಾಗಿ ಪಡುತ್ತಿದ್ದ ಕಸರತ್ತು ಅಷ್ಟಿಷ್ಟಲ್ಲ. ಒಳಗೆ ಬರುವಾಗಲೇ ಯಾವ ಟೇಬಲ್ಲಿನವರಿಗೆ ದೋಸೆ ಹೋಗುತ್ತಿದೆ ಎನ್ನುವುದನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದವು. ಈ ಕೆಲಸ ವಿಭದಲ್ಲಿ ಬಲುಸುಲಭ. ಏಕೆಂದರೆ ತನ್ನ ಮೊಣಕೈನಿಂದ ತೋಳಿನವರೆಗೂ ದೋಸೆಯ ತಟ್ಟೆಗಳನ್ನು ಬ್ಯಾಲೆನ್ಸ್ ಮಾಡುತ್ತಾ ಹೋಗುವ ವೇಟರ್‌ಗಳು ವಿಭ ಹೊರತಾಗಿ ನಮಗೆಲ್ಲಿಯೂ ಕಾಣ ಸಿಗುವುದಿಲ್ಲ. (ಅಲ್ಲಿ ಕಲಿತ ಸೂಕ್ಷ್ಮವಾಗಿ ಗಮನಿಸುವ ಗುಣ ನನಗೆ ನನ್ನ ಮುಂದಿನ ಪೊಲೀಸ್ ನೌಕರಿಯಲ್ಲಿ ಸಾಕಷ್ಟು ಉಪಯೋಗಕ್ಕೆ ಬಂದಿತು ಎಂದು ಹೇಳಲೇಬೇಕಾಗಿಲ್ಲ). ಹೋಗಬೇಕಾದ ಟೇಬಲ್ಲನ್ನು ಗುರುತಿಸಿದ ನಾವು ನಮ್ಮ ಮುಂದೆ ನಿಂತಿದ್ದವರ್‍ಯಾರೂ ಆ ಟೇಬಲ್ಲಿಗೆ ಹೋಗದಂತೆ ಅವರನ್ನು ಮೊಣಕೈಗಳಿಂದ ನೂಕಿ, ಟೇಬಲ್ ಸಿಕ್ಕ ನಂತರ ಯುದ್ಧದಲ್ಲಿ ಜಯಶಾಲಿಗಳಾದ ಸೈನಿಕರಂತೆ ಮೀಸೆ ತಿರುವುತ್ತಿದ್ದೆವು. "ಸರ್ವೈವಲ್ ಆಫ್ ದ ಫಿಟ್ಟೆಸ್ಟ್" ಎನ್ನುವ ಪಾಠವನ್ನು ಇದರಿಂದ ಕಲಿತಿದ್ದಲ್ಲದೇ ಮುಂದೆಯೂ ನನ್ನ ಬಳಕೆಗೆ ಬಂದಿತು.

ಈಗಿನ ಮದುವೆ ಮನೆಗಳ ಡೈನಿಂಗ್ ಹಾಲುಗಳಲ್ಲಿ ಮೊಸರು ಬಡಿಸುವಷ್ಟರಲ್ಲೇ

ಸೀಟು ಹಿಡಿಯಲು ಹೋದಹಾಗೆ ಕೆಲವೊಮ್ಮೆ ನಮಗೆ ಬೇಕಾದ ಟೇಬಲ್ಲಿನ ಬಳಿಗೇ ಹೋಗಿ ಅದರ ಪಕ್ಕದಲ್ಲಿ ನಿಂತು ಅದರಲ್ಲಿ ಕುಳಿತ ಗ್ರಾಹಕ ಏಳಲು ತಯಾರಾಗುತ್ತಲೇ ಆ ಸೀಟನ್ನು ಆಕ್ರಮಿಸಿಕೊಳ್ಳುತ್ತಿದ್ದೆವು. ಆ ಗ್ರಾಹಕನೇನಾದರೂ ನಿಧಾನವಾಗಿ ದೋಸೆಯನ್ನು ಸವಿಯುತ್ತಿದ್ದರೆ, ಅಥವಾ ದೋಸೆ ಸವಿದು ನಿಧಾನವಾಗಿ ಕಾಫಿ ಹೀರುತ್ತಿದ್ದರೆ ಅವನಿಗೆ ಹಿಡಿಶಾಪ ಹಾಕುತ್ತಿದ್ದೆವು (ಮನಸ್ಸಿನಲ್ಲೇ). ಅಂದಹಾಗೆ ನನ್ನ ಪಕ್ಕದಲ್ಲಿ ಯಾರಾದರೂ ಬಂದು ನಿಂತು ನನ್ನ ತಟ್ಟೆಯನ್ನೇ ನೋಡುತ್ತಾ ನಿಲ್ಲುತ್ತಿದ್ದರೆ ನನಗೆ ಕೆಂಡದಂತ ಕೋಪ ಬರುತ್ತಿತ್ತು. ಅವರನ್ನೊಮ್ಮೆ ದುರುಗುಟ್ಟಿ ನೋಡುತ್ತಿದ್ದೆ. ಅವರು ಕೇರ್ ಮಾಡುತ್ತಿರಲಿಲ್ಲವೆನ್ನಿ. ಒಂದು ವೇಳೆ ಪಕ್ಕಕ್ಕೆ ಯಾವುದಾದರೂ ಸುಂದರ ತರುಣಿ ಬಂದು ನಿಂತರೆ (ಇಂತಹ ಅವಕಾಶ ಬಂದದ್ದು ಕೆಲವೇ ಕೆಲವು) ನಾನು ನನ್ನ ಸೀಟನ್ನು ಅವಳಿಗೆ ಕೊಡಲು ಮುಂದಾಗುತ್ತಿದ್ದೆ.

ಹಲವಾರು ತಿಂಗಳುಗಳ ನಂತರ ನಮಗೆ ವಿಭದ ಅಡುಗೆ ಕೋಣೆಯ ಪಕ್ಕದಲ್ಲಿರುವ ದೊಸೆ ಹಿಟ್ಟು ರುಬ್ಬುವ ಜಾಗದಲ್ಲಿ ಮರದ ಬೆಂಚೊಂದಿದ್ದು ಅಲ್ಲಿಯೂ ಕೂತು ದೋಸೆ ತಿನ್ನಬಹುದೆಂದು ತಿಳಿಯಿತು. ಆಗ ಅಲ್ಲಿಗೇ ಹೋಗುವುದನ್ನು ಪ್ರಾರಂಭಿಸಿದೆವು. ಎಡಗೈಯಲ್ಲಿ ಬಿಸಿ ಬಿಸಿ ದೋಸೆಯ ತಟ್ಟೆಯನ್ನು ಹಿಡಿದು, ಬಲಗೈಯಿಂದ ದೋಸೆಯನ್ನು ಮುರಿಯುತ್ತಾ ತಿನ್ನುವ ಸರ್ಕಸ್ ಕಲಿತೆವು. ಆನಂತರ ಅಲ್ಲಿ ಕೊಡುವ ಹಳೆಯ ಪೇಪರಿನ ಚೌಕದ ತುಂಡಿನಿಂದ ಕೈಯಲ್ಲಿನ ಜಿಡ್ಡನ್ನೊರೆಸಿಕೊಂಡು ಬಿಲ್ ಕೊಡುವ ಮೊದಲು ಕೌಂಟರ್ ಮುಂದಿರುವ ವಾಷ್ ಬೇಸಿನ್‌ನಲ್ಲಿಟ್ಟಿದ್ದ 501 ಬಟ್ಟೆ ಸೋಪಿನ ತುಂಡಿನಲ್ಲಿ ಕೈತೊಳೆದುಕೊಂಡು ಬಂದರೆ ಅಂದಿನ ಸಾಹಸ ಮುಗಿದಂತೆ.

1970 ರಿಂದ 1992 ವರೆಗೆ ನಾನು ಬೆಂಗಳೂರಿನಿಂದ ಹೊರಗಿದ್ದು ಅಷ್ಟರಲ್ಲಿ ನನ್ನ ಮದುವೆಯೂ ಆಗಿತ್ತು. ನನ್ನ ಶ್ರೀಮತಿ ಜಯನಗರದವಳಾಗಿದ್ದು ಆವಳ ಸೋದರ ಸಿನಿಮಾ ನಟ ಎಡಕಲ್ಲು ಗುಡ್ಡ ಚಂದ್ರಶೇಖರ್‌ನಿಂದ ಹಿಡಿದು ಅವರ ಕುಟುಂಬದವರೆಲ್ಲ ವಿಭದ ಗ್ರಾಹಕರು. ಹೀಗಾಗಿ ನಾವು ಬೆಂಗಳೂರಿಗೆ ಬಂದಾಗಲೆಲ್ಲಾ ವಿಭಗೆ ಭೇಟಿ ನೀಡುವುದು ಕಡ್ಡಾಯವಾಗಿ ಹೋಯಿತು. ಚಂದ್ರಶೇಖರ್ ಮೂಲಕ ನನಗೆ ವೈ.ಎನ್.ಕೆ ಅವರ ಪರಿಚಯವಾಯಿತು. ಅವರೋ ತಿಂಡಿಪ್ರಿಯರು. ಅವರಿಂದ ಭಕ್ಷ್ಯಭೋಜನಗಳನ್ನು ಹೇಗೆ ತುಲನೆಮಾಡಬೇಕೆನ್ನುವುದನ್ನು ನಾನು ಕಲಿತೆ.

1993ರಲ್ಲಿ ನಾನು ಕೆ.ಎಸ್.ಆರ್.ಟಿ.ಸಿಯಲ್ಲಿ ನಿರ್ದೇಶಕನಾಗಿ ನೇಮಕಗೊಂಡೆ. ಇದರ ಫಲವಾಗಿ ಇಡೀ ಕರ್ನಾಟಕವನ್ನು ರಸ್ತೆಯ ಮೂಲಕ ಸುತ್ತುವ ಅವಕಾಶ ನನಗೊದಗಿತು. ಆ ಸಮಯದಲ್ಲಿ ರಾಜ್ಯದಲ್ಲಿ ಎಲ್ಲೆಲ್ಲಿ ಸವಿಯಾದ ದೋಸೆಗಳು ಸಿಗುತ್ತವೆ ಎನ್ನುವ ಬಗ್ಗೆ ತಿಳಿಯಲು ನನಗೆ ಅನುಕೂಲವಾಯಿತು. ಉತ್ತರ ಕನ್ನಡದ ಹೊನ್ನಾವರದ ರಸ್ತೆಯ ಬದಿಯಲ್ಲಿನ ಭಟ್ಟರ ಹೋಟೇಲ್‌ನ ತುಪ್ಪದ ದೋಸೆ, ಚಿತ್ರದುರ್ಗದ ಲಕ್ಷ್ಮಿವಿಲಾಸ ಹೊಟೇಲ್, ಶಿವಮೊಗ್ಗೆಯ ಮೀನಾಕ್ಷಿ ಭವನ, ಮೈಸೂರಿನ ಗಾಯತ್ರಿ ಟಿಫನ್ ರೂಂ ಮತ್ತು ಗುರುಪ್ರಸಾದ್ ಹೋಟೆಲ್‌ಗಳ ಸೆಟ್ ದೋಸೆ, ರಮ್ಯ ಮತ್ತು ಮೈಲಾರಿ ಹೋಟೆಲ್ಲುಗಳ ದೋಸೆಗಳನ್ನು ಮತ್ತು ನಮ್ಮ ಮನೆಯ ಹತ್ತಿರವಿರುವ ಸಿಟಿಆರ್‌ನ ದೋಸೆಗಳನ್ನು ಸವಿಯುವಾಗ ಅವನ್ನು ಅರಿವಿಲ್ಲದಂತೆಯೇ ವಿದ್ಯಾರ್ಥಿ ಭವನದ ದೋಸೆಗೆ ಹೋಲಿಸುತ್ತಿದ್ದೆ. ಪ್ರತಿಯೊಂದಕ್ಕೂ ಅದರದ್ದೇ

ವಿಶೇಷವಿದೆ ಎನ್ನುವುದನ್ನರಿತೆ.

ವಿಭದ ಮಸಾಲೆ ದೋಸೆಯನ್ನು ಸವಿಯುವುದರಲ್ಲಿಯೂ ನನ್ನದೇ ಒಂದು ವಿಧಾನವಿದೆ. ಮಧ್ಯಭಾಗವನ್ನು ಮೊದಲಿಗೆ ಅಟ್ಯಾಕ್ ಮಾಡಿ ಆನಂತರ ಹೊರ ಭಾಗವನ್ನು ತಿನ್ನಬೇಕೆನ್ನುವುದು ನನ್ನ ಕೆಲವು ಗೆಳೆಯರ ಅನಿಸಿಕೆ. ನನಗೆ ಈ ರೀತಿ ತಿನ್ನಲಾಗುವುದಿಲ್ಲ. ಏಕೆಂದರೆ ದೋಸೆಯ ಮಧ್ಯದಲ್ಲಿ ಹಾಕಿರುವ ಬೆಣ್ಣೆ ದೋಸೆಯ ಅಂಚಿನವರೆಗೆ ಹೋಗುವುದಿಲ್ಲ. ಎರಡನೆಯದು ವಿದ್ಯಾರ್ಥಿಭವನದಲ್ಲಿ ನೀರು ಚಟ್ನಿಯನ್ನು ತಟ್ಟೆಯ ಒಂದು ಪಾರ್ಶ್ವಕ್ಕೆ ಸುರಿಯುವ ಕಾರಣ ದೋಸೆ ತನ್ನ ಅಂಚಿನಲ್ಲಿನ ಗರಿಯನ್ನು ಕಳೆದುಕೊಳ್ಳುತ್ತದೆ. ಕೆಲವು ವೇಳೆ ಚಟ್ನಿ ಹಾಕುವುದು ತಡವಾದರೆ ಅಂಚಿನ ಬಿಸಿ ಕಡಿಮೆಯಾಗುತ್ತದೆ. ಹೀಗಾಗಿ ಮೊದಲು ಅಂಚನ್ನು ಮುರಿದು ನಂತರ ದೋಸೆಯ ಮಧ್ಯಭಾಗದಲ್ಲಿ ತೂತೊಂದನ್ನು ಮಾಡಿ ಅಲ್ಲಿರುವ ಬೆಣ್ಣೆಮಿಶ್ರಿತ ಪಲ್ಯವನ್ನು ಅಂಚಿನ ಜತೆ ನೆಂಜಿಕೊಂಡು ತಿನ್ನುವುದು ನನ್ನ ವಾಡಿಕೆ. ಇದನ್ನು ನಾನು ಬದಲಾಯಿಸಲಾರೆ.

ವಿದ್ಯಾರ್ಥಿ ಭವನ ಮಸಾಲೆ ದೋಸೆಯೆಂದರೆ ಕೇವಲ ಅಲೂಗೆಡ್ಡೆ ಪಲ್ಯ ಹಾಕಿರುವ ದೋಸೆಯೆಂದು ನಾನು ಮೊದಲಿಗೆ ಭಾವಿಸಿದ್ದೆ. ವೈಎನ್‌ಕೆ ನನಗೆ ವಿಭದ ಸಾಗು ಮಸಾಲೆಯ ಬಗ್ಗೆ ಮಾಹಿತಿ ಕೊಟ್ಟರು. ಆ ದೋಸೆಯನ್ನೊಮ್ಮೆ ತಿಂದ ಬಳಿಕ ನಾನು ಅದನ್ನೇ ಹೆಚ್ಚಾಗಿ ತಿನ್ನತೊಡಗಿದೆ. ಒಂದು ಬಾರಿ ಸಾಗು ಮಸಾಲೆ ತಿಂದರೆ ಮುಂದಿನ ಬಾರಿ ಪಲ್ಯದ ಮಸಾಲೆ ತಿನ್ನುತ್ತಿದ್ದೆ. ಕೆಲವರು ಒಂದರ ನಂತರ ಒಂದರಂತೆ ಎರಡೂ ಬಗೆಯ ದೋಸೆಗಳನ್ನು ಏಕೆ ತಿನ್ನಬಾರದು ಎಂದು ನನಗೆ ಕೇಳುತ್ತಾರೆ. ಎರಡೂ ತಿಂದರೆ 2000ಕ್ಯಾಲೊರಿಗಳು ಒಮ್ಮೆಲೇ ದೇಹಕ್ಕೆ ಹೋಗಿ ನಾನು ಜಿಂಕೆಯನ್ನು ನುಂಗಿದ ಹೆಬ್ಬಾವಿನಂತಾಗಬಾರದೆನ್ನುವ ಕಾರಣವನ್ನು ಅವರಿಗೆ ಕೊಡುತ್ತೇನೆ.

ಮುಂದೆ ನಾನು ವಿಭದ ಮಾಲೀಕರ ಗೆಳೆತನವನ್ನು ಸಂಪಾದಿಸಿದ ನಂತರ ಅವರೇ ಪಲ್ಯ/ಸಾಗು ದೋಸೆ ಇವೆರಡರಲ್ಲಿ ಯಾವುದನ್ನು ತಿನ್ನುವುದೆಂಬ ನನ್ನ ಸಮಸ್ಯೆಗೆ ಪರಿಹಾರ ಕೊಟ್ಟರು. ನಾನು ಅಲ್ಲಿಗೆ ಹೋದರೆ ನನಗೆ ವಿಶೇಷವಾಗಿ ಪಲ್ಯ ಮತ್ತು ಸಾಗು ಇವೆರಡೂ ಇರುವ ಒಂದೇ ದೋಸೆ ತಿನ್ನಲು ಸಿಗುತ್ತಿದೆ. ಇದನ್ನೇ ಹಲವಾರು ವರ್ಷಗಳಿಂದ ನಾನು ಸವಿಯುತ್ತಾ ಬಂದಿರುವೆ.

1998 ರಲ್ಲಿ ನನ್ನ ಸುಪುತ್ರ ಬಸವನಗುಡಿಯಲ್ಲಿರುವ ಬಿ.ಎಂ.ಎಸ್ ಇಂಜಿನೀಯರಿಂಗ್ ಕಾಲೇಜು ಸೇರಿದ ನಂತರ ನಾನು ನ್ಯಾಷನಲ್ ಕಾಲೇಜಿನಲ್ಲಿ ವಿಭಗೆ ಹೋಗುತ್ತಿದ್ದಂತೆ ಅವನೂ ವಿಭಗೆ ಹೋಗತೊಡಗಿದ. ಒಂದು ದಿನ ನಾನು ಕುಟುಂಬದವರೊಡನೆ ವಿಭಕ್ಕೆ ಹೋದಾಗ ಅಲ್ಲಿಯ ಸ್ಟೀಲ್ ಲೋಟವನ್ನು ತೋರಿಸಿ, "ಅಪ್ಪಾ ಈ ಲೋಟದ ಮೇಲೆ ವಿದ್ಯಾರ್ಥಿ ಭವನದಿಂದ ಕದ್ದಿದ್ದು ಎಂದು ಏಕೆ ಬರೆದಿದ್ದಾರೆ? ಲೋಟದ ಬಾಯಿಯ ಮೇಲೆ ಏಕೆ ತೂತಿದೆ?" ಎಂದು ಕೇಳಿದ. "ಉತ್ತರ ನಿನಗೇ ಗೊತ್ತಿಲ್ಲವೇ?" ಎಂದಾಗ ಅವನು ನಗುತ್ತಾ, "ಇದೊಂದು ವಿಶೇಷ ಲೋಟವಾಗಿರುವ ಕಾರಣ ಇದನ್ನು ಕದ್ದು ಸೊವೇನೀರ್ ಆಗಿ ಇಟ್ಟುಕೊಳ್ಳಲು ಯೋಚಿಸಿದ್ದೆ, ಧೈರ್ಯ ಬರಲಿಲ್ಲ," ಎಂದ. ಇಂತಹ ಲೋಟಗಳು ಇತ್ತೀಚೆಗೆ ಕಾಣುತ್ತಿಲ್ಲ. ಎಲ್ಲವೂ ಸೊವೆನೀರ್‌ಗಳಾಗಿ ಹೊರಟುಹೊದೆವೋ ಅಥವಾ ಮಾಲೀಕರೇ

ಅದನ್ನು ಬದಲಾಯಿಸಿದರೋ ಗೊತ್ತಿಲ್ಲ.

ಅಂದಹಾಗೆ ಕೆಲವರು ವಿಭದಲ್ಲಿ ದೋಸೆಯನ್ನೇ ತಿನ್ನದೇ ಪೂರಿ ಸಾಗು ಇಲ್ಲವೇ ಚೌಚೌ ಭಾತ್ ತಿನ್ನುವುದನ್ನು ನಾನು ನೋಡಿದ್ದೇನೆ. ಕೇವಲ ರವೆವಡೆಯನ್ನೇ (ಮಧ್ಯಾಹ್ನದ ನಂತರ ಮಾತ್ರ) ತಿನ್ನುವವರನ್ನು ಕಂಡಿದ್ದೇನೆ. ವಿಭ ಗೆ ಬಂದು ದೋಸೆ ತಿನ್ನದೇ ಹೋಗುತ್ತಾರಲ್ಲ ಎಂದು ಯಾರಾದರೂ ಅವರನ್ನು ಟೀಕಿಸಿದರೆ, 'ಊಟ ತನ್ನಿಚ್ಛೆ ನೋಟ ಪರರಿಚ್ಛೆ' ಎನ್ನುವ ನಾಣ್ಣುಡಿಯನ್ನು ನಾನು ಅವರಿಗೆ ನೆನಪಿಸುತ್ತೇನೆ. ಮಲ್ಲೇಶ್ವರದ ಕೆಲವರು ನೀವು ಈ ಭಾಗದವರಾಗಿ ಸಿಟಿಆರ್‌ಗೆ ದೋಸೆ ತಿನ್ನಲು ಹೋಗದೇ ಅದೇಕೆ ವಿಭಗೆ ಹೋಗುವುದು ಎಂದು ನನ್ನನ್ನು ಪ್ರಶ್ನಿಸುತ್ತಾರೆ. "ಆರು ದೋಸೆ ಕೊಟ್ಟರೆ ಅತ್ತೆ ಮನೆಗೆ ಮೂರು ದೋಸೆ ಕೊಟ್ಟರೆ ಸೊಸೆ ಮನೆಗೆ" ಎನ್ನುವಂತೆ ನಾನು ಅನುಕೂಲಕ್ಕೆ ತಕ್ಕಂತೆ ಎರಡೂ ಹೋಟೆಲ್ಲುಗಳಿಗೆ ಹೋಗುತ್ತಾ ಬರುತ್ತಿದ್ದೇನೆ ಎಂದು ಉತ್ತರಿಸಿ ಜಾರಿಕೊಳ್ಳುತ್ತೇನೆ.

ಆದರೆ ವಿಭದ ದೋಸೆ ಮನೆಯ ಊಟದಂತೆ ನನಗೆ ಸ್ಪೆಷಲ್. ಏಕೆಂದರೆ ಆ ದೋಸೆ ನನಗೆ ಅರ್ಧ ಶತಮಾನಕ್ಕೂ ಹೆಚ್ಚಿನ ಅವಧಿಯ ನೆನಪುಗಳು ಮರುಕಳಿಸುವಂತೆ ಮಾಡುತ್ತದೆ. ನನ್ನ ಕುಟುಂಬದಿಂದ ವಿಭಗೆ ಹೋಗುವವರಲ್ಲಿ ನಾನು ಎರಡನೆಯ ತಲೆಮಾರಿನವನು. ನನ್ನ ಮಕ್ಕಳು ಹಾಗೂ ಮೊಮ್ಮಕ್ಕಳಿಗೂ ನಾನು ವಿಭದ ದೋಸೆಯ ರುಚಿ ಹತ್ತಿಸಿ ಪರಂಪರೆಯು ಮುಂದುವರೆಯುವಂತೆ ಮಾಡಿದ್ದೇನೆ. ■

---




**ಐದು ಸಾವಿರ ಗುಂಡಿ ದಾಡಿ ಬಂದೆ ಕಣೋ.!**
**ನೀನು ಎಷ್ಟು ಕಣ್ಲಾ.......!!!**

# ಗಪ್ರಗ ಪ್ರೈವೇಟ್ ಲಿಮಿಟೆಡ್

**●ಎಸ್ ಎನ್ ಗಣನಾಥ**

ಅವತ್ತು ಭಾನುವಾರ. ಹಾಗೆಯೇ ಮಾರ್ಕೆಟಿನಲ್ಲಿ ಸುಮ್ಮನೇ ಕಾಲಾಡಿಸಿಕೊಂಡು ಬರಲು ಹೋಗಿದ್ದೆ. ಅಲ್ಲಿಗೆ ಹೋಗಿ ಸ್ಕೂಟರ್ ಪಾರ್ಕ್ ಮಾಡುತ್ತಿದ್ದಾಗ ನನ್ನ ಕಣ್ಣಿಗೆ ಒಂದು ವಿಚಿತ್ರ ಬೋರ್ಡ್ ಕಾಣಿಸಿತು.

**ಗಪ್ರಗ ಪ್ರೈವೇಟ್ ಲಿಮಿಟೆಡ್**

"ಇಲ್ಲಿ ನಿಮ್ಮ ಬಿಸಿನೆಸ್, ಕಾರ್ಯಕ್ರಮಗಳು ಹಾಗೂ ಮತ್ತಿತರ ಅಗತ್ಯಗಳಿಗೆ ಬೇಕಿರುವ ಗತಪ್ರತ್ಯಾಗತಗಳು ಅತಿ ಕಡಿಮೆ ಬೆಲೆಗೆ ದೊರೆಯುತ್ತವೆ. 10% ಡಿಸ್ಕೌಂಟ್ ಕೂಡ ದೊರೆಯುತ್ತದೆ. ಸಂಪರ್ಕಿಸಿ"

ಇದೇನಿದು? ಇಲ್ಲೇನು ಮಾರುತ್ತಿದ್ದಾರೆ? ಅದೇನು ವಸ್ತುವೋ? ಪ್ರಾಣಿಯೋ? ಎನ್ನುವುದೇ ತಿಳಿಯುತ್ತಿಲ್ಲ ಎಂದು ಗೊಂದಲಗೊಂಡು ಆ ಅಂಗಡಿಯ ಒಳಗೆ ಹೋದೆ. ಇನ್ನೂ ಆಶ್ಚರ್ಯವಾಯಿತು! ಆ ಚಿಕ್ಕ 10'x8' ಅಂಗಡಿಯಲ್ಲಿ ಇದ್ದದ್ದು ಒಂದು ಟೇಬಲ್ ಮತ್ತು ಎರಡು ಕುರ್ಚಿಗಳು ಮಾತ್ರ. ಗೋಡೆಯಲ್ಲೊಂದು ಬೋರ್ಡು ಇತ್ತು. ಅದರಲ್ಲಿ ಒಂದಷ್ಟು ಪೋಸ್ಟರ್ ಗಳನ್ನು ಅಂಟಿಸಿದ್ದರು.

ಒಂದು ಪೋಸ್ಟರ್ ನನ್ನ ಗಮನ ಸೆಳೆಯಿತು. ಅದೊಂದು  ಚಿನ್ನ, ವಜ್ರದ ಆಭರಣಗಳ ಸುಸಜ್ಜಿತ ಅಂಗಡಿಯ ಫೋಟೋ. ಆ ಅಂಗಡಿಯ ಹೆಸರು "ನಗಗಳ ಗಗನ" ಎಂದಿತ್ತು. ಆ ಪೋಸ್ಟರ್‌ನ ಒಂದು ಮೂಲೆಯಲ್ಲಿ SOLD ಎಂಬ ಪುಟ್ಟ ಸ್ಟಿಕ್ಕರ್ ಅಂಟಿಸಿದ್ದರು.  ಹಾಗಾದರೆ ಇದು ಚಿನ್ನದ ಆಭರಣಗಳಿಗೆ ಸಂಬಂಧಿಸಿದ ಬಿಜಿನೆಸ್ ಇರಬೇಕು ಎಂದುಕೊಂಡೆ. ಹಾಗೆಯೇ ಅಲ್ಲಿಂದ ಹೊರಟುಬಿಡಬೇಕೆಂದಿದ್ದೆ. ಆದರೆ ಈ ಗಪ್ರಗ ಎಂದರೇನು ಎಂದು ತಿಳಿಯುವ ಕುತೂಹಲ ತಡೆಯಲಾಗಲಿಲ್ಲ.

" ಅದು ಆಗಲೇ ಮಾರಾಟ ಆಗಿದೆ ಸರ್" ಎಂಬ ಧ್ವನಿ ಹಿಂದಿನಿಂದ ಕೇಳಿಸಿತು.

ಹಿಂದಿರುಗಿ ನೋಡಿದೆ. ಪರಿಚಿತ ಮುಖ. "ಹಲೋ ನೀವು ಶ್ರೀನಿವಾಸ ಅಲ್ವೇನ್ರಿ? ಹೇಗಿದ್ದೀರಾ? ಇದು ನಿಮ್ಮ ಅಂಗಡೀನಾ?" ಎಂದು ಮುಖದಲ್ಲಿ ನಗೆಯನ್ನು ತುಂಬಿಕೊಂಡು ಮಾತನಾಡಿಸಿದೆ. ಶ್ರೀನಿವಾಸ್ ನನ್ನ ಗೆಳೆಯನ ತಮ್ಮ.

"ಹೌದು ಸರ್. ನೀವು ಚೆನ್ನಾಗಿದ್ದೀರಾ? ಫಸ್ಟ್ ಟೈಮ್ ನಮ್ಮ ಅಂಗಡಿಗೆ ಬಂದಿದ್ದೀರ. ಕಾಫಿ, ಟೀ ಏನಾದರೂ ತರಿಸಲಾ?" ಎಂದ ಆತ.

"ಅಯ್ಯೋ , ಏನೂ ಬೇಡಪ್ಪ; ಇದೇನು ನಿಮ್ಮ ಅಂಗಡಿಯಲ್ಲಿ ಏನು ಮಾರ್ತೀರಾ ಅಂತ ಅರ್ಥವೇ ಆಗ್ಲಿಲ್ಲ. ಅದಕ್ಕೇ ಒಳಗೆ ಬಂದೆ."

"ಹೇಳ್ತೀನಿ ಸರ್, ಕೂತ್ಕೊಳ್ಳಿ. ನಮ್ಮದು ಒಂದು ಕನ್ಸಲ್ಟೆನ್ಸಿ ಇದೆ. ಅವರವರ ಅಗತ್ಯಗಳನ್ನು ನೋಡಿಕೊಂಡು ಗಪ್ರಗಗಳನ್ನು ನಾವೇ ರೆಡಿ ಮಾಡಿ ಮಾರುತ್ತೇವೆ. ನಿಮಗೆ ಯಾವ ತರದ ಗಪ್ರಗ ಬೇಕು? ಎಂದ!

ಮೊದಲೇ ತಲೆ ಕೆಟ್ಟು ಮೊಸರಾಗಿತ್ತು. ಅವನು ಹೇಳಿದ್ದು ನಿಜಕ್ಕೂ ಏನೂ ತಲೆಯೊಳಗೆ ಹೋಗಲಿಲ್ಲ. "ಅಲ್ಲ ಶ್ರೀನಿವಾಸ್, ಈ ಗಪ್ರಗ ಅಂದರೇನು? ಅದೊಂದು ವಸ್ತುವೋ, ಪ್ರಾಣಿಯೋ? ನಾನು ಯಾವತ್ತೂ  ಗಪ್ರಗವನ್ನೇ ನೋಡಿಲ್ಲ" ಅಂದೆ.

“ಅಯ್ಯೋ ಸಾರಿ, ನಿಮಗೆ ಗೊತ್ತು ಅಂದುಕೊಂಡು ಮಾತನಾಡಿಬಿಟ್ಟೆ. ಗಪ್ರಗ ಅಂದರೆ ಇಂಗ್ಲಿಷ್ ನಲ್ಲಿ palindrome ಎನ್ನುತ್ತಾರಲ್ಲ ಅದು“ ಎಂದ.

“ಓ, ಸರಿ, ಸರಿ. ಎಡದಿಂದ ಬಲಕ್ಕೆ, ಬಲದಿಂದ ಎಡಕ್ಕೆ ಓದಿದರೂ ಅರ್ಥ ಕೊಡುವ ಪದ ಆಗಿರುತ್ತೆ. ಅದೇ ತಾನೇ? ವಿಕಟಕವಿ ಥರ”

“ಹೌದು ಸರ್, ಕಿಟಕಿ, ನವಜೀವನ ಇಂಥವು“

“ನಾವು ಚಿಕ್ಕವರಿದ್ದಾಗ 'ಮದ್ರಾಸಿನ ಸಿದ್ರಾಮ', 'ಗಿರಿಬಸಕನ ಕಸಬರಿಗಿ' ಇವೆಲ್ಲ ಕಲಿತು ಎಂಜಾಯ್ ಮಾಡುತ್ತಿದ್ವಿ. ಆದರೆ ಈ ಗಪ್ರಗ ಅಂದರೇನು?”

“ಅಂಥಾದ್ದೇನಿಲ್ಲ ಸರ್, ಮುಂದೆ ಹೋಗಿ ತಿರುಗಿ ಬರುವುದರಿಂದ ಸಂಸ್ಕೃತದಲ್ಲಿ ಇದಕ್ಕೆ ಗತಪ್ರತ್ಯಾಗತ ಎನ್ನುತ್ತಾರೆ. ಅದನ್ನೇ ನಾವು ಶಾರ್ಟ್ ಆಗಿ ಗಪ್ರಗ ಅಂತೀವಿ”.

“ಓಹೋ, 'ಗಪ್ರಗ' ವೇ ಒಂದು ಗಪ್ರಗ ಅಲ್ಲವಾ? “

“ನೀವು ಜಾಣರು ಸಾರ್, ನಿಮಗೆ ಹೇಳಿಕೊಡಬೇಕಾ?“

“ಆದರೆ ಅದರಿಂದ ಬಿಜಿನೆಸ್ ಮಾಡಕ್ಕಾಗುತ್ತಾ? “

“ನಾನು ಎರಡು ವರ್ಷದ ಹಿಂದೆ ಇದನ್ನು ಶುರು ಮಾಡಿದಾಗ ಎಲ್ಲರೂ ನನ್ನನ್ನು ಆಡಿಕೊಂಡರು.ನಿನಗೆ ತಲೆ ಸರಿ ಇಲ್ಲ ; ಟೈಮ್ ವೇಸ್ಟ್ ಮಾಡ್ತಾ ಇದ್ದೀಯಾ. ನಿನ್ನ ಐಡಿಯಾ ತೋಪು ಆಗುತ್ತೆ ಅಂತೆಲ್ಲಾ ಹರಸಿದ್ರು! ಆದರೆ ಈಗ ಅವರೇ ನನ್ನನ್ನು ಮೆಚ್ಚಿಕೊಂಡಿದ್ದಾರೆ.“

“ಇದರಲ್ಲಿ ಹಣ ಹೇಗೆ ಸಿಗುತ್ತೆ ಅಂತ ಹೇಳ್ತೀನಿ ಕೇಳಿ. ನೀವು ಒಂದು ಪೋಸ್ಟರ್ ಗೋಡೆಯ ಮೇಲೆ ನೋಡಿದಿರಿ ಅಲ್ವಾ? ಅದು ಆಭರಣದ ಅಂಗಡಿ . ನಿಮಗೇ ಗೊತ್ತಿರುವಂತೆ ಇತ್ತೀಚೆಗೆ ನೂರಾರು ಆಭರಣದ ಅಂಗಡಿಗಳು ನಾಯಿಕೊಡೆಗಳಂತೆ ಹುಟ್ಟಿಕೊಂಡುಬಿಟ್ಟಿವೆ. ನಿಮ್ಮ ಅಂಗಡಿಯಲ್ಲಿ ಏನಾದರೂ ವಿಶೇಷ ಇರಲೇಬೇಕು. ಇಲ್ಲದಿದ್ದರೆ ಯಾರೂ ಬರೋದಿಲ್ಲ. ಇವರು ನನ್ನ ಹತ್ತಿರ ಕನ್ಸಲ್ಟನ್ಸಿಗೆ ಬಂದಾಗ ನಾನು ಅವರಿಗೆ ಅಂಗಡಿ ಹೆಸರು ಬದಲಾಯಿಸಿ, ಗಪ್ರಗ ಹೆಸರಿಡಿ. ವ್ಯಾಪಾರ ಚೆನ್ನಾಗಿ ಆಗುತ್ತೆ ಅಂತ ಸಲಹೆ ನೀಡಿ. “ ನಗಗಳ ಗಗನ” ಅಂತ ಹೆಸರು ಸೂಚಿಸಿದ್ದೆ. “

“ಹೂಂ, ಈಗ ಹೊಳೀತು. 'ನಗಗಳ ಗಗನ' ಒಂದು ಗಪ್ರಗ ಅಲ್ವಾ?

“ಹೌದು. ಈಗ ಆ ರೋಡಿನಲ್ಲಿ ಬೇರೆ ಎಲ್ಲಾ ಅಂಗಡಿ ಗಳಿಗಿಂತ ಇವರ ಅಂಗಡಿಗೆ ತುಂಬಾ ಜನ ಬರುತ್ತಾರೆ. ಅವರಿಗೆ ಅದೇನೋ ವಿಚಿತ್ರ ಆಕರ್ಷಣೆ. ಒಳ್ಳೆ ಬಿಸಿನೆಸ್ ಆಗ್ತಾ ಇದೆ. ಹಾಗಾಗಿ ನನ್ನ ಫೀಸನ್ನು ಖುಷಿಯಾಗಿ ಕೊಟ್ಟುಬಿಟ್ಟರು.”

“ಓ, ಹೌದಾ? ತುಂಬಾ ಹೊಸ ಐಡಿಯಾ”

“ ಮತ್ತೆ ಏನಾದರೂ ಮಾಡಬೇಕಲ್ಲ. ಕಾಲೇಜಿಗೆ ಹೋಗುವ ಹೆಣ್ಣುಮಕ್ಕಳ ಬಟ್ಟೆ ಮತ್ತು ಫ್ಯಾಷನ್ ಐಟಂಗಳು ಮಾರುವ ಇನ್ನೊಂದು ಅಂಗಡಿಗೆ ನಾನು ಕೊಟ್ಟ ಹೆಸರು 'ಕಿಶೋರಿ ಶೋಕಿ'. ಈಗ ಅವರ ಅಂಗಡಿಯಲ್ಲಿ ಫುಲ್ ರಷ್ ”.

“ಓಹ್! ಸಕತ್ತಾಗಿದೆ. ಬೇರೆ ಯಾರಿಗೆ ಗಪ್ರಗ ಮಾಡಿಕೊಟ್ಟಿದ್ದೀರಿ?”

“ನೀವು ಶಶಿ ಕರಿಗೆರೆ ಅವರ ಹೆಸರು ಕೇಳಿದ್ದೀರಾ? “

“ಯಾರು ಪ್ರಖ್ಯಾತ ಪತ್ರಕರ್ತರು ಅಲ್ಲವೇ?“

“ಅವರು ಒಮ್ಮೆ ಶ್ರೀಲಂಕಾ ವಿದ್ಯಮಾನಗಳ ಬಗ್ಗೆ ವಾರಕ್ಕೊಂದು ಅಂಕಣ ಲೇಖನ ಬರೆಯುತ್ತಿದ್ದರು. ಅದರ ಹೆಸರು “ಶ್ರೀಲಂಕಾ ನಾಡಿನಲ್ಲಿನ ಅನುಭವಗಳು”. ಆದರೆ ಅದೇಕೋ ಹೆಚ್ಚು ಜನಮನ್ನಣೆ ಗಳಿಸಲಿಲ್ಲ. ನನ್ನ ಬಳಿಗೆ ಬಂದರು. ಅವರಿಗೆ ಹೊಸ ಶೀರ್ಷಿಕೆ ಮಾಡಿಕೊಟ್ಟೆ. "ಲಂಕಾ ಕಾಲಂ" ಅಂತ. ಅದು ಒಮ್ಮೆಲೆ ಜನಪ್ರಿಯವಾಗಿ ಬಿಟ್ಟಿತ್ತು. “

“ನಿಮ್ಮ ಕತೆ ತುಂಬಾ ರೋಚಕವಾಗಿದೆ, ಶ್ರೀನಿವಾಸ್ . ತುಂಬಾ ಲಕ್ಕಿ ನೀವು.”

"ಏನೋ ನಿಮ್ಮಂಥವರ ಆಶೀರ್ವಾದ ಸರ್. ಅಂದಹಾಗೆ ನಾನು ಈಗ ನನ್ನ ಹೆಸರನ್ನು ನಸೀಬು ಸೀನ ಅಂತ ಬದಲಾಯಿಸಿಕೊಂಡಿದ್ದೇನೆ "

“ಓಹ್ ತಮಾಷೆಯಾಗಿದೆ, ನಿಮ್ಮ ಹೊಸ ಹೆಸರು. ನಿಮ್ಮ ಬಿಜಿನೆಸ್‌ಗೂ ಬೇಷಕ್ಕಾಗಿ ಹೊಂದಿಕೊಳ್ಳುತ್ತೆ.“

“ಬೇರೆ?“

“ಬಿಜಾಪುರ ನಗರ ಪಾಲಿಕೆಯವರು OWN YOUR HOME ಸ್ಕೀಮ್ ಮಾಡಿದ್ದರು. ಸುಮಾರಾಗಿ ಹೋಗುತ್ತಿತ್ತು. ಅದಕ್ಕೆ ಕನ್ನಡ ಹೆಸರು ಕೊಟ್ಟಿದ್ದೆ. "ನಿಮಗೂ ಮನಿ " ಯೋಜನೆ ಅಂತ. ಅದೇಕೋ ಏನೋ ಕೂಡಲೇ ಜನಪ್ರಿಯವಾಗಿಬಿಟ್ಟಿತು.“

“ಬಹಳ ಇಂಟರೆಸ್ಟಿಂಗ್ ಆಗಿದೆ”. ಅನ್ನುವ ವೇಳೆಗೆ ಶ್ರೀನಿವಾಸ್‌ಗೆ ಒಂದು ಫೋನ್ ಬಂತು. ನನ್ನ ಕಡೆ ನೋಡಿ “ಇದೊಂದು ಕಾಲ್ ತೊಗೋತೀನಿ. ಸಿನಿಮಾ ನಿರ್ದೇಶಕರೊಬ್ಬರು ಫೋನ್ ಮಾಡಿದ್ದಾರೆ“. ಎಂದು ಹೇಳಿ ದೂರವಾಣಿಯ ಸ್ಪೀಕರ್ ಆನ್ ಮಾಡಿದ.

“ಹೇಳಿ ಸರ್”

“ಒಂದು ವಾರದಲ್ಲಿ ನಮ್ಮ ಸಿನಿಮಾ ಟೈಟಲ್ಲು ಕೊಡ್ತೀನಿ ಅಂತ ಹೇಳಿ ಎಷ್ಟು ದಿನ ಆಯ್ತು. ನೀವು ಕಳಿಸಲೇ ಇಲ್ಲ”

“ಸರ್, ತುಂಬಾ ಕಷ್ಟ. ಸ್ವಲ್ಪ ಟೈಮ್ ಬೇಕು”

“ಇಲ್ಲ ಶ್ರೀನಿವಾಸ್. ತಾತ್ಕಾಲಿಕವಾಗಿ ಒಂದು ಡಮ್ಮಿ ಹೆಸರು ರಿಜಿಸ್ಟರ್ ಮಾಡಿಸಿರ್ತೀನಿ. ಬೇಗನೇ ಕಳಿಸಿ. ತಡ ಮಾಡಬೇಡಿ.”

“ಸಿನಿಮಾ ಹೆಸರನ್ನು ಗಪ್ರಗ ಮಾಡಬೇಕು ಅಂತ ಅಂದುಕೊಂಡಿದ್ದಾರಾ?ಹಾಗೆ ಮಾಡಿದ್ರೆ ಡಿಫರೆಂಟ್ ಆಗಿರುತ್ತೆ ಅಂತ ಅವರ ಐಡಿಯಾನಾ?”

“ಹೌದು. ಹೀರೋಯಿನ್ ಸುತ್ತ ಕೊಡಗಿನಲ್ಲಿ ನಡೆಯುವ ಕಥೆಯಂತೆ. ನನಗೂ ಏನೂ ಹೊಳೀತಾನೇ ಇಲ್ಲ. “

“ನಾನೊಂದು ಹೇಳಲಾ? ಮಳೆ ಮಹಿಳೆ ಹಿಮ ಆಗುತ್ತಾ?”

“ಊಹೂಂ....... ಅದು ಗಪ್ರಗ ಅಲ್ಲ. ಆದರೆ ನೀವು ಹೇಳಿದ್ದು ಚೆನ್ನಾಗಿದೆ.

"ಮಹಿಳೆ ಮಳೆ ಹಿಮ " ಮಾಡೋಣ. ಥ್ಯಾಂಕ್ಸ್ ಸರ್. ಮುಂದಿನವಾರ ಅವರಿಗೆ ಕಳಿಸ್ತೀನಿ"

"ಮುಂದಿನವರ ವಾರ ಯಾಕ್ರಿ? ಇವತ್ತೇ ಕಳಿಸೋದಲ್ವಾ?"

"ಬೇಡ ಸಾರ್. ಜಾಸ್ತಿ ಟೈಮ್ ತಗೊಂಡ್ರೆ ನಾನು ಜಾಸ್ತಿ ಚಾರ್ಜ್ ಮಾಡಬಹುದು" ಅಂತ ಕಣ್ಣು ಮಿಟುಕಿಸಿದ ನಸೀಬು ಸೀನ !

"ವ್ಯಾಪಾರದ ಟ್ರಿಕ್ಕುಗಳನ್ನು ಚೆನ್ನಾಗಿ ತಿಳಿದುಕೊಂಡಿದ್ದೀರಿ"

"ಸರ್, ನಿಮ್ಮ ಚಿಕ್ಕಪ್ಪ ವೆಂಕಟರಾವ್ ಅವರದು ಒಂದು ಹೋಟೆಲ್ ಇದೆಯಲ್ವಾ? ಹಾಗಾದರೆ ಹೋಟೆಲ್ಗೆ ಸಂಬಂಧಪಟ್ಟ ಒಂದು ಗಪ್ರಗ ತೋರಿಸ್ತೀನಿ" ಅಂತ ಎದ್ದುನಿಂತು ಪೋಸ್ಟರ್ ಬಳಿ ಕರೆದುಕೊಂಡು ಹೋದ.ಅಲ್ಲಿ ಒಂದು ಹೋಟೆಲ್ ಮುಂಭಾಗದ ದೊಡ್ಡ ಚಿತ್ರ ಅಲ್ಲಿತ್ತು. ಎರಡೇ ಪದಗಳು "ರವಾದ್ದೇ ವಾರ ".

"ತಿಂಗಳ ಕೊನೆಯ ವಾರದಲ್ಲಿ ಏಳು ದಿನಗಳೂ ಬರೀ ರವೆಯದೇ ತಿಂಡಿ ಮಾಡುತ್ತಾರೆ. ರವೆದೋಸೆ, ರವೆ ಇಡ್ಲಿ, ರವೆ ಪಾಯಸ, ರವೆ ವಾಂಗೀಬಾತು, ಇದು ಪ್ರಾರಂಭವಾದ ಮೇಲೆ ಅವರ ಬಿಸಿನೆಸ್ ತುಂಬಾ ಇಂಪ್ರೂವ್ ಆಯಿತು."

"ನಮ್ಮ ಫ್ರೆಂಡ್ ಒಬ್ಬರು ಕಾದಂಬರಿ ಬರೀತಾರೆ. ಅವರಿಗೆ ಒಂದು ಟೈಟಲ್ ಮಾಡಿಕೊಟ್ಟೆ ಆದರೆ ಅದು ಅಷ್ಟೇನೂ ಚೆನ್ನಾಗಿ ಓಡಲಿಲ್ಲ."

"ಹೆಸರು?"

"ಸುಮಿ ಕ್ಷಮಿಸು ಅಂತ. ನೀವು ನೋಡಿದೀರಾ?"

"ಇಲ್ಲ. ಬಹಳ ಇಂಟರೆಸ್ಟಿಂಗ್ ಅನ್ನಿಸ್ತಿದೆ. ಬೇರೆ ಯಾವ ಯಾವ ಗಪ್ರಗಗಳನ್ನು ಮಾಡಿದ್ದೀರಾ?"

"ಬೆಂಗಳೂರು ಮಂಗಳೂರು ಹೈ ವೇ ನಲ್ಲಿ ಒಂದು ಹೋಟೆಲ್ ಪ್ರಾರಂಭಿಸಿದ್ದರೂ ಅದು ಚೆನ್ನಾಗಿ ನಡೀತಾನೇ ಇರ್ಲಿಲ್ಲ. ನಮ್ಮ ಬಳಿ ಬಂದಿದ್ದರು. ನಾವು ಹೇಳಿದ ಹೆಸರು ಇಟ್ಟುಕೊಂಡ ತಿಂಗಳಲ್ಲೇ ಚೆನ್ನಾಗಿ ಪಿಕ್ ಅಪ್ ಆಯಿತು."

"ಏನು ಹೆಸರು? "

"ಬಡಾ ಬಾಬಾ ಡಾಬ"

ಇಂಥವೆಲ್ಲಾ ನಿಮಗೆ ಇವೆಲ್ಲಾ ಹೇಗೆ ಹೊಳೆಯುತ್ತೆ? ಹೇಗೆ ಕಲಿತಿರಿ? ಎಂದು ಕೇಳಬೇಕು ಅನ್ನುವಷ್ಟರಲ್ಲಿಯೇ ಒಮ್ಮೆಲೇ ಅಂಗಡಿಗೆ ಮೂರು ಹುಡುಗಿಯರು ಬಂದರು. ಬಂದರು ಅನ್ನುವುದಕ್ಕಿಂತ ನುಗ್ಗಿದರು ಎಂದರೆ ಸರಿಯಾಗಬಹುದೇನೋ? "ಶ್ರೀನಿವಾಸ್ ಸರ್, ನಮ್ಮ ಅಂಗಡಿಯ ಹೆಸರಿನ ಬಗ್ಗೆ ಏನು ಯೋಚನೆ ಮಾಡಿದ್ರಿ? ತುಂಬ ಅರ್ಜೆಂಟಾಗಿ ಬೇಕು. ಮುಂದಿನ ವಾರವೇ ಉದ್ಘಾಟನೆ ಇದೆ. ಬೋರ್ಡು ಬರೆಸಬೇಕು" ಎಂದು ಒಂದೇ ಉಸಿರಿಗೆ ಮಾತನಾಡುತ್ತಿದ್ದರು.

ಶ್ರೀನಿವಾಸ್ ನನ್ನ ಕಡೆ ತಿರುಗಿ "ಸರ್, ಇವರ ಅಂಗಡಿಗೆ ಒಂದು ಹೆಸರು ಬೇಕಂತ ಕೇಳಿದ್ದರು." ಎಂದು ಹೇಳಿ ""ಮೇಡಂ, ರೆಡಿ ಇದೆ. ತಗೊಳ್ಳಿ. ಬಿಲ್ ಕೂಡ ಅಲ್ಲೇ ಇದೆ" ಅಂತ ಒಂದು ಕವರ್ ಕೊಟ್ಟ. ಕನ್ನಡದಲ್ಲಿ ಇದ್ದುದರಿಂದ

ಅವರಿಗೆ ಅದನ್ನು ಓದಲು ಬರಲಿಲ್ಲ. ಇವನನ್ನೇ ಕೇಳಿದರು.

"ನಿಶಾ, ಇಳಾ ಇಶಾನಿ" ಅಂತ ಹೆಸರಿಡಿ ಅಂದ. ಪರಸ್ಪರ ಚರ್ಚಿಸಿಕೊಂಡು 'ಓಹ್! ಚೆನ್ನಾಗಿದೆ. ನಿಮ್ಮ ಫೀಸು  ಗೂಗಲ್ ಪೇ ಮಾಡಬಹುದಾ? " ಎಂದು ಕೇಳಿ ಉತ್ತರಕ್ಕೂ ಕಾಯದೆ ಹೊರಟೇಹೋದರು. ಏನಾಗುತ್ತಿದೆಯೆಂದು ಅಂದಾಜು ಮಾಡಿದೆ. ಆದರೂ ಕೇಳಿದೆ. " ಅದಾ ? ಇವರು ಮೂರು ಹುಡುಗಿಯರು – ಕೇತಕಿ ನಿಶಾನಿ, ನಿಶಾ ಕಪೂರ್ ಮತ್ತು ಇಳಾ ಭಟ್ – ಒಟ್ಟಾಗಿ ಒಂದು ರೆಡಿ ಮೇಡ್ ಗಾರ್ಮೆಂಟ್ಸ್ ಅಂಗಡಿ ಪ್ರಾರಂಭಿಸುತ್ತಿದ್ದಾರೆ.  ಅವರಿಗೆ ಒಂದು ಗಪ್ರಗ ಹೆಸರು ಬೇಕಿತ್ತು. ಅದಕ್ಕೆ ...." ಅಂತ ಹೇಳಿ "ಹೊಸಬರಾದ್ದರಿಂದ ಸ್ವಲ್ಪ ಕಡಿಮೆ ಚಾರ್ಜ್ ಮಾಡಿದೆ." ಎಂದ.

“ಅದನ್ನೇ ಕೇಳಬೇಕು ಅಂತಿದ್ದೆ.  ಇದರಲ್ಲಿ ಆದಾಯ ಹೇಗೆ? ಹೇಳಬಹುದು ಅನಿಸಿದ್ರೆ ಮಾತ್ರ ಹೇಳಿ" ಅಂದೆ.

"ಒಟ್ಟಾರೆ ಪರವಾಗಿಲ್ಲ. ಆದರೆ ಹೀಗೇ ಅಂತ ಹೇಳೋಕ್ಕಾಗಲ್ಲ. ಅಲ್ಲದೆ ಕೆಲವರಿಗೆ ನಾವೇ ಉಚಿತವಾಗಿ ಮಾಡಿದ್ದೂ ಇದೆ. ಖಾದಿ ಗ್ರಾಮೋದ್ಯೋಗ ಸಂಸ್ಥೆಯವರು ಒಂದು ಚಿಕ್ಕ ಚರಕವನ್ನು ಮಾಡಿ ಮಾರುತ್ತಿದ್ರು. ಅದು ಅಷ್ಟೇನೂ ಜನಪ್ರಿಯ ಆಗಿರಲಿಲ್ಲ. ನಾವು ಅದಕ್ಕೆ ಕರಚರಕ ಅಂತ ಹೆಸರು ಕೊಟ್ಟ ಮೇಲೆ ಅದರ ಮಾರಾಟ ಚೆನ್ನಾಗಿ ಆಯಿತಂತೆ. ಆದರೆ ನಾವೇನೂ ಹಣ ತಗೊಳ್ಳಲಿಲ್ಲ. ಶಾಲೆಗಳಿಂದ, ಚಿಕ್ಕ ಚಿಕ್ಕ ಬಿಸಿನೆಸ್‌ಗಳಿಂದ ಏನೂ ತೊಗೊಳ್ಳಲ್ಲ.

“ಅಲ್ಲಪ್ಪ, ಇಷ್ಟರ ಮಧ್ಯೆ ನಿಮ್ಮ ಫ್ಯಾಮಿಲಿ ಬಗ್ಗೆನೇ ಕೇಳಲಿಲ್ಲ.  ಮದುವೆ ಊಟ ಯಾವಾಗ ಹಾಕಿಸ್ತೀರಾ?“ ಎಂದೆ.

ಆತ ನನ್ನನ್ನು ಪೋಸ್ಟರುಗಳ ಬಳಿಗೆ ಕರೆದುಕೊಂಡು ಹೋದ. ಅಲ್ಲೊಂದು ಸುಂದರ ಹೆಣ್ಣುಮಗಳ ಫೋಟೋ ಇತ್ತು. ಅದರ ಕೆಳಗೆ "ಶಿರ್ವ ಊರ್ವಶಿ" ಅಂತ ಶೀರ್ಷಿಕೆಯೂ ಇತ್ತು. ಸ್ವಲ್ಪ ನಾಚಿಕೊಂಡಿದ್ದ ಶೀನನ ತುಟಿಯಂಚಿನಲ್ಲಿ ಕಿರುನಗೆ ಇದ್ದಂತೆ ಭಾಸವಾಯಿತು. “ಓಹೋ! ಇದು ನೀವು ಮದುವೆಯಾಗೋ ಹುಡುಗಿಯ ಫೋಟೋನಾ?” ಅಂತ ಕೇಳಿದೆ.

“ಹೌದು ಸರ್, ಅವಳ ಊರು ಉಡುಪಿ ಹತ್ತಿರದ ಶಿರ್ವ. ಆ ಊರಿನ ಸೌಂದರ್ಯ ಸ್ಪರ್ಧೆಗೆ ಒಂದು ಗಪ್ರಗ ಹೆಸರು ಮಾಡಿಕೊಡುತ್ತೀರಾ ? ಅಂತ ಆಯೋಜಕರು ನನ್ನನ್ನು ಕೇಳಿದ್ದರು. ನಾನು 'ಶಿರ್ವ ಊರ್ವಶಿ' ಅಂತ ಹೆಸರು ಕೊಟ್ಟಿದ್ದೆ. ಆ ಸಮಯದಲ್ಲಿಯೇ ಈಕೆ ಪರಿಚಯ ಆಯಿತು. ಇವಳೇ ಸ್ಪರ್ಧೆಯ ವಿನ್ನರ್. ಹೆಸರು ನಯನ. ನಮ್ಮ ಮದುವೆ ಮುಂದಿನ ತಿಂಗಳು. ನೀವೂ ಬರಬೇಕು” ಎಂದ.

“ಖಂಡಿತ ಬರ್ತೀನಿ. ಹಾಗಾದರೆ ನೀವೇ ನಯನಳ ಬಾಳನಯನ” ಅಂತ ನಾನೂ ಒಂದು ಗಪ್ರಗ ಹೊಸೆಯುತ್ತಿದ್ದಂತೆ ಇನ್ನೊಂದು ಫೋನ್ ಕಾಲ್ ಬಂತು.

" ನಮಸ್ಕಾರ ಸರ್. ನಿಮ್ಮ ಲಾಯರ್ಸ್  ಕಲೆಕ್ಟಿವ್ ಗೆ ಹೆಸರು "ಮಹೇಶ್ ಯಶ್ ಹೇಮ" ಅಂತ ಇಡಿ . ನೋಡಿ ಕೆಲವೇ ತಿಂಗಳುಗಳಲ್ಲಿ ನಿಮ್ಮ ಪ್ರಾಕ್ಟೀಸು ತುಂಬಾ  ಚೆನ್ನಾಗಿ ನಡೆಯುತ್ತದೆ. ಗ್ಯಾರಂಟಿ ಕೊಡ್ತೀನಿ . ಬಿಲ್ ಆಮೇಲೆ ಕಳಿಸ್ತೀನಿ”

ಎ0ದು ಹೇಳಿ ಕಾಲ್ ಕಟ್ ಮಾಡಿದ.

ನನಗೆ ಏಕಾಏಕಿ ಏನೋ ನೆನಪಾಗಿ "ನನ್ನ ತಂಗಿ ಒಂದು ಡ್ಯಾನ್ಸ್ ತರಗತಿ ಪ್ರಾರಂಭ ಮಾಡುತ್ತಾಳಂತೆ. ಯಾವುದಾದರೂ ಗಪ್ರಗ ಸೂಚಿಸುತ್ತೀರಾ? " ಎಂದೆ.

"ಯಾವ ಥರದ್ದು?"

"ಕಥಕ್"

"ಹಾಗಾದ್ರೆ ಆಗುತ್ತೆ. ಕಥಕ್ ಥಕ್ ಥಕ" ಅಂದ!

ಈ ತರಹದ ಕನ್ಸಲ್ಟೆನ್ಸಿ ನಾನಂತೂ ನೋಡಿರಲಿಲ್ಲ, ಕೇಳಿರಲೂ ಇಲ್ಲ. ನನಗಂತೂ ತುಂಬಾ ಇಷ್ಟ ಆಯಿತು. ಇನ್ಯಾವ ಕಂಪನಿಗಳಿಗೆ ಹೆಸರು ಸೂಚಿಸಿದ್ದೀರಿ?" ಎಂದೆ.

"ಇದು ನನಗೆ ತುಂಬಾ ಇಷ್ಟವಾದ ಕೆಲಸ ಸರ್ . ನಮಗೆ ಖುಷಿ ಕೊಡುವ ಉದ್ಯೋಗ ಮಾಡಿ ಅದರಲ್ಲಿ ಹಣವೂ ಬಂದರೆ ತಪ್ಪೇನು ಅಲ್ವಾ? ಹಾಗಂತ ಯಾವಾಗಲೂ ಕಂಪನಿಗಳಿಗೆ ಮಾತ್ರ ಮಾಡುವುದಲ್ಲ. ನಿಮಗೆ ಸಿನಿಮಾ ನಟಿ ರಂಜನಿ ಗೊತ್ತಾ ?" ಎಂದ.

"ಹೌದು. ಗೊತ್ತಿಲ್ಲದೆ ಏನು? ಕನ್ನಡ ಚಿತ್ರಗಳಲ್ಲಿ ತುಂಬಾ ದೊಡ್ಡ ಹೆಸರು." ಅಂದೆ.

"ಆಕೆ ತನ್ನ ಬ್ರಾಂಡ್ ಬೆಳೆಸುವ ಪ್ರಯತ್ನದಲ್ಲಿದ್ದಾಗ ನನ್ನ ಬಳಿ ಬಂದಿದ್ದರು. ಅವರಿಗೊಂದು ಗಪ್ರಗ ಮಾಡಿಕೊಟ್ಟೆ 'ನಿಜ ರಂಭೆ ರಂಜನಿ'. ಅದಾದ ನಂತರ ಆಕೆಯ ಇಮೇಜೇ ಬೇರೆ ಆಗಿಬಿಟ್ಟಿದ್ದು ನಿಜಕ್ಕೂ ನಿಜ. ಅದನ್ನು ನೋಡಿ ಇನ್ನೊಬ್ಬ ಹೀರೋಯಿನ್ ರಜನಿ ಕೇಳಿದ್ದರು. ಅವರಿಗೆ 'ನಿಜ ರತಿ ರಜನಿ' ಅಂತ ಕೊಟ್ಟಿದ್ದೆ. ಅದು ಅಷ್ಟಾಗಿ ಉಪಯೋಗ ಆಗಲಿಲ್ಲ ಅಂತ ಕಾಣುತ್ತೆ.. ಅದೇನೋ ನವಿಲು ಕೆಂಬೂತದ ಕತೆ ಹೇಳ್ತಾರಲ್ಲಾ ಹಾಗೆ"" ಎಂದ ಶ್ರೀನಿವಾಸ್ ಅಲಿಯಾಸ್ ನಸೀಬು ಸೀನ.

"ನಿಮ್ಮ ಪರಿಚಯದವರು ಯಾರಿಗಾದರೂ ಗಪ್ರಗ ಬೇಕಿದ್ದರೆ ಹೇಳಿ ಸರ್. ನಮ್ಮ ಬಿಸಿನೆಸ್ ಗೂ ಸಹಾಯ ಆಗುತ್ತೆ" ಅಂತ ಹೇಳಿ ನನ್ನನ್ನು ಇಂಪ್ರೆಸ್ ಮಾಡಲು ಅವನ ಕಂಪನಿಯ ಲೆಟರ್ ಹೆಡ್ ನಲ್ಲಿ ಮತ್ತಷ್ಟು ಗಪ್ರಗ ಗಳ ಪಟ್ಟಿಯನ್ನು ನನ್ನ ಮುಂದೆ ತಂದಿರಿಸಿದ. ಹಾಗೇ ಓದುತ್ತಾ ಹೋದೆ.

- ನಗರದ ಘನತ್ಯಾಜ್ಯವನ್ನು ಸುಡುವ ಉಪಕರಣ: ಕಸಧ್ವಂಸಕ
- ನದಿಯನ್ನು ಉಳಿಸಲು ಆಂದೋಲನ ಮಾಡಿದಾಗ 'ನದಿ ನಮನ ದಿನ'
- ಪತ್ರಿಕೆಯಲ್ಲಿ ದಿನನಿತ್ಯದ ಅಂಕಣ: ಸುಡೋಕು ಡೋಸು
- ಬಪ್ಪಿ ಲಹಿರಿ ಬಗೆಗಿನ ಲೇಖನಕ್ಕೆ ಶೀರ್ಷಿಕೆ – ಸದಾ ಕನಕದಾಸ
- ಕೊಲೆಸ್ಟರಾಲ್ ಪರೀಕ್ಷಾ ಕೇಂದ್ರ : ನೆಣಗಣನೆ
- ಬೇಟೆಯಾಡಲು ಪ್ರಶಸ್ತ ಪ್ರದೇಶ : ಶಿಕಾರಿ ಕಾಶಿ
- ನಾಟಕದ ಹೆಸರುಗಳು : 'ಸದಾ ಉದಾಸ' , 'ಗಲಿಬಿಲಿಗ'

● ಶಾಲೆಯಲ್ಲಿ ವ್ಯಾಕರಣ ಜ್ಞಾನ ಸುಧಾರಿಸಲು ಒಂದು ಇಡೀ ತಿಂಗಳು : ಸಮಾಸಮಾಸ

● ತುಂಬ ದಿನ ಬಾಳಿಕೆ ಬರುವ ಅಡಕೆಗೊಂದು ಬ್ರಾಂಡ್ ನೇಮ್ : ಕೆಡದಡಕೆ

● ಫಿಸಿಯೋ ಕೆಂದ್ರದ ಬೈ ಲೈನ್: "ದಿನಾ ಮುಲಾಮು ನಾದಿ ; ಆರೋಗ್ಯ ಗಳಿಸಿ"

● ಲಿಕ್ಕರ್ ಬಿಸಿನೆಸ್ : ಮದ್ಯ ಉದ್ಯಮ

"ನಿಮಗೇನು ಬೇಕೆಂದು ತಿಳಿಸಿದರೆ ಅದಕ್ಕೆ ಸರಿಯಾದ ಗಪ್ರಗವನ್ನು ರಚಿಸಿ ಕೊಡುತ್ತೇನೆ. ನಿಮ್ಮವರಾದರೆ ಒಳ್ಳೆ ಡಿಸ್ಕೌಂಟ್ ಕೂಡ ಕೊಡೋಣ ಸರ್."ಎಂದ.

ಪರವಾಗಿಲ್ಲ, ನಮಗೆ ಇಂಥವೆಲ್ಲಾ ಹೊಳೆದೇ ಇರೋಲ್ಲ. ಈ ಭೂಮಿಯ ಮೇಲೆ ಎಂತೆಂಥ ಬಿಜಿನೆಸ್‌ಗಳು ಇರುತ್ತವೋ ಕಾಣೆ! ಕನ್ನಡ ಭಾಷೆ ಉಳಿಸಿ, ಬೆಳೆಸಿ ಎಂದು ಸುಮ್ಮನೇ ಮಾತನಾಡುವುದರ ಬದಲು ಇದು ಎಷ್ಟು ಉತ್ತಮ. ಹಾಗೆ ನೋಡಿದರೆ ಇದೂ ಕನ್ನಡ ಸೇವೆ ಅಲ್ಲವೇ? ಎಂದು ಯೋಚಿಸುತ್ತಲೇ ಶ್ರೀನಿವಾಸ್‌ಗೆ ಅಭಿನಂದನೆ ಹೇಳಿ ಹೊರಬಂದು ಸ್ಕೂಟರ್ ಹತ್ತಿದೆ.

■

